ನವೆಂಬರ್ 30

## ಪಂದ್ಯದಲ್ಲಿ!

ಬೆಳಿಗ್ಗೆ : ಯೆಹೆ. 37,38,39
ಸಂಜೆ : 2 ಪೇತ್ರ 2

"ಹೋರಾಡುವವರೆಲ್ಲರೂ ಎಲ್ಲಾ ವಿಷಯಗಳಲ್ಲಿ ಮಿತವಾಗಿರುತ್ತಾರೆ" (1 ಕೊರಿಂ.9:25).

ಅಪೊ. ಪೌಲನು ಕ್ರೈಸ್ತ ಜೀವಿತವನ್ನು ಒಂದು ಓಟದ ಪಂದ್ಯಕ್ಕೆ ಹೋಲಿಸುತ್ತಾನೆ. ಕ್ರೀಡಾಂಗಣದಲ್ಲಿ ಓಡುವದಕ್ಕೆ ಗೊತ್ತಾದವರೆಲ್ಲರೂ ಓಡುತ್ತಾರಾದರೂ, ಒಬ್ಬನು ಮಾತ್ರ ಬಿರುದನ್ನು ಹೊಂದುತ್ತಾನೆ ಎಂಬುದು ನಿಮಗೆ ತಿಳಿಯದೋ? ಅವರಂತೆ ನೀವೂ ಬಿರುದನ್ನು ಪಡೆದುಕೊಳ್ಳಬೇಕೆಂದು ಓಡಿರಿ ( 1 ಕೊರಿಂ.9:24) ಎಂದು ಹೇಳುತ್ತಾನೆ.

ಅಪೊ. ಪೌಲನು ಇಚ್ಛಾನಿಗ್ರಹದಲ್ಲಿ ಇತರರಿಗೆ ಮಾದರಿಯಾಗಿ ಕಾಣಲು ತೀರ್ಮಾನಿಸಿದನು. ಇತರರನ್ನು ಹೋರಾಟಕ್ಕೆ ಕರೆದ ಮೇಲೆ ನಾನೇ ಅಯೋಗ್ಯನೆನಿಸಿಕೊಂಡೇನೋ ಎಂಬ ಭಯದಿಂದ ನನ್ನ ಮೈಯನ್ನು ಜಜ್ಜಿ ಸ್ವಾಧೀನ ಪಡಿಸಿಕೊಳ್ಳುತ್ತೇನೆ (1 ಕೊರಿಂ. 9:27) ಎಂದು ಹೇಳುವನು. ದೊಡ್ಡ ಹಡಗು ಸಾವಿರಾರು ಪ್ರಯಾಣಿಕರನ್ನೂ, ಸರಕುಗಳನ್ನೂ ಹೊತ್ತು ಸಮುದ್ರದಲ್ಲಿ ವೇಗವಾಗಿ ಸಾಗುತ್ತದೆ. ಆದರೆ ಆ ಹಡಗಿನಲ್ಲಿ ಒಂದು ಸಣ್ಣ ರಂಧ್ರವಾದರೆ, ನೀರು ಒಳಗೆ ನುಗ್ಗಿ ಇಡೀ ಹಡಗನ್ನೇ ಮುಳುಗಿಸಿಬಿಡುವದು. ಹಾಗೆಯೇ ಒಬ್ಬ ವಿಶ್ವಾಸಿಯು ಪಾಪಕ್ಕೂ ಬೇಡದ ಸಂಬಂಧಗಳಿಗೂ, ಕರ್ತನಿಗೆ ಮೆಚ್ಚಿಕೆಯಲ್ಲದ ಕಾರ್ಯಗಳಿಗೂ ಸ್ಥಳಕೊಟ್ಟರೆ, ಅವನ ಆತ್ಮೀಕ ಜೀವಿತವೇ ಮುಳುಗಿಹೋಗುವದು. ಇಚ್ಛೆಗಳಿಗೆ ಸ್ಥಳ ಕೊಟ್ಟ ಸಂಸೋನ ಮಹಾ ಬಲಶಾಲಿಯಾಗಿದ್ದರೂ ಕೂಡ ಬಿದ್ದುಹೋದನಲ್ಲವೇ? ಕಣ್ಣಿನಾಶೆಯಿಂದ ಸೇವೆಯ ದರ್ಶನವನ್ನು ಕಳೆದುಕೊಂಡನು. ಅಭಿಷೇಕವನ್ನು ಕಳೆದುಕೊಂಡು ಕೂದಲು ಕತ್ತರಿಸಲ್ಪಟ್ಟು ಫಿಲಿಷ್ಟಿಯರ ಸೆರೆಯಾಳಾದನು. ದೇವ ಬಲವನ್ನು ಕಳೆದುಕೊಂಡು ಸೆರೆಮನೆಯಲ್ಲಿ ಹಿಟ್ಟು ಬೀಸಿದನು. ಮೀನು ಸಮುದ್ರದ ಉಪ್ಪುನೀರಿನಲ್ಲಿದ್ದರೂ, ಜೀವವಿರುವವರೆಗೂ ಅದರೊಳಗೆ ಹೋಗದಂತೆ ರಕ್ಷಿಸಿಕೊಳ್ಳುವದು. ತಾವರೆ ನೀರಿನಲ್ಲಿ ಬೆಳೆದರೂ ಅದರ ಎಲೆ ನೀರು ತನ್ನ ಮೇಲೆ ನಿಲ್ಲಲು ಆಸ್ಪದ ಕೊಡುವದಿಲ್ಲ.

ದೇವಮಕ್ಕಳೇ, ನಿಮ್ಮ ಜೀವಿತದಲ್ಲಿ ಪಾಪಗಳು, ಇಚ್ಛೆಗಳು, ಅಪ್ಪಳಿಸುವಾಗ ಕೂಡಲೆ ಅದನ್ನು ಅಡಗಿಸಿರಿ. ನಿಮ್ಮನ್ನು ದೇವ ಸಮ್ಮುಖದಲ್ಲಿ ಪರೀಕ್ಷಿಸಿಕೊಂಡು ಕ್ರಮಪಡಿಸಿಕೊಳ್ಳಬೇಕಾದ್ದನ್ನು ಕ್ರಮಪಡಿಸಿಕೊಳ್ಳಿರಿ.

*ನೆನಪಿಗೆ : "ಲೋಕವೂ ಅದರ ಆಶೆಯೂ ಗತಿಸಿಹೋಗುತ್ತವೆ; ಆದರೆ ದೇವರ ಚಿತ್ತವನ್ನು ನೆರವೇರಿಸುವವನು ಎಂದೆಂದಿಗೂ ಇರುವನು" (1 ಯೋಹಾ. 2:17).*



# ಅನುದಿನದ ಆಹಾರ

## ANUDHINADA AHARA - November 2014

ನವೆಂಬರ್ – 2014

ಮರ 15 ಹಣ್ಣು 11 TREE 15 FRUIT 11

## ಪ್ರಾರ್ಥಿಸಲು ಕಲಿಸಿಕೊಡು!

"ಪರಲೋಕದಲ್ಲಿರುವ ನಮ್ಮ ತಂದೆಯೇ, ನಿನ್ನ ನಾಮವು ಪರಿಶುದ್ಧವೆಂದು ಎಣಿಸಲ್ಪಡಲಿ. ನಿನ್ನ ರಾಜ್ಯವು ಬರಲಿ, ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ. ನಮ್ಮ ಅನುದಿನದ ಆಹಾರವನ್ನು ಈ ಹೊತ್ತೂ ದಯಪಾಲಿಸು. ನಮಗೆ ತಪ್ಪು ಮಾಡಿದವರನ್ನು ನಾವು ಕ್ಷಮಿಸಿದಂತೆ ನಮ್ಮ ತಪ್ಪುಗಳನ್ನು ಕ್ಷಮಿಸು. ನಮ್ಮನ್ನು ಶೋಧನೆಯೊಳಗೆ ಸೇರಿಸದೆ ಕೇಡಿನಿಂದ ನಮ್ಮನ್ನು ತಪ್ಪಿಸು" (ಮತ್ತಾ. 6:10–13).

ಒಮ್ಮೆ ಯೇಸು ಕ್ರಿಸ್ತನು ಒಂದು ಸ್ಥಳದಲ್ಲಿ ಪ್ರಾರ್ಥನೆ ಮಾಡಿ ಮುಗಿಸಿದಾಗ, ಆತನ ದೀರ್ಘವಾದ ಪ್ರಾರ್ಥನೆಯನ್ನು ಗಮನಿಸುತ್ತಿದ್ದ ಒಬ್ಬ ಶಿಷ್ಯನು ಕರ್ತನ ಬಳಿ ತಮಗೂ ಪ್ರಾರ್ಥನೆ ಮಾಡುವದನ್ನು ಕಲಿಸಿಕೊಡಬೇಕೆಂದು ಕೇಳಿದನು. ಆ ಸಮಯದಲ್ಲಿ ಕರ್ತನು ಮೇಲ್ಕಂಡ ಪ್ರಾರ್ಥನೆಯ ಮಾದರಿಯನ್ನು ತನ್ನ ಶಿಷ್ಯರಿಗೆ ಕಲಿಸಿಕೊಟ್ಟನು. ಈ ಪ್ರಾರ್ಥನೆಯನ್ನು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು.

1. ದೇವರನ್ನು ಆಮಂತ್ರಿಸುವ ಕರೆ.
2. ದೇವರನ್ನೇ ಆಶ್ರಯಿಸುವುದು, ಕರ್ತನ ನಾಮ, ಕರ್ತನ ರಾಜ್ಯ, ಕರ್ತನ ಚಿತ್ತ.
3. ನಮಗೆ ಸಂಬಂಧಪಟ್ಟವುಗಳು : ಅನುದಿನದ ಆಹಾರ, ಪಾಪಕ್ಷಮೆ, ಶೋಧನೆಯಲ್ಲಿ ಜಯ.
4. ದೇವಾರಾಧನೆ : ಆತನ ರಾಜ್ಯವೂ, ಬಲವೂ, ಮಹಿಮೆಯೂ.

ಪ್ರಾರ್ಥಿಸುವಾಗ ಒಂದನ್ನು ನೀವು ಸ್ಪಷ್ಟವಾಗಿ ಅರಿತುಕೊಳ್ಳಬೇಕು. ನೀವು ಭೂಮಿಯಲ್ಲಿ ಬದುಕಿದ್ದರೂ, ಪರಲೋಕ ಕುಟುಂಬದಲ್ಲಿರುವಿರಿ. ಕರ್ತನು ನಿಮ್ಮ ಪರಮ ತಂದೆ, ಆತನು ಕನಿಕರವೂ, ಪ್ರೀತಿಯೂ ಉಳ್ಳ ತಂದೆಯಾಗಿರುವನು. ಆತನನ್ನು ಅಪ್ಪಾ ತಂದೆಯೇ ಎಂದು ಕರೆಯುವಾಗೆಲ್ಲಾ ಆತನು ನಿಮ್ಮ ಪ್ರಾರ್ಥನೆಯನ್ನು ಕೇಳುವನು. ಆತನನ್ನು ಅಪ್ಪಾ ತಂದೆಯೇ ಎಂದು ಕರೆಯುವ ಪುತ್ರಸ್ವೀಕಾರ ಆತ್ಮವನ್ನು ನಿಮಗೆ ನೀಡಿರುವನು (ರೋಮಾ. 8:15).

ಆತನು ತಂದೆ, ನಾವು ಆತನ ಮಕ್ಕಳು ಎಂಬ ಬಾಂಧವ್ಯವೇ ನಮ್ಮನ್ನು ಪ್ರಾರ್ಥಿಸಲು ಪ್ರೇರೇಪಿಸುವಂಥದ್ದು. ಯಾರ್‍ಯಾರು ಆತನನ್ನು ಅಂಗೀಕರಿಸಿದರೋ, ಅವರಿಗೆ ದೇವರ ಮಕ್ಕಳಾಗುವ

ಅಧಿಕಾರ ಕೊಟ್ಟನು" (ಯೋಹಾ. 1:12). ನೀವು ಕರ್ತನ ಕುಟುಂಬದಲ್ಲಿ ಹುಟ್ಟಿರುವಿರಾ? ಕರ್ತನಿಗೂ ನಿಮಗೂ ಇರುವ ಬಾಂಧವ್ಯ, ತಂದೆಗೂ, ಮಗುವಿಗೂ ಇರುವಂಥದ್ದಾಗಿದೆಯಾ? ಎಂದು ಪರೀಕ್ಷಿಸಿ ನೋಡಿರಿ. ಕೆಲವರು ಅನಾಥರಂತೆ, ಭಿಕ್ಷುಕರಂತೆ, ಕೆಲವರು ಅನ್ಯರಂತೆ, ಪ್ರಾರ್ಥಿಸುವರು. ನೀವು ಪುತ್ರ ಸ್ವೀಕಾರದ ಆತ್ಮದಿಂದಲೂ ಕೂಡಿದವರಾಗಿ ಪ್ರಾರ್ಥಿಸುವಿರಾ?

ಈ ಅಖಿಲಾಂಡದಲ್ಲಿ (Universe) ಮೂರು ಮುಖ್ಯವಾದ ಭಾಗಗಳಿರುವವು. 1. ಪರಲೋಕ. ಇಲ್ಲಿ ದೇವದೂತರು ಕೆರೂಬಿಗಳೂ ಸೆರಾಫಿಗಳೂ ಇರುವರು. ಕರ್ತನು ಉನ್ನತದಲ್ಲಿರುವ ಸಕಲ ಆಶೀರ್ವಾದಗಳಿಂದ ಆಶೀರ್ವದಿಸಿರುವನು. ಆತ್ಮೀಕವಾದ ಸಕಲ ಆಶೀರ್ವಾದಗಳನ್ನು ನೀಡಿರುವನು.

2. ಅದೇ ವೇಳೆಯಲ್ಲಿ ಭೂಮಿಯ ಕೆಳಗೆ ಪಾತಾಳ ಇರುವದು. ಅಗ್ನಿಯೂ, ಗಂಧಕವೂ ಉರಿಯುವ ಕಡಲೂ ಇರುವದು. ಅದು ಸೈತಾನನಿಗೂ ಅವನ ದೂತರಿಗೂ ಸಿದ್ಧಮಾಡಿರುವ ಸ್ಥಳ (ಮತ್ತಾ. 25:41).

3. ಆದರೆ ಭೂಮಿಯನ್ನು ಕರ್ತನು ನಮಗೆಂದು ಸಿದ್ಧಪಡಿಸಿದನು. ಆರು ದಿನಗಳಲ್ಲಿ ಸೃಷ್ಟಿಸಲ್ಪಟ್ಟ ಈ ಜಗತ್ತು ಎಷ್ಟು ಸುಂದರವಾದದ್ದು, ಅದ್ಭುತವಾದದ್ದು. ಆತನು ಜೀವಿಸಿದ ಈ ಭೂಮಿಯಲ್ಲಿ ಜೀವಿಸುವಂತೆ ಒಂದು ಅವಕಾಶವನ್ನು ನಿಮಗೆ ಕೊಟ್ಟಿರುವನು. ಒಳ್ಳೆಯ ಶರೀರವನ್ನು ಸೃಷ್ಟಿಸಿಕೊಟ್ಟಿರುವನು. ಆತನು ನಮಗೆ ಕುರುಬನಾಗಿರುವನು. ನಾವು ಆತನ ಕುರಿಗಳಾಗಿರುವೆವು. ಆತನು ದ್ರಾಕ್ಷೆ ಬಳ್ಳಿಯಾಗಿರುವನು. ನಾವು ಕೊಂಬೆಗಳಾಗಿರುವೆವು. ಆತನು ತಲೆಯಾಗಿರುವನು. ನಾವು ಆತನ ಶರೀರದಲ್ಲಿ ಅಂಗಗಳಾಗಿರುವೆವು. ಆತನು ಕಟ್ಟಡದ ಮೂಲೆಕಲ್ಲಾಗಿರುವನು. ನಾವು ಆತನ ಮೇಲೆ ಕಟ್ಟಲ್ಪಟ್ಟು ಎಬ್ಬಿಸುವ ಜೀವವುಳ್ಳ ಕಲ್ಲುಗಳಾಗಿರುವೆವು. ಆತನು ಪರಲೋಕದ ತಂದೆಯಾಗಿರುವನು. ನಾವು ಭೂಮಿಯಲ್ಲಿ ಆತನ ಮಕ್ಕಳಾಗಿರುವೆವು.

ಪ್ರಾರ್ಥನೆ ಎಂಬುದು ನಮಗೆ ಉಸಿರಿನಂತಿರುವದು. ಹೃದಯದ ಮಿಡಿತದಂತೆ ಇರುವದು. ಬೆನ್ನೆಲುಬಿನಂತಿರುವದು. ಹೇಗೆ ಒಂದು ಕಟ್ಟಡಕ್ಕೆ ಅಸ್ತಿವಾರ ಅಗತ್ಯವೋ, ಅದರಂತೆ ನಿಮ್ಮ ಆತ್ಮೀಕ ಜೀವಿತಕ್ಕೆ ಪ್ರಾರ್ಥನೆ ಬಹು ಅಗತ್ಯ. ಪ್ರಾರ್ಥನೆಯಲ್ಲಿ ನೀವು ಪರಲೋಕದ ತಂದೆಯೊಂದಿಗೆ ಆಳವಾದ ಅನ್ಯೋನ್ಯತೆಯನ್ನು ಪಡೆದುಕೊಳ್ಳುವಿರಿ. ಪ್ರಪಂಚದಲ್ಲಿ ಪಾಪವು ನುಸುಳುವದಕ್ಕೆ ಮೊದಲು ದೇವರು ತಾನೇ ಮನುಷ್ಯನೊಂದಿಗೆ ಅನ್ಯೋನ್ಯತೆಯಲ್ಲಿರಲು ಪರಲೋಕದಿಂದ ಇಳಿದುಬಂದನು. ಪಾಪವು ಪ್ರವೇಶಿಸಿದ ನಂತರ ದೇವರೊಂದಿಗೆ ಅನ್ಯೋನ್ಯತೆಯನ್ನು ಮನುಷ್ಯನು ಕಳೆದುಕೊಂಡೆನು. ಈಗಲಾದರೋ, ನಮ್ಮ ಪ್ರಾರ್ಥನೆಯ ಮೂಲಕ ಪರಲೋಕದಲ್ಲಿರುವ ದೇವರೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಳ್ಳುವೆವು. ಪ್ರಾರ್ಥನೆಯ ಸಮಯದಲ್ಲಿ ನಮ್ಮ ಚಿಂತೆಗಳು, ಭಾರಗಳು, ಕಣ್ಣೀರು ಎಲ್ಲವನ್ನೂ ಕರ್ತನ ಪಾದದಲ್ಲಿ ಇಳಿಸುವೆವು. ನಮ್ಮ ಪ್ರೀತಿಯನ್ನು, ಕೃತಜ್ಞತೆಯನ್ನು ಸ್ತೋತ್ರದೊಡನೆ ಆತನಿಗೆ ತಿಳಿಯಪಡಿಸುತ್ತೇವೆ. "ಯಾವ ಸಂಬಂಧವಾಗಿಯೂ ಚಿಂತೆ ಮಾಡದೆ



ಸರ್ವ ವಿಷಯದಲ್ಲಿ ದೇವರ ಮುಂದೆ ಕೃತಜ್ಞತಾಸ್ತುತಿಯನ್ನೂ, ಪ್ರಾರ್ಥನೆ ವಿಜ್ಞಾಪನೆಗಳನ್ನೂ ಮಾಡುತ್ತಾ ನಿಮಗೆ ಬೇಕಾದದ್ದನ್ನು ತಿಳಿಯಪಡಿಸಿರಿ. ಆಗ ಎಲ್ಲಾ ಗ್ರಹಿಕೆಯನ್ನು ಮೀರುವ ದೇವಶಾಂತಿಯು ನಿಮ್ಮ ಹೃದಯಗಳನ್ನೂ ಯೋಚನೆಗಳನ್ನೂ ಕ್ರಿಸ್ತ ಯೇಸುವಿನಲ್ಲಿ ಕಾಯುವದು" (ಫಿಲಿ. 4:6,7) ಎಂದು ಸತ್ಯವೇದ ಹೇಳುತ್ತದೆ.

ಪ್ರಾರ್ಥನೆಯಲ್ಲಿ ಕರ್ತನೊಂದಿಗೆ ಮನಬಿಚ್ಚಿ ಮಾತನಾಡಿರಿ. ನಿಮ್ಮ ಬೇಡಿಕೆಗಳು ಸ್ಪಷ್ಟವಾಗಿರಲಿ. ಗಿಳಿಪಾಠದಂತೆ ಪ್ರಾರ್ಥಿಸುವದು ಬೇಡ. ಪ್ರಾರ್ಥನೆಯ ಮೂಲಕವಾಗಿಯೇ ನೀವು ಸೈತಾನನನ್ನು ಜಯಿಸಲು ಸಾಧ್ಯ. ಪ್ರಾರ್ಥಿಸುವಾಗ ವ್ಯಾಧಿಗಳು ನೀಗುವವು, ಶಾಪಗಳು ಮುರಿಯಲ್ಪಡುವವು. ಮಾರಾದ ಕಹಿ ಮಧುರವಾಗುವದು. ನಿಮಗಾಗಿ ಮಾತ್ರವಲ್ಲ, ಇತರರಿಗಾಗಿಯೂ ಪ್ರಾರ್ಥಿಸುವ ಹಂಗಿನಲ್ಲಿರುವಿರಿ. ಒಬ್ಬರಿಗೊಬ್ಬರು ಪ್ರಾರ್ಥಿಸಿರಿ ಎಂದು ಕ್ರಿಸ್ತನು ಹೇಳಿರುವನಲ್ಲವೇ!

## ಒಂದೇ ಸಾಕಲ್ಲವೆ?

ಸುಪ್ರಸಿದ್ಧ ಪಿಟೀಲುವಾದಕನೊಬ್ಬನು, ಒಮ್ಮೆ ಒಂದು ದೊಡ್ಡ ಸಂಗೀತ ಕಛೇರಿಯಲ್ಲಿ ಪಿಟೀಲು ನುಡಿಸುತ್ತಿದ್ದನು. ಇದ್ದಕ್ಕಿದ್ದಂತೆ ಪಿಟೀಲಿನ ಮೂರು ತಂತಿಗಳು ಒಂದಾದ ಮೇಲೆ ಒಂದರಂತೆ ಕಿತ್ತುಹೋದವು. ಆದರೆ ಆ ಪಿಟೀಲು ವಿದ್ವಾಂಸನು ಸೋತುಹೋಗಲಿಲ್ಲ. ತನ್ನ ವಿದ್ವತ್ತು, ಚಾತುರ್ಯ ಎಲ್ಲವನ್ನೂ ಉಪಯೋಗಿಸಿ ಉಳಿದ ಒಂದೇ ತಂತಿಯಿಂದ ಬಹಳ ಚೆನ್ನಾಗಿ ಪಿಟೀಲನ್ನು ಬಾರಿಸಿ ಕಛೇರಿಯನ್ನು ಮುಗಿಸಿದನು. ಒಬ್ಬ ಪ್ರಾರ್ಥನಾವೀರನು ಸಾಕು, ಒಬ್ಬ ಗೊಲ್ಯಾತನನ್ನು ಬೀಳಿಸಲು. ದಾವೀದನು ಸಾವಿರ ಕಲ್ಲುಗಳಿಂದಲ್ಲ, ಒಂದೇ ಒಂದು ಕಲ್ಲಿನಿಂದ ಗೊಲ್ಯಾತನನ್ನು ಕೊಂದನು. ಐದು ಸಾವಿರ ಜನರನ್ನು ಪೋಷಿಸಲು ಮುಂದೆ ಬಂದ ಒಬ್ಬ ಹುಡುಗನ ತ್ಯಾಗದ ಹೃದಯ ಸಾಕಾಗಿತ್ತು.

ದೇವರಿಗೆ ನಿಮ್ಮ ಅಗತ್ಯವಿದೆ! ನಿಮ್ಮ ಅಂತರ್ಯದಲ್ಲಿ ಕರ್ತನ ಕಲ್ವಾರಿ ಪ್ರೀತಿ ತುಂಬಲು ಸ್ಥಳಕೊಡಿರಿ. ಆತನು ನಿಮ್ಮ ಮೂಲಕ ದೊಡ್ಡ ಕಾರ್ಯಗಳನ್ನು ಮಾಡುವನು. ಸೆರೆಮನೆಯ ಯಜಮಾನನು ರಕ್ಷಿಸಲ್ಪಟ್ಟಾಗ ಅವನ ಮನೆಯವರೆಲ್ಲಾ ರಕ್ಷಿಸಲ್ಪಟ್ಟಂತೆ, ನೀವು ಒಬ್ಬರು ರಕ್ಷಣೆ ಹೊಂದಿದರೆ ನಿಮ್ಮ ಕುಟುಂಬ ರಕ್ಷಿಸಲ್ಪಡುವದು.

## ವಾಗ್ದಾನ ವಚನ – ಜ್ಞಾನೋ. 3:26

**"ಯೆಹೋವನು ನಿನ್ನ ಭರವಸಕ್ಕೆ ಆಧಾರನಾಗಿದ್ದು ನಿನ್ನ ಕಾಲು ಪಾಶಕ್ಕೆ ಸಿಕ್ಕದಂತೆ ನಿನ್ನನ್ನು ಕಾಪಾಡುವನು"**

# ಪರಲೋಕದ ವರದಿ

ಒಂದು ಸಾರಿ ಸುಪ್ರಸಿದ್ಧ ದೇವಸೇವಕರಾದ ಟಿ.ಎಲ್.ಆಸ್ ಬಾರ್ನ್ಸ್‌ರವರು ಹೇರಳವಾದ ಜನರ ಮಧ್ಯದಲ್ಲಿ ನಿಂತು ಇಂದು ನಿಮ್ಮಲ್ಲಿ ಹಲವಾರು ವ್ಯಾಧಿಗಳು ಇರಬಹುದು. ನೋವುಗಳು ಇರಬಹುದು. ಆದರೆ ನಿಮ್ಮ ಅಂಗಗಳು ಹೇಳುವದನ್ನು ನಂಬಬೇಡಿ. ವೈದ್ಯಕೀಯ ವರದಿಗಳು ಹೇಳುವದನ್ನು ನಂಬಬೇಡಿ. ಸತ್ಯವೇದ ವಾಕ್ಯಗಳನ್ನು ನಂಬಿರಿ. ಯೇಸುಕ್ರಿಸ್ತನನ್ನು ಆಶ್ರಯಿಸಿಕೊಳ್ಳಿರಿ. ಆತನು ನಿಮ್ಮನ್ನು ಗುಣಪಡಿಸಲು ಶಕ್ತನು ಎಂದು ಪ್ರಾರ್ಥಿಸಿದಾಗ ಅಲ್ಲಿದ್ದ ಅನೇಕರು ಗುಣ ಹೊಂದಿದರು. ಜನರು ಕರ್ತನೇ ದೇವರೆಂದು ನಂಬಿ ಆತನನ್ನು ಅಂಗೀಕರಿಸಿದರು.

ಇಂದು ಒಂದು ವೇಳೆ ನೀವು ನಿಮಗಾಗುತ್ತಿರುವ ನೋವಿನಲ್ಲಿ ವೈದ್ಯಕೀಯ ವರದಿಯಲ್ಲಿ ಕಳವಳಕ್ಕೆ ಒಳಗಾಗಿರಬಹುದು. ಒಮ್ಮೆ ಪರಲೋಕವನ್ನು ದೃಷ್ಟಿಸಿ ನೋಡಿರಿ. ಅಲ್ಲಿನ ವರದಿ ಹೇಳುತ್ತದೆ. "ಯೇಸುಕ್ರಿಸ್ತನ ಬಾಸುಂಡೆಗಳಿಂದ ನಿನಗೆ ಗುಣವಾಯಿತು" ಎಂದು. ಆತನ ಗಾಯಗಳಿಂದ ಹೊರಸೂಸುತ್ತಿರುವ ಸ್ವಸ್ಥತೆಯ ಕಿರಣಗಳನ್ನು ಕಾಣಬಹುದು. ಅವುಗಳನ್ನು ನಂಬಿಕೆಯಿಂದ ಸ್ವೀಕರಿಸಿರಿ, ಸ್ವಸ್ಥತೆಯನ್ನು ಹೊಂದಿಕೊಳ್ಳಿರಿ.

# ನಿಮ್ಮ ಚಿಂತನೆಗಾಗಿ-1

* ಸಂತೋಷಕರವಾದ ಬೆಳಗಿನ ವೇಳೆಯನ್ನು ಕಾಣುವ ಮೊದಲು ಕತ್ತಲೆ ಆವರಿಸಿಕೊಂಡಿರುವ ರಾತ್ರಿಯನ್ನು ದಾಟುವದು ಅನಿವಾರ್ಯ.
* ಜೀವನದ ಸಮಸ್ಯೆಗಳ ಹೊರೆಗಳು ನಿನ್ನ ಹೆಗಲನ್ನು ಅಧಿಕವಾಗಿ ಒತ್ತುವಾಗ ಸ್ವಾಮಿಯು ತನ್ನ ಹೆಗಲ ಮೇಲೆ ನಿನ್ನನ್ನು ಹೊರುವದನ್ನು ಅರಿತುಕೊ.
* ನಿನ್ನ ಜೀವಿತದ ಕ್ರಿಯಾಶೀಲತೆಯು ನಿನ್ನ ಸಂಬಂಧವು ಯಾರೊಂದಿಗಿದೆ ಎಂಬದನ್ನು ಪ್ರಕಟಿಸುತ್ತದೆ.
* ಅನೀತಿಯನ್ನು ಸಹಿಸುವವನು ಹೇಡಿಯಂತೆ ಎಣಿಸಲ್ಪಟ್ಟರೂ ಅಂತ್ಯದಲ್ಲಿ ವೀರನಂತೆ ಎದ್ದು ನಿಲ್ಲುವನು.
* ಕಹಿಯಾದ ಔಷಧವು ಅನಾರೋಗ್ಯವನ್ನು ಸರಿಪಡಿಸಬಲ್ಲದು. ಕಹಿಯಾದ ಕಷ್ಟಾನುಭವಗಳು ಜೀವಿತವನ್ನು ಕ್ರಮಪಡಿಸುವದು.
* ನಿಜವಾದ ಪ್ರೀತಿಯನ್ನು ಬೇರೆಯವರಲ್ಲಿ ಹುಡುಕಿ ನಿರಾಶನಾಗಬೇಡ. ನಿನ್ನಲ್ಲಿ ಅದನ್ನು ಹುಡುಕುವವರನ್ನು ನಿರಾಶೆಗೊಳಿಸಬೇಡ.



# ಕರ್ತನ ನಾಮವು ಬಲವಾದ ಬುರುಜು

ರಿಚರ್ಡ್ ಉಂಬ್ರಾಡ್ ಎಂಬ ಭಕ್ತನು ಸುಮಾರು 14 ವರ್ಷಗಳು ಸೆರೆವಾಸ ಮಾಡಬೇಕಾಯಿತು. ಹಸಿವೆಯಿಂದ ಬಳಲಿದಾಗ ನಿದ್ರೆಯಿಲ್ಲದೆ ಪರಿತಪಿಸಿದಾಗ ಮೂರ್ಛೆಗೊಂಡ ವೇಳೆಗಳಲ್ಲಿ, ಅವರು ಹೇಳುತ್ತಾರೆ ಯೇಸುಕ್ರಿಸ್ತನ ನಾಮ ಒಂದೇ. ಆಸೆಗಳನ್ನೂ ಇಚ್ಛೆಗಳನ್ನೂ ಉದ್ರೇಕಗೊಳಿಸುವ ಔಷಧಿಗಳನ್ನೂ, ಮಾದಕ ವಸ್ತುಗಳನ್ನೂ, ಬಲವಂತದಿಂದ ಸೇವಿಸಬೇಕಾದ ಸಮಯಗಳಲ್ಲಿ ಬುದ್ಧಿಯನ್ನೇ ಪಲ್ಲಟಗೊಳಿಸುವ ಯಂತ್ರಗಳನ್ನು ನಮ್ಮ ತಲೆಗೆ ಅಳವಡಿಸಿದಾಗಲೂ, ಯೇಸುವಿನ ನಾಮವು ನಮ್ಮ ಉಸಿರಿನೊಂದಿಗೆ ಉಸಿರಾಗಿ, ಹೃದಯದ ಬಡಿತದೊಂದಿಗೆ ಒಂದಾಗಿದ್ದರಿಂದಲೇ ನಾವು ಜಯಿಸಲು ಸಾಧ್ಯವಾಯಿತು. ವೈರಿಯ ಆಯುಧಗಳನ್ನು ಎದುರಿಸಬಲ್ಲಂಥ ದೈವೀಕ ಬಲವನ್ನು ಯೇಸುವಿನ ನಾಮವು ನಮಗೆ ಉಣಿಸುತ್ತಿದ್ದಿತು ಎಂದು ಹೇಳಿದ್ದಾರೆ. ಹೌದು, "ಕರ್ತನ ನಾಮವು ಬಲವಾದ ಬುರುಜು. ಶಿಷ್ಟನು ಅದರೊಳಗೆ ಓಡಿಹೋಗಿ ಭದ್ರವಾಗಿರುವನು" (ಜ್ಞಾನೋ. 18:10).

# ಆತನು ನಿಮಗೋಸ್ಕರ ಚಿಂತಿಸುತ್ತಾನೆ

ಒಂದು ಬೆಟ್ಟದ ತಪ್ಪಲ್ಲಲಿದ್ದ ಗುಹೆಯಲ್ಲಿ ಒಬ್ಬ ಸನ್ಯಾಸಿ ವಾಸವಾಗಿದ್ದರು. ಅವರು ತಾನು ವಾಸಿಸುತ್ತಿದ್ದ ಕಡೆ ಒಂದು ಸಸಿಯನ್ನು ನೆಟ್ಟು ಬೆಳೆಸಿದರೆ ಅದು ಒಳ್ಳೆಯ ನೆರಳನ್ನು ಕೊಡುವದು ಎಂದು ಎಣಿಸಿ ಒಂದು ಸಸಿಯನ್ನು ತಂದು ನೆಟ್ಟರು. ಅದಕ್ಕೆ ಮಳೆ ಬಿದ್ದರೆ ಗಿಡ ಚೆನ್ನಾಗಿ ಬೆಳೆಯುವದೆಂದು ಎಣಿಸಿ ಮಳೆಗಾಗಿ ಪ್ರಾರ್ಥಿಸಿದರು. ದೊಡ್ಡ ಮಳೆ ಸುರಿಯಿತು. ಈಗ ಒಳ್ಳೆ ಬಿಸಿಲು ಬಂದರೆ ಗಿಡ ಚೆನ್ನಾಗಿ ಬೆಳೆಯುವದೆಂದು ಎಣಿಸಿ ಬಿಸಿಲಿಗಾಗಿ ಶ್ರದ್ಧೆಯಿಂದ ಪ್ರಾರ್ಥಿಸಿದರು. ಬಿಸಿಲು ಜೋರಾಗಿ ಬಂದಿತು. ಈಗ ಮಂಜು ಸುರಿದರೆ ಗಿಡದ ಬೇರಿಗೆ ಒಳ್ಳೆಯದೆಂದು ಬೆಳಗಿನಲ್ಲಿ ಮಂಜು ಸುರಿಯಲಿ ಎಂದು ಪ್ರಾರ್ಥಿಸಿದರು. ಅಧಿಕವಾದ ಬಿಸಿಲು, ಮಂಜು, ಮಳೆ ಬಿದ್ದಿದ್ದರ ಫಲವಾಗಿ ಗಿಡ ಒಣಗಲಾರಂಭಿಸಿತು. ಒಣಗಿಯೇ ಹೋಯಿತು.

ಆಗ ಇವರು ಬಹಳ ವ್ಯಸನದಿಂದ ಮತ್ತೊಬ್ಬ ಸನ್ಯಾಸಿಯ ಬಳಿಗೆ ಬಂದರು. ಅಲ್ಲಿ ಅವರ ಗಿಡ ಬಹಳ ಚೆನ್ನಾಗಿ ಬೆಳೆದಿತ್ತು. ಆ ಸನ್ಯಾಸಿ ಇವರನ್ನು ಕುರಿತು ನನ್ನ ಸ್ನೇಹಿತನೇ ನಾನು ಗಿಡವನ್ನು ನೆಟ್ಟು ದೇವರ ಕಾಪಾಡುವಿಕೆಗೆ ಬಿಟ್ಟುಕೊಟ್ಟೆನು. ಅದಕ್ಕಾಗಿ ನಾನು ಚಿಂತೆ ಮಾಡಲಿಲ್ಲ. ಗಿಡವನ್ನು ಸೃಷ್ಟಿಸಿದಾತನಿಗೆ ಬೆಳೆಸಲು ಗೊತ್ತಿಲ್ಲವೇ? ದೇವರಿಗೆ ಎಂದೆಂದೂ ನಿಬಂಧನೆ ಹಾಕಬಾರದು ಎಂದು ಹೇಳಿದರು. ಅದರಂತೆ ನಿಮ್ಮ ಚಿಂತನೆಗಳನ್ನು, ಸಮಸ್ಯೆಗಳನ್ನು ನೀನು ಹೊತ್ತಿದ್ದು ಸಾಕು. ನಿನ್ನ ಹೊರೆಗಳನ್ನು ನೀನೇ ಹೊತ್ತುಕೊಂಡಿರುವದರಿಂದ ಕರ್ತನು ಅದನ್ನು ವಹಿಸಿಕೊಳ್ಳಲಾರನು. ನಿನ್ನ ಹೊರೆಯನ್ನು ಆತನ ಮೇಲೆ ಇಟ್ಟುಬಿಡು. ಆತನೇ ನಿನಗಾಗಿ ಚಿಂತಿಸುತ್ತಾನೆ.

## ಕ್ರೈಸ್ತ ವಿಶ್ವಾಸಿಯು ಹೇಗೆ ನಡೆದುಕೊಳ್ಳಬೇಕು

* ನಂಬುವವರಾಗಿ ನಡೆದುಕೊಳ್ಳಬೇಕು – 2 ಕೊರಿಂ. 5:7
* ಪವಿತ್ರಾತ್ಮನನ್ನು ಅನುಸರಿಸಿ ನಡೆಯಬೇಕು – ಗಲಾ. 5:16
* ಪ್ರೀತಿಯಿಂದ ನಡೆದುಕೊಳ್ಳಬೇಕು – ಎಫೆ. 5:2
* ವಿನಯವುಳ್ಳವರಾಗಿ ನಡೆದುಕೊಳ್ಳಬೇಕು – ಎಫೆ. 5:21
* ಯೋಗ್ಯರಾಗಿ ನಡೆದುಕೊಳ್ಳಬೇಕು – ಎಫೆ. 4:1
* ಕ್ರಿಸ್ತನು ನಡೆದಂತೆ ನಡೆಯುವವರಾಗಿರಬೇಕು – 1 ಯೋಹಾ. 2:6
* ಬೆಳಕಿನವರಾಗಿ ನಡೆದುಕೊಳ್ಳಬೇಕು – 1 ಯೋಹಾ. 1:7
* ಯಾವಾಗಲೂ ಕರ್ತನಲ್ಲಿ ಸಂತೋಷಿಸುವವರಾಗಿರಬೇಕು – ಫಿಲಿ. 4:4

## ಆತ್ಮಗಳನ್ನು ಗೆಲ್ಲಲಾಗದಕ್ಕೆ ಕಾರಣಗಳು

* ಆತ್ಮಗಳ ಭಾರ ಇಲ್ಲದಿರುವದು – ರೋಮಾ. 11:14
* ಕರ್ತನ ಭಯ ನಮಗಿಲ್ಲದಿರುವದು – 2 ಕೊರಿ. 5:11
* ಆತ್ಮಗಳ ಬೆಲೆಯನ್ನು ತಿಳಿಯದಿರುವದು – ಮತ್ತಾ. 16:26
* ನಾವು ತೀರಿಸಬೇಕಾದ ಋಣವನ್ನು ಅರಿಯದಿರುವದು – ರೋಮಾ. 1:14
* ಗೆದ್ದುಕೊಳ್ಳಲು ಬೇಕಾದ ಕ್ರಯವನ್ನು ಕಟ್ಟದೇ ಇರುವದು – 1 ಕೊರಿಂ. 10:33

## ನಿಮ್ಮ ಚಿಂತನೆಗಾಗಿ-2

* ಕಾಲಗಳು ಗಾಯಗಳನ್ನು ಮಾಗಿಸುವದು ಮಾತ್ರವಲ್ಲ ಹೊಸ ಕಾರ್ಯಗಳನ್ನು ಒಪ್ಪಿಕೊಳ್ಳುವ ಪಕ್ವವನ್ನೂ ಕೊಡುವದು.
* ತನ್ನನ್ನು ತಾನೇ ಅಧಿಕವಾಗಿ ಹೆಚ್ಚಿಸಿಕೊಳ್ಳುವವನು ಬೀಳುವ ಸ್ಥಿತಿಗೆ ಬಂದಿದ್ದಾನೆ. ತಗ್ಗಿಸಿಕೊಳ್ಳುವವನಾದರೋ ಉನ್ನತಿಗೆ ದೂರವಾದವನಲ್ಲ.
* ಕಹಿಯಾದ ಕಳೆದುಹೋದ ಕಾಲವನ್ನು ಮರೆತುಬಿಡು. ಆದರೆ ಅದರ ಮೂಲಕ ಕಲಿತುಕೊಂಡ ಪಾಠವನ್ನು ಮರೆಯದಿರು.
* ಅದ್ಭುತವು ದೇವರನ್ನು ನಂಬಲು ಸಹಾಯಿಸುವದು, ಅರ್ಪಣೆಯು ತನ್ನನ್ನು ದೇವರ ನಂಬಿಕೆಗೆ ಪಾತ್ರನನ್ನಾಗಿಸುವದು.
* ಇಂದು ನಿನ್ನ ಸೋಲುಗಳನ್ನು ಕರ್ತನ ಬಳಿ ಹೇಳಿಕೋ, ನಾಳೆ ನಿನ್ನ ಗೆಲುವುಗಳನ್ನು ಇತರರ ಬಳಿ ಹೇಳುವಿ.



## ಉಪವಾಸ ಪ್ರಾರ್ಥನೆಯ ಪರಿಣಾಮ

* ದೀನ ಮನಸ್ಸು ಉಂಟಾಗುವದು – 1 ಅರಸು. 21:27
* ಕೇಡುಗಳು ತಪ್ಪಿಹೋಗುವದು – ಯೋನ. 3:7–10
* ಜಯ ದೊರೆಯುವದು – 2 ಪೂರ್ವ. 20:3–24
* ಸೇವೆಗೆ ಕರೆ ನೀಡುವದು – ಅಪೊ. 13:3
* ಬಹಳ ತಾಳ್ಮೆ ದೊರೆಯುವದು – ವಿಮೋ. 34:28
* ಶೋಧನೆಯನ್ನು ಜಯಿಸುವದು – ಲೂಕ. 4:2–4
* ಬೆಳಕು ಉದಯದಂತೆ ಬೇಧಿಸಿಕೊಂಡು ಬರುವದು – ಯೆಶಾ. 58:8
* ಕ್ಷೇಮವು ಬೇಗನೆ ವಿಕಸಿಸುವದು – ಯೆಶಾ. 58:9

## 1 ಯೋಹಾನ 1:7

ಇಂಗ್ಲೆಂಡಿನ ಒಬ್ಬ ಮುದುಕನು ಕಠಿಣವಾದ ರೋಗದಲ್ಲಿ ಬಿದ್ದು ಲಂಡನ್ ಪಟ್ಟಣದ ಆಸ್ಪತ್ರೆಯಲ್ಲಿ ಸೇರಿಸಲ್ಪಟ್ಟನು. ಅವನ ರೋಗ ಗುಣವಾಗದೆ ಸಾಯುವಂತಾದನು. ವೈದ್ಯರು ಬದುಕುವ ಅವಕಾಶವಿಲ್ಲವೆಂದುಬಿಟ್ಟರು. ಈ ಸ್ಥಿತಿಯಲ್ಲಿದ್ದಾಗ ಅವನ ಮೊಮ್ಮಗಳು ಜೋನ್ ಮೇರಿ ಎಂಬ ಚಿಕ್ಕ ಹುಡುಗಿ, ದಿನವೂ ಆಸ್ಪತ್ರೆಗೆ ಹೋಗಿ ಅಜ್ಜನ ಬಳಿ ಕುಳಿತು, ದೇವರ ವಾಕ್ಯವನ್ನು ಓದುತ್ತಿದ್ದಳು. ಒಂದು ದಿನ ಆಕೆ, ಜೋರಾಗಿ 1 ಯೋಹಾನ 1ನೇ ಅಧ್ಯಾಯವನ್ನು ಓದುತ್ತಾ ಯೇಸುವಿನ ರಕ್ತವು ಸಕಲ ಪಾಪಗಳನ್ನು ನಿವಾರಿಸಿ ನಮ್ಮನ್ನು ಶುದ್ಧಮಾಡುತ್ತದೆ ಎಂಬ 7ನೇ ವಾಕ್ಯವನ್ನು ಓದಿದಳು. ಮರಣದ ಹಾಸಿಗೆಯಲ್ಲಿದ್ದ ವೃದ್ಧನಿಗೆ ಈ ಮಾತು ಮುಟ್ಟಿತು. ಅವನು ಮೆಲ್ಲಗೆ ತಲೆ ಎತ್ತಿ ಮಗುವೇ, ಕಡೆ ಮಾತನ್ನು ಮತ್ತೊಮ್ಮೆ ಓದು ಅಂದನು. ಅವಳು ಓದಿದಳು. ನನ್ನ ಬೆರಳನ್ನು ಆ ವಾಕ್ಯದ ಮೇಲೆ ಇಟ್ಟು ಗಟ್ಟಿಯಾಗಿ ಓದು ಅಂದನು. ಅವಳು ಹಾಗೆಯೇ ಮಾಡಿದಳು. ಸ್ವಲ್ಪ ಹೊತ್ತು ಮೌನವಾಗಿದ್ದ ಅವನ ಕಣ್ಣಿನಿಂದ ನೀರು ಇಳಿಯುತ್ತಿತ್ತು. ಕರ್ತನ ಕ್ರೂಜೆಯನ್ನೂ ಆತನ ರಕ್ತದ ಬೆಲೆಯನ್ನೂ ತಾನು ಮಾಡಿದ ಪಾಪಗಳನ್ನೂ ನೆನೆಸಿಕೊಂಡನು. ಕೆಲ ನಿಮಿಷಗಳ ನಂತರ ಅವನ ಮುಖಕ್ಕೆ ಒಂದು ಪ್ರಕಾಶ ಬಂದಿತು. ಪುನಃ ಅವಳ ಬಳಿ ಮಗುವೇ, ಆ ವಾಕ್ಯವನ್ನು ಗಟ್ಟಿಯಾಗಿ ಮೂರು ಸಾರಿ ಓದಿ ಹೇಳು ಅಂದನು. ಅವಳು ಓದಿದಳು. ನಂತರ ಸ್ವಲ್ಪ ಚೇತರಿಸಿಕೊಂಡು ಆ ಚಿಕ್ಕ ಹುಡುಗಿಯ ಬಳಿ ನಾನು ಹೇಗೆ ಸತ್ತೆನೆಂದು ಯಾರು ಕೇಳಿದರೂ ಕರ್ತನಾದ ಯೇಸುವಿನ ರಕ್ತವು ಸಕಲ ಪಾಪಗಳಿಂದ ನನ್ನನ್ನು ಶುದ್ಧೀಕರಿಸಿತು ಎಂಬ ವಿಶ್ವಾಸದಿಂದ ಸಂತೋಷಭರಿತನಾಗಿ ತೀರಿಕೊಂಡನು ಎಂದು ಹೇಳಿ ಮತ್ತು ನೀನು ಇದೇ ರೀತಿ ಇತರರ ಮುಂದೆಯೂ ಯಾವಾಗಲೂ ದೇವರ ವಾಕ್ಯವನ್ನು ಓದುತ್ತಿರು ಎಂದು ಹೇಳಿ ಕಣ್ಣು ಮುಚ್ಚಿದನು.

# ನಮ್ಮ ದೇಶದ ಸುದ್ದಿಗಳು
## (INDIAN NEWS)

**1. ಮಕ್ಕಳ ಮರಣ ಪ್ರಮಾಣ ಏರಿಕೆ : ಭಾರತ ನಂ.1 :**

ಭಾರತದಲ್ಲಿ ಮಕ್ಕಳ ಮರಣ ಪ್ರಮಾಣ 1990 ರಿಂದ ಈಚೆಗೆ ಕಡಿಮೆಯಾಗಿದ್ದರೂ 2013ರಲ್ಲಿ ದಾಖಲೆ ಸಂಖ್ಯೆಯ ಐದು ವರ್ಷದೊಳಗಿನ ಮಕ್ಕಳು ಮೃತಪಟ್ಟಿದ್ದು ಈ ಮೂಲಕ ಭಾರತ ವಿಶ್ವದಲ್ಲೇ ನಂ.1 ಸ್ಥಾನದಲ್ಲಿದೆ ಎಂದು ವಿಶ್ವಸಂಸ್ಥೆ ವರದಿ ಹೇಳಿದೆ.

**2. ಹೊಸ ಸರ್ಕಾರದಿಂದ ಪೂರಕ ಪರಿಸರ : ರಾಷ್ಟ್ರಪತಿ ಮೆಚ್ಚುಗೆ :**

ಭಾರತದ ಹೊಸ ಸರ್ಕಾರವು ಆರ್ಥಿಕ ಸುಸ್ಥಿರತೆ ಕ್ರಮ ಕೈಗೊಂಡಿರುವದಲ್ಲದೆ ಜಾಗತಿಕವಾಗಿ ದೇಶಕ್ಕೆ ಪೂರಕವಾದ ವಾತಾವರಣವನ್ನು ಕಲ್ಪಿಸಿದೆ ಎಂದು ರಾಷ್ಟ್ರಪತಿ ಪ್ರಣವ್ ಮುಖರ್ಜಿಯವರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

**3. ವಿಶ್ವ ವಿ.ವಿ.ಗಳ ರ್‍ಯಾಂಕಿಂಗ್ : ಭಾರತ ಹಿಂದೆ :**

ಜಾಗತಿಕ ವಿಶ್ವವಿದ್ಯಾಲಯಗಳ ಶ್ರೇಯಾಂಕ ಪಟ್ಟಿ ಬಿಡುಗಡೆಗೊಂಡಿದ್ದು ಮೆಸ್ಸಾಚುಸೆಟ್ಸ್ ತಾಂತ್ರಿಕ ವಿ.ವಿ. ಮೊದಲ ಸ್ಥಾನ ಪಡೆದಿದೆ. ಅಗ್ರ 200 ಶ್ರೇಯಾಂಕದಲ್ಲಿ ಭಾರತದ ಯಾವ ವಿಶ್ವವಿದ್ಯಾಲಯಗಳೂ ಸ್ಥಾನವನ್ನು ಪಡೆದಿಲ್ಲ.

**4. ಮಾದಕ ವಸ್ತುಗಳ ಪಟ್ಟಿಯಲ್ಲಿ ಭಾರತ :**

ಭಾರತ, ಪಾಕಿಸ್ತಾನ ಸೇರಿದಂತೆ 22 ಪ್ರಮುಖ ದೇಶಗಳು ಅಕ್ರಮವಾಗಿ ಮಾದಕ ವಸ್ತುಗಳನ್ನು ತಯಾರಿಸುತ್ತಿವೆ ಮತ್ತು ಕಳ್ಳ ಸಾಗಣೆ ಮಾಡುತ್ತಿವೆ ಎಂದು ಅಮೆರಿಕ ಅಧ್ಯಕ್ಷ ಬರಾಕ್ ಒಬಾಮ ಗುರುತಿಸಿದ್ದಾರೆ.

**5. ತುಮಕೂರು ಬಳಿ ಮೆಗಾ ಫುಡ್‌ಪಾರ್ಕ್ :**

ತುಮಕೂರು ನಗರದ ಹೊರವಲಯದ ವಸಂತ ನರಸಾಪುರ ಕೈಗಾರಿಕ ಪ್ರದೇಶದಲ್ಲಿ ದೇಶದ ಭವಿಷ್ಯದ ಉದ್ಯಮವೆಂದೇ ಪರಿಗಣಿಸಲಾಗಿರುವ ಆಹಾರ ಸಂರಕ್ಷಣಾ ಉದ್ಯಮಕ್ಕೆ ಸಂಬಂಧಿಸಿದ ಬೃಹತ್ ಫುಡ್‌ಪಾರ್ಕ್ ಆರಂಭವಾಗುತ್ತಿದೆ. ಇದು ಏಷ್ಯಾದಲ್ಲೇ ಅತಿ ದೊಡ್ಡದು ಎನ್ನಲಾಗಿದೆ. ದೇಶದಲ್ಲಿ ಇಂತಹ 30 ಪಾರ್ಕ್‌ಗಳನ್ನು ಸ್ಥಾಪಿಸುವ ಉದ್ದೇಶವನ್ನು ಕೇಂದ್ರ ಸರ್ಕಾರ ಹೊಂದಿದೆ.



# ಹೊರ ದೇಶದ ಸುದ್ದಿಗಳು
## (FOREIGN NEWS)

**1. ಐರ್ಲೆಂಡ್-ಬ್ರಿಟನ್‌ಗೆ ಒಂದೇ ವೀಸಾ :**

ಡಿಸೆಂಬರ್‌ನಿಂದ ಭಾರತೀಯರು ಒಂದೇ ವೀಸಾದಲ್ಲಿ ಐರ್ಲೆಂಡ್ ಮತ್ತು ಬ್ರಿಟನ್‌ಗೆ ತೆರಳಲು ಸಾಧ್ಯವಾಗಲಿದೆ. ಬ್ರಿಟನ್ ಅಥವಾ ಐರ್ಲೆಂಡ್ ಎರಡರಲ್ಲಿ ಒಂದು ದೇಶದಲ್ಲ ವೀಸಾ ಇದ್ದರೂ, ಇನ್ನೊಂದು ದೇಶಕ್ಕೆ ಹೋಗಬಹುದು. ಇಂಥ ಒಪ್ಪಂದಕ್ಕೆ ಬ್ರಿಟನ್ ಗೃಹ ಕಾರ್ಯದರ್ಶಿ ತೆರೆಸಾ ಮೇ ಮತ್ತು ಐರ್ಲೆಂಡ್ ಸಚಿವ ಫ್ರಾನ್ಸಿಸ್ ಫಿಟ್ಜರಾಲ್ಡ್ ಅವರು ಸಹಿ ಹಾಕಿದ್ದಾರೆ.

**2. ಐಸಿಸ್ ದಮನಕ್ಕೆ 67 ಸಾವಿರ ಕೋಟಿ :**

ಸಿರಿಯಾ ಮತ್ತು ಇರಾಕ್‌ನಲ್ಲಿ ಬೇರು ಗಟ್ಟಿಗೊಳಿಸುತ್ತಿರುವ ಐಸಿಸ್ ಉಗ್ರರ ದಮನಕ್ಕೆ ಅಮೆರಿಕ ಇದುವರೆಗೆ 67.6 ಸಾವಿರ ಕೋಟಿ ರೂ. ವ್ಯಯಿಸಿದೆ. ಪೆಂಟಗನ್ ಬಿಡುಗಡೆ ಮಾಡಿರುವ ಅಂಕಿ-ಅಂಶಗಳಿಂದ ಈ ಮಾಹಿತಿ ತಿಳಿದುಬಂದಿದೆ.

**3. ಪಾಸ್‌ವರ್ಡ್‌ಗೆ ತುಟಿ ಚಾಲನೆಯೇ ಸಾಕು :**

ತುಟಿಯ ಚಲನೆಯನ್ನೇ ಪಾಸ್‌ವರ್ಡ್ ಆಗಿ ಪರಿಗಣಿಸುವ ಕಂಪ್ಯೂಟರ್‌ಗಳು ಶೀಘ್ರದಲ್ಲಿಯೇ ಅಭಿವೃದ್ಧಿಗೊಳ್ಳಬಹುದು. ಮಾತನಾಡುವಾಗ ಪ್ರತಿಯೊಬ್ಬರ ತುಟಿ ಚಲನೆ ಭಿನ್ನವಾಗಿರುತ್ತದೆ. ತುಟಿ ಚಲನೆಯ ಭಿನ್ನತೆಯನ್ನೇ ಆಧರಿಸಿ ಕಂಪ್ಯೂಟರ್‌ಗಳಿಗೆ 'ಲಾಗ್ ಆನ್' ಆಗುವ ಹೊಸ ವಿಧಾನವನ್ನು ಶೋಧಿಸುವದಕ್ಕೆ ಸಾಧ್ಯವಿದೆ ಎಂಬುದನ್ನು ಸಂಶೋಧಕರು ಕಂಡುಕೊಂಡಿದ್ದಾರೆ.

**4. ನಾಸಾದಲ್ಲಿ ಶೇ.36ರಷ್ಟು ಭಾರತೀಯರು!**

ವಿಶ್ವವಿಖ್ಯಾತ ಬಾಹ್ಯಾಕಾಶ ಸಂಸ್ಥೆ ನಾಸಾದಲ್ಲಿ ವಿಜ್ಞಾನಿಗಳು ಬಹುಪಾಲು ಭಾರತೀಯರೇ. ಇಂದು ನಾಸಾದ ಅತ್ಯಮೂಲ್ಯ, ಹೆಮ್ಮೆಯ ಸಂಶೋಧನೆಗಳ ಹಿಂದೆ ಭಾರತೀಯರ ಪರಿಶ್ರಮ ದೊಡ್ಡದು. ನಾಸಾದಲ್ಲಿರುವ 10ರಲ್ಲಿ 4 ಮಂದಿ ಭಾರತೀಯ ವಿಜ್ಞಾನಿಗಳಿದ್ದಾರೆ. ಒಟ್ಟಾರೆ ಭಾರತೀಯರ ವಿಜ್ಞಾನಿಗಳ ಸಂಖ್ಯೆ ಶೇ.12ರಷ್ಟಿದ್ದರೆ, ಶೇ. 18ರಷ್ಟು ಮಂದಿ ಡಾಕ್ಟರೇಟ್ ಪದವಿ ಪಡೆದವರು.

**5. ಹಾಂಕಾಂಗ್ : ಪ್ರಜಾಪ್ರಭುತ್ವ ಪರ ಚಳವಳಿ :**

ಚೀನಾದ ವಿಶೇಷ ಆಡಳಿತಾತ್ಮಕ ಪ್ರದೇಶ ಎಂದು ಅಧಿಕೃತವಾಗಿ ಗುರುತಿಸಲಾಗುವ ಹಾಂಕಾಂಗ್ ನಗರವು ಚೀನಾದ ದಕ್ಷಿಣ ಕರಾವಳಿಯಲ್ಲಿ ಇರುವ ಸ್ವಾಯತ್ತ ಪ್ರದೇಶವಾಗಿದೆ. ಹಾಂಕಾಂಗ್‌ನಲ್ಲಿ ಪ್ರಜಾಪ್ರಭುತ್ವ ಪರ ವಿದ್ಯಾರ್ಥಿಗಳ ಪ್ರತಿಭಟನೆ ದಿನೇ ದಿನೇ ತೀವ್ರಗೊಂಡು ಚೀನಾ ಸರ್ಕಾರಕ್ಕೆ ದೊಡ್ಡ ತಲೆನೋವಾಗಿ ಪರಿಣಮಿಸಿದೆ.

## ಜ್ಞಾನಿಗಳು ಯಾರು

* ಉಚಿತಾಲೋಚನೆಯನ್ನು ಗಮನಿಸುವವನು – ಜ್ಞಾನೋ. 12:15
* ಆತ್ಮಗಳನ್ನು ಆಕರ್ಷಿಸುವವನು – ಜ್ಞಾನೋ. 11:30
* ಕೇಡಿಗೆ ಭಯಪಟ್ಟು ಓರೆಯಾಗುವವನು – ಜ್ಞಾನೋ. 14:16
* ತಿಳುವಳಿಕೆಯನ್ನು ಹುಡುಕುವವನು – ಜ್ಞಾನೋ. 18:15
* ಕರ್ತನ ಕೃಪಾಕಾರ್ಯಗಳನ್ನು ಗಮನಿಸಿ ಗ್ರಹಿಸಿಕೊಳ್ಳುವವನು – ಕೀರ್ತನೆ. 107:43

## ಏಕಾಂತ ಪ್ರಾರ್ಥನೆ

ಒಂದು ಗುಂಪಾಗಿ, ಒಂದು ಕುಟುಂಬವಾಗಿ, ಒಂದು ಸಭೆಯಾಗಿ ಸೇರಿ ಪ್ರಾರ್ಥಿಸುವದು ವಿಹಿತವೇ ಆದಾಗ್ಯೂ ಏಕಾಂತವಾಗಿ ಪ್ರಾರ್ಥಿಸುವದು ರಮ್ಯವಾದದು. ಏಕಾಂತ ಪ್ರಾರ್ಥನೆಯನ್ನು ಅನುಭವವಾಗಿಸಿಕೊಳ್ಳದಿದ್ದಲ್ಲಿ ಕರ್ತನನ್ನು ಅರಿಯಲು ಆತನ ಚಿತ್ತವನ್ನು ಅರಿತು ಬಾಳಲು ಸಾಧ್ಯವಿಲ್ಲ.

ಮೋಶೆ, ದಾವೀದ, ದಾನಿಯೇಲ ಮುಂತಾದ ಭಕ್ತರು ಏಕಾಂತ ಪ್ರಾರ್ಥನಾವೀರರಾಗಿದ್ದರು. ಅರಣ್ಯ ಪ್ರದೇಶಗಳಿಗೆ ಹೋಗಿ (ಯೇಸು) ದೇವರ ಪ್ರಾರ್ಥನೆಯನ್ನು ಮಾಡುತ್ತಿದ್ದನು (ಲೂಕ.5:16).

ಪ್ರಾರ್ಥನೆ ಎಂಬದು ಕಡ್ಡಾಯವಲ್ಲ. ಅದು ದೇವರೊಂದಿಗಿನ ಅನ್ಯೋನ್ಯತೆಯನ್ನು ಅನುಭವಿಸಲು, ದೇವ ಬಲದಲ್ಲಿ ಹೆಚ್ಚಲು ಸಾಧನವಾಗಿದೆ. ಏಕಾಂತ ಪ್ರಾರ್ಥನೆಯಲ್ಲಿ ಕರ್ತನ ಐಕ್ಯವನ್ನು ಅನುಭವಿಸಬಹುದು, ಪ್ರಾರ್ಥನೆಯಲ್ಲಿ ಮನಸ್ಸನ್ನು ಕ್ರಮಪಡಿಸಿಕೊಂಡು ಶುದ್ಧ ಹೃದಯವನ್ನು ಹೊಂದುವದಕ್ಕೆ ಅದು ತೆರೆದ ಮಾರ್ಗ.

ಕೂಡಿ ಪ್ರಾರ್ಥಿಸಿದರೆ ಕೋಟಿ ಪುಣ್ಯ ಹೊಂದಬಹುದಾದರೂ, ಏಕಾಂತ ಪ್ರಾರ್ಥನೆಯಲ್ಲಿ ಅನುಭವಿಸುವ ರಮ್ಯತೆ ಮನೋಹರವಾದದ್ದು. ಏಕಾಂತವಾಗಿ ಪ್ರಾರ್ಥಿಸುವದು ಸ್ವಲ್ಪ ಕಠಿಣವೇ ಆದಾಗ್ಯೂ ಆ ಏಕಾಂತ ಪ್ರಾರ್ಥನೆ ಎಂಬ ಅಸ್ತಿವಾರದ ಮೇಲೆ ನಮ್ಮ ಆತ್ಮೀಕ ಜೀವಿತ ಎಂಬ ಕಟ್ಟಡ ದೃಢವಾಗಿ ನಿಲ್ಲುತ್ತದೆ ಎಂಬುದು ಸತ್ಯ.

ಏಕಾಂತ ಪ್ರಾರ್ಥನೆಯಲ್ಲಿ ಹನ್ನಳಂತೆ ಹೃದಯವನ್ನು ಹೊಯ್ದು ಪ್ರಾರ್ಥಿಸಬಹುದು. ನಮ್ಮ ಮನಸ್ಸಿನಲ್ಲಿ ಬರುವದನ್ನೆಲ್ಲಾ ಕರ್ತನ ಪಾದದಲ್ಲಿಟ್ಟು, ತೆರೆದ ಹೃದಯದಿಂದ ಪ್ರಾರ್ಥಿಸಬಹುದು. ಏಕಾಂತ ಪ್ರಾರ್ಥನೆಯ ಸಮಯದಲ್ಲಿ ಕರ್ತನ ಮೆಲುನುಡಿಯನ್ನು ಕಾದಿದ್ದು ಆಲಿಸಬಹುದು.

ಕುಟುಂಬ ಪ್ರಾರ್ಥನೆ ಮುಖ್ಯವೆಂದೆಣಿಸಿ ಅಲ್ಲಿಗೇ ನಿಲ್ಲಿಸಿಬಿಡದೆ ಏಕಾಂತ ಪ್ರಾರ್ಥನೆಯಲ್ಲಿ ಕರ್ತನ ಅನ್ಯೋನ್ಯತೆಯಲ್ಲಿ ಬೆಳೆಯಲು ಒಪ್ಪಿಸಿಕೊಡೋಣ.



| ನವೆಂಬರ್ 1 | ಆತ್ಮನ ಫಲಗಳು! | ಬೆಳಿಗ್ಗೆ : ಯೆರೆ. 24,25,26<br>ಸಂಜೆ : ತೀತ 2 |
|---|---|---|

ದೇವರಾತ್ಮನಿಂದ ಉಂಟಾಗುವ ಫಲವೇನೆಂದರೆ ಪ್ರೀತಿ, ಸಂತೋಷ, ಸಮಾಧಾನ, ದೀರ್ಘಶಾಂತಿ, ದಯೆ, ಉಪಕಾರ, ನಂಬಿಕೆ, ಸಾಧುತ್ವ, ಶಮೆದಮೆ ಮುಂತಾದವುಗಳೇ (ಗಲಾ. 5:22,23).

ನೀವು ಕರ್ತನಿಗೆ ಮಧುರವಾದ ಸುವಾಸನೆಯುಳ್ಳ ಫಲವನ್ನು ಕೊಡುವವರಾಗಿರಬೇಕು. ಯಾಕೆಂದರೆ, ಕರ್ತನು ಫಲವನ್ನು ಹುಡುಕಿ ಬರುವಾತನು. ಆತ್ಮನ ಫಲಗಳನ್ನು ನಿಮ್ಮಲ್ಲಿ ನಿರೀಕ್ಷಿಸುವನು. ನೀವು ಫಲಕೊಡುವಾಗ ಕರ್ತನ ಅಂತರ್ಯ ಸಂತೋಷಿಸುವದು. ಆತನ ನಾಮವೂ ಮಹಿಮೆಹೊಂದುವದು.

ಪವಿತ್ರಾತ್ಮನಿಂದ ನಿಮಗೆ ಆತ್ಮನ ಫಲಗಳು ದೊರಕುವದು. ಆ ಫಲಗಳು ನಿಮ್ಮೊಳಗೆ ಕ್ರಿಸ್ತನ ಸ್ವಭಾವವನ್ನೂ ಆತನ ಗುಣಾತಿಶಯಗಳನ್ನೂ ತರುವವು. ನೀವು ಕ್ರಿಸ್ತೇಸುವಿನಂತೆ ಮಾರ್ಪಡಬೇಕಿದ್ದಲ್ಲಿ "ದೇವರೇ, ಫಲಭರಿತವಾದ ಜೀವಿತವನ್ನು ನನಗೆ ನೀಡು" ಎಂದು ಕೇಳಿರಿ. ಕೇಳಿರಿ ಕೊಡಲ್ಪಡುವದು ಎಂಬುದು ಕರ್ತನ ವಾಗ್ದಾನವಲ್ಲವೇ! ಅನೇಕರು ಪವಿತ್ರಾತ್ಮನನ್ನು ಕರ್ತನ ಬಳಿ ಕೇಳುತ್ತಾರೆ. ಒಳ್ಳೆಯದು ಅಭಿಷೇಕದಲ್ಲಿ ವೃದ್ಧಿಯಾಗಬೇಕೆಂದು ಉಪವಾಸವಿರುವರು. ಎಲ್ಲವೂ ಒಳ್ಳೆಯದೇ. ಆದರೆ ಆತ್ಮನ ಫಲಗಳು ಮಾತ್ರವೇ ನಿಮ್ಮನ್ನು ಪರಿಶುದ್ಧ ಪಡಿಸುವಂಥದ್ದು. ಕ್ರಿಸ್ತನ ಕಳಂಕವಿಲ್ಲದ ಮದುವಣಗಿತ್ತಿಯಾಗಿ ನಿಲ್ಲಿಸುವಂಥದ್ದು ಒಂದು ನಾಣ್ಯಕ್ಕೆ ಎರಡು ಮುಖ ಇರುವಂತೆ, ಪವಿತ್ರಾತ್ಮನ ಕಾರ್ಯದಲ್ಲೂ ಎರಡು ಭಾಗಗಳುಂಟು. ಒಂದು ಭಾಗದಲ್ಲಿ ವರಗಳು, ಮತ್ತೊಂದು ಭಾಗದಲ್ಲಿ ಫಲಗಳು. ವರಗಳು, ಆತ್ಮಗಳ ಆದಾಯ ಪಡಿಸಲು ಸಹಾಯ ಮಾಡುವದು. ಆದರೆ ಆತ್ಮನ ಫಲಗಳೋ, ನಿಮ್ಮೊಳಗೆ ಯೇಸುಕ್ರಿಸ್ತನ ಸಾರೂಪ್ಯವನ್ನು ತಂದು ಆತನ ಬರೋಣದಲ್ಲಿ ಕಾಣಲ್ಪಡಲು ಸಹಾಯಕವಾಗಿರುವದು. ಒಂದು ಕಡೆ ಆತನ ಸೇವೆಯಲ್ಲಿ ಜಯಹೊಂದಲು ಕರ್ತನೇ ದೇವರೆಂದು ನಿರೂಪಿಸಲು, ಆತ್ಮನ ವರಗಳನ್ನು ನೀಡುವನು. ಮತ್ತೊಂದೆಡೆ ನಿಮ್ಮ ಫಲಭರಿತ ಜೀವಿತದಲ್ಲಿ ಕ್ರಿಸ್ತನನ್ನು ಪ್ರತಿಬಿಂಬಿಸಲು ಆತ್ಮನ ಫಲಗಳನ್ನು ನಿಮಗೆ ನೀಡುವನು.

ದೇವಮಕ್ಕಳೇ, ಆತ್ಮೀಕ ಜೀವಿತಕ್ಕೆ ಆತ್ಮನ ವರಗಳೂ ಬೇಕು, ಆತ್ಮನ ಫಲಗಳೂ ಬೇಕು. ಆದ್ದರಿಂದ ಆತ್ಮನ ವರಗಳನ್ನು ಆತ್ಮನ ಫಲಗಳನ್ನು ಕರ್ತನಲ್ಲಿ ಬೇಡಿ ಪಡೆದುಕೊಳ್ಳಿರಿ. ಜಯಭರಿತವಾದ ಕ್ರಿಸ್ತೀಯ ಜೀವಿತವನ್ನು ನಡೆಸಿ, ನಿತ್ಯರಾಜ್ಯಕ್ಕೆ ಬಾಧ್ಯರಾಗಿರಿ.

*ನೆನಪಿಗೆ : ನೀವು ಹೊರಟುಹೋಗಿ ಫಲಕೊಡುವವರಾಗಬೇಕೆಂತಲೂ, ನೀವು ಕೊಡುವ ಫಲವು ನಿಲ್ಲುವಂಥದಾಗಬೇಕೆಂತಲೂ ನಿಮ್ಮನ್ನು ನೇಮಿಸಿದ್ದೇನೆ (ಯೋಹಾನ. 15:16).*

ನವೆಂಬರ್ 2

## ತಕ್ಕ ಕಾಲದಲ್ಲಿ ಫಲ!

ಬೆಳಿಗ್ಗೆ : ಯೆರೆ. 27,28,29
ಸಂಜೆ : ತೀತ 3

"ಅವನು ನೀರಿನ ಕಾಲಿವೆಗಳ ಬಳಿಯಲ್ಲಿ ಬೆಳೆದಿರುವ ಮರದ ಹಾಗಿರುವನು. ಅಂಥ ಮರವು ತಕ್ಕಕಾಲದಲ್ಲಿ ಫಲಕೊಡುತ್ತದಲ್ಲಾ" (ಕೀರ್ತನೆ 1:3).

ವಿಶ್ವಾಸಿಗಳನ್ನು ಎರಡು ಭಾಗವಾಗಿ ವಿಂಗಡಿಸಬಹುದು. ಒಂದು ಭಾಗದವರು ಆತ್ಮನ ವರ ಆತ್ಮನ ಬಲ ಎಂದು ಕರ್ತನ ಬಳಿ ಕೇಳುತ್ತಲೇ ಇರುತ್ತಾರೆ. ಅದಕ್ಕಾಗಿ ಉಪವಾಸ ಮಾಡುತ್ತಾರೆ. ಪ್ರಾರ್ಥಿಸುತ್ತಾರೆ. ಆದರೆ, ಫಲದಿಂದ ಕೂಡಿದ ಜೀವಿತವನ್ನು ಬಿಟ್ಟುಬಿಡುತ್ತಾರೆ. ಇದರಿಂದ ಫರಿಸಾಯರಾಗಿ ಮಾರ್ಪಡುವರು. ಇನ್ನೊಂದು ಭಾಗದ ವಿಶ್ವಾಸಿಗಳು "ಆತ್ಮನ ಫಲ" ಎಂದು ವರಗಳನ್ನು ಅಸಡ್ಡೆ ಮಾಡಿಬಿಟ್ಟುಬಿಡುವರು. ನಿಮಗೆ ಫಲಗಳೂ ಬೇಕು, ವರಗಳೂ ಬೇಕು. ಎರಡೂ ಸಮನಾಗಿ ಉಪಯೋಗಿಸಲ್ಪಡುವುದಾದರೆ ನೀವು ಎಂದಿಗೂ ಬಿದ್ದುಹೋಗುವದಿಲ್ಲ.

ಅಪೊ. ಪೌಲನು ಕೊರಿಂಥ ಸಭೆಗೆ ಬರೆದ ಮೊದಲನೆ ಪತ್ರಿಕೆಯಲ್ಲಿ ಮೂರು ಮುಖ್ಯವಾದ ಅಧ್ಯಾಯಗಳನ್ನು ಬರೆದಿರುವನು. ಅವು 12, 13, 14ನೇ ಅಧ್ಯಾಯಗಳು, 12ನೇ ಅಧ್ಯಾಯವೂ, 14ನೇ ಅಧ್ಯಾಯವೂ, ಆತ್ಮನ ಒಂಭತ್ತು ವರಗಳನ್ನು ಕುರಿತು ಹೇಳುವದು. ಆದರೆ ಆ ಎರಡು ಅಧ್ಯಾಯಗಳ ನಡುವೆ 13ನೇ ಅಧ್ಯಾಯದಲ್ಲಿ ರುಚಿಕರವಾದ ಆತ್ಮನ ಫಲಗಳಲ್ಲಿ ಪ್ರೀತಿಯನ್ನು ಕುರಿತು ಆತನು ಬರೆದಿರುವನು. ಆದ್ದರಿಂದ ಒಂದನ್ನು ಅಂಗೀಕರಿಸಿ ಒಂದನ್ನು ತಿರಸ್ಕರಿಸದಿರಿ. ಯೇಸುಕ್ರಿಸ್ತನು ತನ್ನ ಪರ್ವತ ಪ್ರಸಂಗದಲ್ಲಿ ಹಲವು ಭಾಗ್ಯವಂತರನ್ನು ಕುರಿತು ಮಾತನಾಡಿದನು. ದಾವೀದನು ಸಹ ಮೊದಲನೇ ಕೀರ್ತನೆಯಲ್ಲಿ ಭಾಗ್ಯಕರವಾದ ಜೀವಿತದ ಕುರಿತು ಬರೆದಿರುವನು. ಯೆಹೋವನ ಧರ್ಮಶಾಸ್ತ್ರದಲ್ಲಿ ಆನಂದ ಪಡುವವನಾಗಿ ಹಗಲಿರುಳು ಅದನ್ನೇ ಧ್ಯಾನಿಸುತ್ತಿರುವವನು ಎಷ್ಟೋ ಧನ್ಯನು ಎಂದು ಹೇಳುತ್ತಾನೆ. ಆ ಭಾಗ್ಯವಂತನ ಬಳಿ ಕರ್ತನು ನಿರೀಕ್ಷಿಸುವದೇನು? ತಕ್ಕ ಕಾಲದಲ್ಲಿ ಫಲಕೊಡುವವನಾಗಿರಬೇಕು. ಎಲೆ ಉದರದ ಮರದಂತಿರಬೇಕು. ಅವನು ಮಾಡುವದೆಲ್ಲಾ ಸಫಲವಾಗಬೇಕು ಎಂಬುದೇ.

ದೇವಮಕ್ಕಳೇ, ಒಂದು ಮರದಲ್ಲಿ ಕೊಂಬೆಗಳು, ಎಲೆಗಳೂ, ಹೂಗಳು, ಹಣ್ಣುಗಳು ಕಾಣುವವು. ಮರವನ್ನು ಕೊಂಬೆಗಳು ಹಿಡಿದಿರುತ್ತವೆ. ಕೊಂಬೆಗಳು ಮರದ ಸಾರವನ್ನು ಹೀರಿಕೊಂಡು ಹೂಬಿಟ್ಟು, ಕಾಯಾಗಿ, ಕಾಯಿ ಮಾಗಿ ರುಚಿಯಾದ ಹಣ್ಣಾಗಿ ಮಾರ್ಪಡುವದು. ಹಾಗೆಯೇ ನೀವೂ ಕರ್ತನೊಂದಿಗೆ ಅನ್ಯೋನ್ಯತೆವುಳ್ಳವರಾಗಿ ಇರುವಿರಾದರೆ ಪವಿತ್ರಾತ್ಮನ ಮೂಲಕ ಉತ್ತಮವಾದ ಫಲಕೊಡುವವರಾಗಿರುವಿರಿ.

*ನೆನಪಿಗೆ : ನೀವು ನನ್ನಲ್ಲಿ ನೆಲೆಗೊಂಡಿರ್ರಿ. ನಾನೂ ನಿಮ್ಮಲ್ಲಿ ನೆಲೆಗೊಂಡಿರುವೆನು. ಕೊಂಬೆಯು ಬಳ್ಳಿಯಲ್ಲಿ ನೆಲೆಗೊಂಡಿರದಿದ್ದರೆ ಹೇಗೆ ತನ್ನಷ್ಟಕ್ಕೆ ತಾನೇ ಫಲಕೊಡಲಾರದೋ, ಹಾಗೆಯೇ ನೀವು ನನ್ನಲ್ಲಿ ನೆಲೆಗೊಂಡಿರದಿದ್ದರೆ ಫಲಕೊಡಲಾರಿರಿ (ಯೋಹಾ. 15:4).*



ನವೆಂಬರ್ 3

## ಒಳ್ಳೇ ಮರದ ಹಣ್ಣುಗಳು!

ಬೆಳಿಗ್ಗೆ : ಯೆರೆ. 30,31
ಸಂಜೆ : ಫಿಲೆಮೋನ 1

"ಒಳ್ಳೇ ಮರಗಳೆಲ್ಲಾ ಒಳ್ಳೇ ಫಲವನ್ನು ಕೊಡುವದು. ಕೆಟ್ಟಮರವು ಕೆಟ್ಟ ಫಲವನ್ನು ಕೊಡುವದು. ಒಳ್ಳೇ ಮರವು ಕೆಟ್ಟ ಫಲವನ್ನು ಕೊಡಲಾರದು" (ಮತ್ತಾ. 7:17,18).

ಮರವನ್ನು ಯೇಸುಕ್ರಿಸ್ತನು ಎರಡು ವಿಧವಾಗಿ ಭಾಗಮಾಡಿದನು. 1. ಒಳ್ಳೆಯ ಮರ, 2. ಕೆಟ್ಟ ಮರ. ಫಲಕೊಡದ ಮುಳ್ಳು ಪೊದೆಯಂಥ ಮರಗಳು. ಒಳ್ಳೆಯ ಮರಗಳನ್ನು ಹಲವರು ತಮ್ಮ ಮನೆಗಳಲ್ಲಿ, ತೋಟಗಳಲ್ಲಿ ಬೆಳೆಸುವರು. ನೆಲವನ್ನು ಹಸನು ಮಾಡಿ, ಕಳೆಗಳನ್ನು ಕಿತ್ತು, ಗೊಬ್ಬರ ಹಾಕಿ ಬೆಳೆಸುವರು. ಆ ಮರದ ಹಣ್ಣನ್ನು ಕಿತ್ತು ತಿನ್ನುವದು, ಮಾರಿ ಲಾಭ ಪಡೆಯುವದು ಅವರಿಗೆ ಬಹಳ ಸಂತೋಷವನ್ನು ಉಂಟುಮಾಡುವದು.

ಅದರಂತೆಯೇ, ಸಭೆಯೆಂಬ ತೋಟದಲ್ಲಿ ನೆಡಲ್ಪಟ್ಟು, ಪವಿತ್ರಾತ್ಮನ ಅಭಿಷೇಕದಿಂದ ನೀರು ಹಾಯಿಸಲ್ಪಡುವ ಮರಗಳಲ್ಲಿರುವ (ವಿಶ್ವಾಸಿಗಳು) ಫಲಗಳು ಎಷ್ಟು ಮಧುರವಾದವುಗಳು! ಅವು ಆತ್ಮನ ಫಲಗಳಾಗಿರುವವು. ಪ್ರಿಯರೇ, ನೀವು ಕರ್ತನ ತೋಟದಲ್ಲಿ ನೆಡಲ್ಪಟ್ಟಿರುವಿರಿ. ಇದು ಫಲವತ್ತಾದ ಭೂಮಿ. ವಾಗ್ದಾನಗಳೂ, ಮಹಿಮೆಯೂ ನಿಮಗೆ ಕೊಡಲ್ಪಟ್ಟಿರುವದು. ಕ್ರೈಸ್ತರಲ್ಲದವರೊಳಗೂ ಕೆಲವು ಒಳ್ಳೆಯ ಗುಣಗಳು ಕಂಡುಬರುವವು. ಒಳ್ಳೆಯ ತಂದೆ ತಾಯಿಗಳು, ಮಕ್ಕಳಿಗೆ ಸನ್ಮಾರ್ಗ ನೀತಿಯನ್ನು ಬೋಧಿಸಿ, ಉತ್ತಮ ಮಾರ್ಗದಲ್ಲಿ ಬೆಳೆಸುವರು. ಒಳ್ಳೆಯ ಸ್ನೇಹಿತರು, ಒಳ್ಳೆಯ ಶಾಲೆ, ಒಳ್ಳೆಯ ಉಪಾಧ್ಯಾಯರು, ಅವರಿಗೆ ಜ್ಞಾನವನ್ನು ಬೋಧಿಸುವರು. ಆದ್ದರಿಂದ ಸ್ವಾಭಾವಿಕವಾಗಿಯೇ ಅಂಥವರು ಸದ್ಗುಣವನ್ನು ಹೊಂದಿದವರಾಗಿರುತ್ತಾರೆ. ಅದು ಸ್ವಭಾವದ ಮೂಲಕವಾದ ಫಲ. ಆದರೆ ಆತ್ಮನ ಫಲ ಎಂಬುದು ಪವಿತ್ರಾತ್ಮ ಅಭಿಷೇಕದ ಮೂಲಕ ಸಿಕ್ಕುವ ಫಲ. ದುರ್ಮಾರ್ಗಿಗಳು ದೇವರಾತ್ಮನ ಮೂಲಕ ಪರಿಶುದ್ಧ ಜನರಾಗಿ ಮಾರ್ಪಡುವರು. ಕಠೋರವಾದ ಹೃದಯವುಳ್ಳವರೂ ಸಹ, ಆತ್ಮನ ಅನುಗ್ರಹದಿಂದ ಮಧುರಭಾವನೆಯುಳ್ಳವರಾಗಿ ಮಾರ್ಪಡುವರು.

ದೇವಮಕ್ಕಳೇ, ಕ್ರಿಸ್ತೇಸುವಿನ ಸ್ವಭಾವ, ಗುಣಾತಿಶಯಗಳು ಪವಿತ್ರಾತ್ಮನ ಮೂಲಕ ನಿಮ್ಮೊಳಗೆ ಬರುವದು. ಆದ್ದರಿಂದ ನಿಮ್ಮಿಂದ ಕರ್ತನು ಹೇರಳವಾದ ಫಲಗಳನ್ನು ನಿರೀಕ್ಷಿಸುವನು. ದೇವರ ವಾಕ್ಯವೆಂಬ ಗೊಬ್ಬರವನ್ನು ಹಾಕಿ, ದೇವನದಿಯಿಂದ ನೀರು ಹಾಯಿಸಿ, ನಿಮ್ಮ ಆತ್ಮೀಕ ಜೀವಿತವನ್ನು ಫಲವತ್ತಾಗಿಸಿರಿ. ಕರ್ತನು ನಿಮ್ಮ ಎಲ್ಲೆಗಳನ್ನು ವಿಸ್ತರಿಸಿ, ನೀವು ಫಲಕೊಡುವಂತೆ ಕಾಪಾಡಿ ನಡೆಸುವನು.

*ನೆನಪಿಗೆ : ನಾನು ದ್ರಾಕ್ಷೇ ಬಳ್ಳಿ, ನೀವು ಕೊಂಬೆಗಳು; ಒಬ್ಬನು ನನ್ನಲ್ಲಿಯೂ, ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ ಅವನೇ ಬಹಳ ಫಲಕೊಡುವನು (ಯೋಹಾ. 15:5).*

ನವೆಂಬರ್ 4

## ಬೀಜಗಳುಳ್ಳ ಫಲಗಳು!

ಬೆಳಿಗ್ಗೆ : ಯೆರೆ. 32,33
ಸಂಜೆ : ಇಬ್ರಿ. 1

"ತಮ್ಮ ತಮ್ಮ ಜಾತಿಗನುಸಾರವಾಗಿ ಬೀಜವುಳ್ಳ ಹಣ್ಣಿನ ಮರಗಳು ಕಾಣಿಸಿದವು. ದೇವರು ಅದನ್ನು ಒಳ್ಳೆಯದೆಂದು ನೋಡಿದನು" (ಆದಿ. 1:12).

ಸೃಷ್ಟಿಕಾರ್ಯದ ಮೂರನೆಯ ದಿನ, ದೇವರು ಫಲಕೊಡುವ ಮರಗಳನ್ನು ಸೃಷ್ಟಿಸಿದನು. ಎಷ್ಟೋ ವಿವಿಧ ರೀತಿಯ ಹಣ್ಣುಗಳು, ಎಷ್ಟೋ ವ್ಯತ್ಯಾಸವಾದ ರುಚಿಗಳು, ದೇವರ ಸೃಷ್ಟಿಯ ಆ ಜ್ಞಾನವನ್ನು ಮಾತಿನಿಂದ ವರ್ಣಿಸಲು ಅಸಾಧ್ಯ.

ಹಣ್ಣು (ಫಲ) ಎಂದು ತೆಗೆದುಕೊಂಡರೆ, ಅದರಲ್ಲಿ ಐದು ಮುಖ್ಯವಾದವುಗಳು ಇರುವವು. ಮೊದಲನೆಯದಾಗಿ, ಹಣ್ಣಿನ ಸುಂದರವಾದ ಆಕಾರ, ಎರಡನೆಯದು ಮನಸ್ಸನ್ನು ಆಕರ್ಷಿಸುವ ಹಣ್ಣಿನ ಪರಿಮಳ, ಮೂರನೆಯದು ಬಾಯಿಗೆ ರುಚಿಯಾದ ಹಣ್ಣಿನ ಸ್ವಾದ, ನಾಲ್ಕನೆಯದಾಗಿ ಹಣ್ಣಿನಲ್ಲಿರುವ ಜೀವಸತ್ವ, ಐದನೆಯದಾಗಿ ಮರದ ಬೀಜಗಳು. ನಮಗೆ ಮಧುರವಾದ ಹಣ್ಣುಗಳನ್ನು ಕೊಡುವದು ಮಾತ್ರವಲ್ಲ, ತನ್ನ ಸಂತತಿಯನ್ನು ಬೀಜಗಳ ಮೂಲಕ ವೃದ್ಧಿಪಡಿಸಿಕೊಳ್ಳುವದರಲ್ಲಿ ಜಾಗ್ರತೆಯುಳ್ಳದಾಗಿರುತ್ತದೆ. ನೀವು ಹಬ್ಬಿ ಹೆಚ್ಚಿರಿ, ಭೂಮಿಯನ್ನು ತುಂಬಿರಿ ಎಂದು ಕರ್ತನು ಮನುಷ್ಯನಿಗೆ ಮಾತ್ರವಲ್ಲ, ಮರಗಳಿಗೂ ಹೇಳಿರುವನು. ಹಬ್ಬಿ, ಹೆಚ್ಚಿರಿ ಎಂದರೆ ಬರೀ ಮಕ್ಕಳನ್ನು ಹೆತ್ತು ಸಂತತಿಯನ್ನು ಬೆಳೆಸುವದು ಮಾತ್ರ ಎಂದು ತಿಳಿಯಬಾರದು. ಆತ್ಮೀಕ ಫಲಗಳನ್ನು ಕೊಡುವಾಗ, ವಿಶ್ವಾಸಿಗಳು ಹೆಚ್ಚುವರು. ನಿಮ್ಮ ಫಲಗಳನ್ನು ಕಂಡು ಅನೇಕರು ಕ್ರಿಸ್ತನ ಬಳಿಗೆ ಬರುವರು. ಒಬ್ಬ ದೇವಮಗುವಿನ ಸಾಕ್ಷಿ ಅನೇಕರನ್ನು ಕ್ರಿಸ್ತನ ಬಳಿಗೆ ನಡೆಸುವದು. ಉದಾಹರಣೆಯಾಗಿ ನೀವು ಯಾವಾಗಲೂ ಸಂತೋಷದಿಂದಲೂ, ನಗುಮುಖದಿಂದಲೂ ಇರುವದರ ರಹಸ್ಯವೇನು ಎಂದು ಇತರರು ಕೇಳುವಾಗ, ನೀವು ನಿಮ್ಮ ರಕ್ಷಣೆಯ ಮೂಲಕ ಪಡೆದಂಥ ರಕ್ಷಣಾನಂದದ ಕುರಿತಾಗಿ ಸಾಕ್ಷಿ ಹೇಳಲು ಅನುಕೂಲವಾಗುವದು. ಇದರ ಮೂಲಕವಾಗಿ ಆತ್ಮಗಳು ರಕ್ಷಿಸಲ್ಪಟ್ಟು, ಆತ್ಮೀಕ ಸಂತತಿ ಹೆಚ್ಚುವದು.

ದೇವಮಕ್ಕಳೇ, ಕರ್ತನು ನಿಮ್ಮನ್ನು ರಕ್ಷಿಸಿ, ಅಭಿಷೇಕಿಸಿರುವದಕ್ಕೆ ಒಂದು ಉದ್ದೇಶ ಉಂಟು. ನೀವು ನಿಮಗಾಗಿ ನಿಮ್ಮಿಷ್ಟದಂತೆ ಜೀವಿಸುವದಕ್ಕಲ್ಲ, ಕರ್ತನು ಹೇಳುತ್ತಾನೆ, "ನೀವು ಹೊರಟು ಹೋಗಿ ಫಲಕೊಡುವವರಾಗಬೇಕೆಂತಲೂ, ನೀವು ಕೊಡುವ ಫಲವು ನಿಲ್ಲುವಂಥದಾಗಬೇಕೆಂತಲೂ ನಿಮ್ಮನ್ನು ನೇಮಿಸಿದ್ದೇನೆ" ಎಂದು (ಯೋಹಾ. 15:16) ಪವಿತ್ರಾತ್ಮನು ನಿಮ್ಮೊಳಗಿದ್ದರೆ ಯಾವ ಸ್ಥಿತಿಗತಿಗಳಲ್ಲಿದ್ದರೂ ನೀವು ಫಲಕೊಡಲು ಸಾಧ್ಯ.

*ನೆನಪಿಗೆ : ಸೇನಾಧೀಶ್ವರನಾದ ಯೆಹೋವನ ದ್ರಾಕ್ಷೆಯ ತೋಟ, ಇಸ್ರಾಯೇಲ್ಯರ ಮನೆತನ, ಯೆಹೂದದ ಜನವೋ ಆತನ ಇಷ್ಟದ ಗಿಡವೇ" (ಯೆಶಾಯ 5:7).*



ನವೆಂಬರ್ 5

## ಜೀವವೃಕ್ಷ!

ಬೆಳಿಗ್ಗೆ : ಯೆರೆ. 34,35,36
ಸಂಜೆ : ಇಬ್ರಿ. 2

"ಯೆಹೋವ ದೇವರು ನೋಟಕ್ಕೆ ರಮ್ಯವಾಗಿಯೂ, ಊಟಕ್ಕೆ ಅನುಕೂಲವಾಗಿಯೂ ಇರುವ ಎಲ್ಲಾ ತರಹದ ಮರಗಳನ್ನು ಆ ಭೂಮಿಯಲ್ಲಿ ಬೆಳೆಯಮಾಡಿದನು. ಅದಲ್ಲದೆ ಜೀವವೃಕ್ಷವನ್ನು, ಒಳ್ಳೆಯದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ವೃಕ್ಷವನ್ನೂ ಆ ವನದ ಮಧ್ಯದಲ್ಲಿ ಬೆಳೆಸಿದನು" (ಆದಿ. 2:9).

ಏದೇನ್ ತೋಟದಲ್ಲಿ ಲೆಕ್ಕವಿಲ್ಲದಷ್ಟು ಮರಗಳು, ಬಗೆಬಗೆಯ ಫಲಕೊಡುವ ವೃಕ್ಷಗಳು ಇದ್ದವು. ಅದೇ ವೇಳೆ ಆ ತೋಟದಲ್ಲಿ ಜೀವವೃಕ್ಷವಾದ ಯೇಸುಕ್ರಿಸ್ತನೂ ಇದ್ದನು. ಕೆಟ್ಟದ್ದು ಒಳ್ಳೆಯದರ ಅರಿವನ್ನು ಹುಟ್ಟಿಸುವ ವೃಕ್ಷದಂತೆ ಸೈತಾನನೂ ಇದ್ದನು. ಈ ಭೂಮಿಯಲ್ಲಿ ವಿವಿಧ ರೀತಿಯ ಸ್ವಭಾವಗಳಿಂದ ಕೂಡಿರುವ ಜನರಿದ್ದಾರೆ. ಈ ಭೂಮಿಯಲ್ಲಿ ವಾಸಿಸುವ ದೇವಮಕ್ಕಳೊಂದಿಗೆ ಕರ್ತನ ಪ್ರಸನ್ನತೆ ಇರುವದು. ಅದೇ ವೇಳೆಯಲ್ಲಿ ಆತ್ಮಗಳನ್ನು ಕೆಡಿಸುವಂಥ ಅನೇಕ ದುಷ್ಟಶಕ್ತಿಗಳೂ ಇರುವವು. ಅವುಗಳ ಹಿಂದೆ ಸೈತಾನನು ನಿಂತಿರುವನು. ನೀವು ಸೈತಾನನನ್ನು ಗುರುತಿಸಿ, ಅವನು ಬೀಸುವ ಬಲೆಗೆ ತಪ್ಪಿಸಿಕೊಳ್ಳಬೇಕು.

ಯೇಸುಕ್ರಿಸ್ತನೇ ಆ ಜೀವ ವೃಕ್ಷವಾಗಿರುವನು. ಆತನೇ ಹೇಳಿರುವಂತೆ "ನಾನಾದರೋ ಅವುಗಳಿಗೆ ಜೀವವು ಇರಬೇಕೆಂತಲೂ, ಅದು ಸಮೃದ್ಧಿಯಾಗಿ ಇರಬೇಕೆಂತಲೂ ಬಂದೆನು" ಎಂದು (ಯೋಹಾ. 10:10). ಆದಾಮನು ಆ ಜೀವವೃಕ್ಷವನ್ನು ಕಿತ್ತುತಿಂದು ಸಮೃದ್ಧಿ ಹೊಂದುವನು ಎಂದು ದೇವಸಾರೂಪ್ಯ ಹೊಂದುವನು ಎಂದು ಕರ್ತನು ನಿರೀಕ್ಷಿಸಿದನು. ಆದರೆ ಆದಾಮನೋ ಸೈತಾನನು ಹೆಣೆದ ಬಲೆಗೆ ಸಿಕ್ಕಿಕೊಂಡು ಕರ್ತನು ತಿನ್ನಬಾರದೆಂದು ನಿಷಿದ್ಧಪಡಿಸಿದ್ದ ಕೆಟ್ಟದ್ದರ ಒಳ್ಳೇದರ ಅರಿವನ್ನು ಹುಟ್ಟಿಸುವ ವೃಕ್ಷದ ಹಣ್ಣನ್ನು ತಿಂದು ಪಾಪದಲ್ಲಿ ಬಿದ್ದುಹೋದನು. ಇಂದಿಗೂ ಸೈತಾನನು ತನ್ನ ಕಾರ್ಯವನ್ನು ಮುಂದುವರೆಸುತ್ತಲೇ ಇರುವನು. ನಿಮ್ಮನ್ನು ಆಕರ್ಷಿಸುವ ಸ್ಥಳ ಹಾಗೂ ವ್ಯಕ್ತಿಗಳ ಕುರಿತು ವಿಶೇಷವಾಗಿ ಕಂಪ್ಯೂಟರ್, ಇಂಟರ್‌ನೆಟ್‌ಗಳ ಕುರಿತು ಜಾಗ್ರತೆಯುಳ್ಳವರಾಗಿರಬೇಕು. ಯಥೇಚ್ಛವಾಗಿ ಉತ್ತಮವಾದ ಹಣ್ಣುಗಳಿದ್ದರೂ ಹವ್ವಳು ಅವುಗಳ ಕಡೆಗೆ ನೋಡದೆ ನಿಷಿದ್ಧವಾದ ವೃಕ್ಷದ ಹಣ್ಣಿನ ಕಡೆಗೆ ಆಕರ್ಷಿಸಲ್ಪಟ್ಟಳು. ದೈವಕೋಪಕ್ಕೆ ಒಳಗಾದಳು.

ದೇವಮಕ್ಕಳೇ, ಕರ್ತನು ಇಷ್ಟಪಡದ ನೋಟಗಳ ಕಡೆಗೆ ನಿಮ್ಮ ಕಣ್ಣುಗಳನ್ನು ತಿರುಗಿಸಬೇಡಿ. ಹೋಗಬಾರದ ಸ್ಥಳಗಳಿಗೆ ಹೋಗಬೇಡಿ. ನಿಮ್ಮ ಆತ್ಮೀಕ ಜೀವಿತಕ್ಕೆ ಕುಂದು ತರುವ ಯಾವ ಕಾರ್ಯಗಳನ್ನೂ ಮಾಡದಿರಿ. ಜೀವವೃಕ್ಷವಾದ ಕ್ರಿಸ್ತನ ಮೂಲಕ ದೊರಕುವ ನಿತ್ಯಜೀವಕ್ಕೆ ಬಾಧ್ಯಸ್ಥರಾಗಿ.

*ನೆನಪಿಗೆ : ಧರ್ಮಾತ್ಮನ ಫಲ ಜೀವವೃಕ್ಷ ಜ್ಞಾನಿಯು ಆತ್ಮಗಳನ್ನು ಆಕರ್ಷಿಸುವನು (ಜ್ಞಾನೋ.11:30)*

ನವೆಂಬರ್ 6

## ಸಾರವೂ, ಬೀಜವೂ!

ಬೆಳಿಗ್ಗೆ : ಯೆರೆ. 37,38,39
ಸಂಜೆ : ಇಬ್ರಿ. 3

"ಒಳ್ಳೆಯದರ ಹಾಗೂ ಕೆಟ್ಟದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ಮಾತ್ರ ತಿನ್ನಬಾರದು, ತಿಂದ ದಿನ ಸತ್ತೇಹೋಗುವಿ ಎಂದು ವಿಧಿಸಿದನು" (ಆದಿ. 2:17).

ದೇವರ ಮಾತುಗಳನ್ನೂ, ಆಜ್ಞೆಗಳನ್ನೂ, ವಿಧಿಗಳನ್ನೂ ಸಾಧಾರಣವಾಗಿ ಎಣಿಸಬಾರದು. ಅಲಕ್ಷಿಸಬಾರದು. ನಿಮ್ಮ ಆತ್ಮಗಳನ್ನು ಎಲ್ಲಾ ಪಾಪ ಇಚ್ಛೆಗಳಿಗೆ ದೂರವಾಗಿ ಕಾಯ್ದುಕೊಳ್ಳಬೇಕು. ಕರ್ತನು ಬೇಡವೆಂದ ಯಾವ ಸಂಗತಿಗಳೂ, ಸಂಬಂಧಗಳೂ ಬೇಡವೇ ಬೇಡ. ಕೆಟ್ಟದ್ದರ ಅರಿವು ಹುಟ್ಟಿಸುವ ವೃಕ್ಷದ ಹಣ್ಣು ನೋಡಲು ಸುಂದರವಾಗಿದ್ದರೂ, ಆಕರ್ಷಿಸಲ್ಪಡುವದಾಗಿದ್ದರೂ, ಇಷ್ಟಪಡುವಂತಿದ್ದರೂ, ದೇವಮಕ್ಕಳಿಗೆ ಬೇಕಾಗಿಲ್ಲ. ಪರಸ್ತ್ರೀಯ ಮಾತುಗಳು ಎಣ್ಣೆಯಂತೆ ನುಣುಪಾಗಿದ್ದರೂ, ಜೇನಿನಂತೆ ರುಚಿಯಾಗಿದ್ದರೂ ದೇವಮಕ್ಕಳಿಗೆ ಬೇಡವೇ ಬೇಡ. "ನೀನು ಇದು ತಿಂದಕೂಡಲೇ ಸಾಯುವಿ" ಎಂದು ಕರ್ತನು ಹೇಳಿದನು.

ಹೌದು, ಇದು ಆತ್ಮದಲ್ಲಿ ಮರಣವನ್ನು ಉಂಟುಮಾಡುವದು. ಆದಾಮ ಹವ್ವಳಲ್ಲಿ ಅದು ಮರಣವನ್ನು ಹುಟ್ಟಿಸಿತು. ಶರೀರ ಮರಣವಲ್ಲ, ಅದಕ್ಕಿಂತ ಭಯಂಕರವಾದ ಆತ್ಮಮರಣ. ಕರ್ತನನ್ನು ನೋಡದಂತೆ, ದೇವರ ಪ್ರಸನ್ನತೆಯನ್ನು ಅನುಭವಿಸಲಾರದಂಥ ಆಂತರ್ಯದಲ್ಲಿ ಬರುವ ಕತ್ತಲೆ ಎಂಬ ಮರಣ. ಪಾಪದ ಸಂಬಳ ಮರಣ. ಪಾಪ ಮಾಡುವನ ಆತ್ಮವೇ ಸಾಯುವದು ಎಂದು ಸತ್ಯವೇದ ಎಚ್ಚರಿಸುತ್ತದೆ (ಯೆಹೆ.18:20). ಆ ಹಣ್ಣಿನಿಂದ ಎರಡು ಮುಖ್ಯವಾದವುಗಳಿರುವವು. ಮೊದಲನೆಯದಾಗಿ ಅದರ ಸಾರ, ಅದು ರಕ್ತದೊಂದಿಗೆ ರಕ್ತವಾಗಿ ಕಲೆತುಬಿಡುವದು. ಎರಡನೆಯದು, ಹಣ್ಣಿನಲ್ಲಿರುವ ಬೀಜ. ಈ ಬೀಜಗಳು ತಲತಲಾಂತರದವರೆಗೂ ಮನುಷ್ಯರ ಆಂತರ್ಯದಲ್ಲಿ ಬೇರೂರಿಬಿಡುವದು. ರಕ್ತದೊಂದಿಗೆ ಬೆರೆಯುವ ಸಾರ. ವಿಷದಂಥ ಪಾಪಕ್ಕೆ ಗುರುತಾಗಿದೆ. ಬೀಜವೆಂಬುದು ಅವಿಧೇಯತೆಯನ್ನು ಸೂಚಿಸುವದಾಗಿದೆ. ಒಳ್ಳೇದರ ಕೆಟ್ಟದರ ಅರಿವುಂಟು ಮಾಡುವ ವೃಕ್ಷದ ಅವಿಧೇಯತೆಯೆಂಬ ಬೀಜ ಮನುಷ್ಯರಲ್ಲಿ ಬೇರೂರಿಬಿಟ್ಟಿರುವದರಿಂದ ಎರಡನೇ ಆದಾಮನಾದ ಕ್ರಿಸ್ತನು ಭೂಮಿಗೆ ಬಂದು ತನ್ನ ಮರಣ ಪರಿಯಂತ ತಂದೆ ದೇವರಿಗೆ ವಿಧೇಯನಾದನು.

ದೇವಮಕ್ಕಳೇ, ಮೊದಲನೇ ಆದಾಮನ ಅವಿಧೇಯತೆಯಿಂದ ಕಳೆದುಕೊಂಡದ್ದನ್ನೆಲ್ಲಾ ನಿಮಗೆ ಹಿಂದಿರುಗಿಸಿಕೊಡಲು ಕ್ರಿಸ್ತನು ತೋರಿಸಿದ ತ್ಯಾಗವನ್ನು ನೆನಸಿ, ಜೀವಾಂತ್ಯದವರೆಗೆ ದೇವರಿಗೆ ವಿಧೇಯರಾಗಿರ್ರಿ.

*ನೆನಪಿಗೆ : ಒಬ್ಬನ ಅವಿಧೇಯತ್ವದಿಂದ ಎಲ್ಲರೂ ಹೇಗೆ ಪಾಪಿಗಳಾದರೋ, ಹಾಗೆಯೇ ಒಬ್ಬನ ವಿಧೇಯತ್ವದಿಂದ ಎಲ್ಲರೂ ನೀತಿವಂತರಾಗುವರು (ರೋಮಾ. 5:19).*



ನವೆಂಬರ್ 7

## ಪ್ರೀತಿಯೆಂಬ ಫಲ!

ಬೆಳಿಗ್ಗೆ : ಯೆರೆ. 40,41,42
ಸಂಜೆ : ಇಬ್ರಿ. 4

"ನಮಗೆ ಕೊಟ್ಟಿರುವ ಪವಿತ್ರಾತ್ಮನ ಮೂಲಕವಾಗಿ ದೇವರ ಪ್ರೀತಿರಸವು ನಮ್ಮ ಹೃದಯಗಳಲ್ಲಿ ಧಾರಾಳವಾಗಿ ಸುರಿದಿದೆಯಲ್ಲಾ" (ರೋಮಾ. 5:5).

ಪವಿತ್ರಾತ್ಮನು ಸುರಿಸುವ ಅಭಿಷೇಕದಿಂದ ಆತ್ಮನ ಫಲವಾದ ಪ್ರೀತಿ ನಮ್ಮೊಳಗೆ ಬರುವದು. ದೈವೀಕ ಪ್ರೀತಿಯಂಥ ಫಲ ಬೇರೊಂದಿಲ್ಲ. ಹೇಳಬೇಕೆಂದರೆ, ಪ್ರೀತಿ ಎಂಬ ಫಲದೊಳಗೆ ಎಲ್ಲಾ ಫಲಗಳೂ ಅಡಗಿರುವವು. ನೀವು ಹೆಚ್ಚಾದ ಫಲ ಕೊಡಬೇಕೆಂದರೆ, ಅಧಿಕವಾಗಿ ಅಭಿಷೇಕದಿಂದ ತುಂಬಬೇಕು. ದೇವಸಮ್ಮುಖದಲ್ಲಿ ಅಧಿಕ ಸಮಯ ಕಾದಿದ್ದು, ಆತ್ಮದಲ್ಲಿ ಸಂತೋಷಿಸಬೇಕು.

ಒಮ್ಮೆ ಯೇಸುಕ್ರಿಸ್ತನ ಬಳಿ ಒಬ್ಬ ತಾಯಿ ಬಂದು ತನ್ನ ಇಬ್ಬರು ಮಕ್ಕಳು ಕ್ರಿಸ್ತನ ಸಿಂಹಾಸನದ ಎಡಗಡೆ ಮತ್ತು ಬಲಗಡೆಯಲ್ಲಿ ಕುಳಿತುಕೊಳ್ಳುವಂತೆ ಅನುಗ್ರಹ ಮಾಡಬೇಕೆಂದು ಕೇಳಿಕೊಂಡಳು. ಇವಳ ಬೇಡಿಕೆ ಕೇಳಿದ ಇತರ ಶಿಷ್ಯರಿಗೆ ಕೋಪ ಉಂಟಾಯಿತು. ಆದರೆ ಮೇಲುಪ್ಪರಿಗೆಯಲ್ಲಿ ಪವಿತ್ರಾತ್ಮನು ಇಳಿದುಬಂದಾಗ, ಕೋಪಗೊಂಡಿದ್ದ ಪೇತ್ರನೂ ಕೋಪಕ್ಕೆ ಕಾರಣವಾಗಿದ್ದ ಯೋಹಾನನೂ ಒಂದಾಗಿ ಕೈಜೋಡಿಸಿ ನಡೆಯಲಾರಂಭಿಸಿಬಿಟ್ಟರು. ಪ್ರಸಂಗಿಸಿದ ಪೇತ್ರನ ಸಹಾಯಕ್ಕೆ ಯೋಹಾನನು ದೃಢವಾಗಿ ನಿಂತನು. ಕೋಪವು ಮಾರ್ಪಟ್ಟು ದೈವೀಕ ಪ್ರೀತಿ ಅವರ ನಡುವೆ ಸುರಿಸಲ್ಪಟ್ಟಿತು. ಒಮ್ಮೆ ಶಿಷ್ಯರೂ, ಯೇಸುಕ್ರಿಸ್ತನೂ ಸಮಾರ್ಯದಿಂದ, ಯೆರೂಸಲೇಮಿಗೆ ಹೋಗುತ್ತಿದ್ದಾಗ, ಸಮಾರ್ಯದವರು ಯೇಸುವಿನ ಬೋಧನೆಯನ್ನು ಅಂಗೀಕರಿಸಿಕೊಳ್ಳಲಿಲ್ಲ. ಆಗ ಶಿಷ್ಯರು ಕೋಪಗೊಂಡು "ಸ್ವಾಮಿ, ಎಲೀಯನು ಆಕಾಶದಿಂದ ಬೆಂಕಿ ತರಿಸಿ ನಾಶಮಾಡಿದಂತೆ, ಇವರನ್ನು ಅಗ್ನಿಯಿಂದ ಸುಟ್ಟುಬಿಡೋಣವೇ?" ಎಂದು ಕೇಳಿದರು. ಆದರೆ, ಪಂಚಾಶತ್ತಮದ ದಿನದಂದು ಅಭಿಷೇಕ ಸುರಿಯಲ್ಪಟ್ಟ ನಂತರ, ಶಿಷ್ಯರು ಯೆರೂಸಲೇಮಿನಲ್ಲಿ ಮಾತ್ರವಲ್ಲ, ಸಮಾರ್ಯದಲ್ಲೂ ಕರ್ತನಿಗಾಗಿ ಸಾಕ್ಷಿಗಳಾಗಿ ಕಾಣಲ್ಪಟ್ಟರು (ಅ.ಕೃ. 1:8). ಆ ಪವಿತ್ರಾತ್ಮನ ಅಭಿಷೇಕ ಯೋಹಾನನನ್ನು ಪ್ರೀತಿಯ ಶಿಷ್ಯನನ್ನಾಗಿಸಿತು. ಯಾಕೋಬನು ಯೇಸುವಿಗಾಗಿ ಮೊದಲ ರಕ್ತಸಾಕ್ಷಿಯಾದನು. ಯೋಸೇಫನು ತನ್ನ ಜೀವಿತದ ಎಲ್ಲಾ ಪರಿಸ್ಥಿತಿಗಳಲ್ಲೂ ಕರ್ತನಿಗಾಗಿ ಫಲಕೊಟ್ಟನು.

ದೇವಮಕ್ಕಳೇ, ಇಂದು ನೀವು ಆತ್ಮನ ಫಲಗಳಿಗಾಗಿ ದೇವರಲ್ಲಿ ಪ್ರಾರ್ಥಿಸಿರಿ. ಎಲ್ಲಾ ಪರಿಸ್ಥಿತಿಯಲ್ಲೂ ಕರ್ತನಿಗಾಗಿ ಫಲಕೊಡುವಂಥವರಾಗುವಂತೆ ತೀರ್ಮಾನಿಸಿರಿ.

*ನೆನಪಿಗೆ : ಎನ್ನಿನಿಯನು ತನ್ನ ತೋಟದೊಳಗೆ ಸೇರಿ ತನ್ನ ಉತ್ತಮ ಫಲಗಳನ್ನು ತಾನೇ ಭುಜಿಸಲಿ (ಪ.ಗೀ. 4:16).*

ನವೆಂಬರ್ ೮

## ದೇವರಾತ್ಮನ ಫಲಗಳು!

ಬೆಳಿಗ್ಗೆ : ಯೆರೆ. 43,44,45
ಸಂಜೆ : ಇಬ್ರಿ. 5

"ದೇವರಾತ್ಮನಿಂದ ಉಂಟಾಗುವ ಫಲವೇನೆಂದರೆ, ಸಮಾಧಾನ, ಪ್ರೀತಿ, ಸಂತೋಷ, ದೀರ್ಘಶಾಂತಿ, ದಯೆ, ಉಪಕಾರ, ನಂಬಿಕೆ, ಸಾಧುತ್ವ, ಶಮೆದಮೆ ಇಂಥವುಗಳೇ. ಇಂಥವುಗಳನ್ನು ಯಾವ ಧರ್ಮಶಾಸ್ತ್ರವೂ ಆಕ್ಷೇಪಿಸುವದಿಲ್ಲ" (ಗಲಾತ್ಯ. 5:22,23).

ಒಬ್ಬ ದೇವಮನುಷ್ಯರು, ಆತ್ಮನ ಒಂಭತ್ತು ಫಲಗಳನ್ನು ವಿವರಿಸುತ್ತಾ ಹೀಗೆ ಹೇಳಿದರು. "ಪ್ರೀತಿ" ಎಂಬುದು, ವಿಧೇಯತೆಗೆ ಮೂಲಕಾರಣ. ಸಂತೋಷ ಎಂಬುದು ಪವಿತ್ರತೆಯ ಸುಂದರವಾದ ಹೂವು, ಸಮಾಧಾನ ಎಂಬುದು ನಂಬಿಕೆಯನ್ನು ಪ್ರಕಟಿಸುವದು. ಪ್ರೀತಿಗೆ ಮಗಳು ದಯೆಯಾಗಿದೆ. ಸದ್ಗುಣವೆಂಬದು ಕೃಪೆಯ ಕಾರ್ಯ. ನಂಬಿಕೆ ಎಂಬುದು ಧೈರ್ಯದ ಉಚ್ಛಿತ. ಶಾಂತತೆ ಎಂಬುದು ಕ್ರಿಸ್ತನ ಮನಸ್ಸು. ಶಮೆದಮೆ ಎಂಬುದು ನಂಬಿಕೆಯ ಆಳ್ವಿಕೆ.

ಲಂಡನ್ ಮಹಾನಗರದ ಒಂದು ನದಿಯ ದಂಡೆಯಲ್ಲಿ ಕೆಲಸ ಮಾಡುವ ಕೂಲಿಯವರೊಂದಿಗೆ ಒಬ್ಬ ಪಾದ್ರಿ, ತನ್ನ ಮೇಲಂಗಿಯನ್ನು ಬಿಚ್ಚಿಟ್ಟು, ಒಬ್ಬ ಕೂಲಿಯವನಂತೆ ನಿಂತುಕೊಂಡಿದ್ದರು. ಹೇಗಾದರೂ ಒಬ್ಬನನ್ನಾದರೂ ಕ್ರಿಸ್ತನಿಗೆ ಆದಾಯ ಮಾಡಬೇಕೆಂಬ ನಿಶ್ಚಯದೊಡನೆ ಇದ್ದರು. ಒಬ್ಬನು, ಅವರನ್ನು ಬೋಧಕರೆಂದು ತಿಳಿಯದೆ, ಅವರನ್ನು ಪರಿಹಾಸ್ಯ ಮಾಡುತ್ತಾ ನದಿಯೊಳಗೆ ತಳ್ಳಿಬಿಟ್ಟನು. ಅವರು ತಲೆಯ ಮೇಲಿದ್ದ ಸರಕಿನೊಂದಿಗೆ ನೀರಿಗೆ ಬಿದ್ದುಬಿಟ್ಟರು. ದಂಡೆಯಲ್ಲಿದ್ದವರೆಲ್ಲರೂ ಪರಿಹಾಸ್ಯ ಮಾಡಿದರು. ಬೋಧಕರು ಪ್ರಾರ್ಥಿಸುತ್ತಲೇ ನದಿಯಿಂದ ಮೇಲಕ್ಕೆ ಎದ್ದುಬಂದರು. ತನ್ನನ್ನು ನೀರಿಗೆ ತಳ್ಳಿದವನನ್ನು ಕ್ಷಮಿಸಿ ಅವನೊಂದಿಗೆ ಪ್ರೀತಿಯಿಂದ ಮಾತನಾಡಿದರು. ಆಗ ಅವನು, "ಅಯ್ಯಾ, ನಾನು ಒಬ್ಬ ಕೂಲಿ ಆಳಲ್ಲ. ಒಬ್ಬ ವಕೀಲ. ಆದರೆ ಕುಡಿತಕ್ಕೆ ದಾಸನಾಗಿ ನನ್ನ ಆಸ್ತಿಯನ್ನು ಕಳೆದುಕೊಂಡೆನು. ಹೆಂಡತಿ ಮಕ್ಕಳು ನನ್ನನ್ನು ಬಿಟ್ಟು ಹೊರಟುಹೋದರು" ಎಂದು ಹೇಳಿದನು. ಬೋಧಕರು, ಅವನನ್ನು ಸಂತೈಸಿದ್ದು ಮಾತ್ರವಲ್ಲ, ಅವನನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ, ಅವನಿಗೆ ತಿನ್ನಲು ಕೊಟ್ಟು, ಉಪಚರಿಸಿ ರಕ್ಷಣೆಯೊಳಗೆ ನಡೆಸಿದರು. ಅವನು ಕುಡಿತವನ್ನು ಬಿಟ್ಟು ಒಳ್ಳೆಯ ಪ್ರಾರ್ಥನಾ ವೀರನಾದನು. ಬೋಧಕರು ಒಡೆದ ಅವನ ಕುಟುಂಬವನ್ನು ಒಂದುಮಾಡಿದರು.

ದೇವಮಕ್ಕಳೇ, ಬೋಧಕರು ತೋರಿಸಿದ ಆತ್ಮನ ಫಲಗಳನ್ನು ಸ್ವಲ್ಪ ಯೋಚಿಸಿನೋಡಿರಿ. ಯಾವ ಸ್ಥಿತಿಯಲ್ಲೂ ನೀವು ಫಲಕೊಡುವವರಾಗಿರಬೇಕು. ನೀವು ಆತ್ಮನ ಫಲಗಳನ್ನು ಪ್ರಪಂಚಕ್ಕೆ ತೋರಿಸುವಿರಾದರೆ ಸಾವಿರಾರು ಆತ್ಮಗಳು ನಿಮ್ಮನ್ನು ಹುಡುಕಿಬರುವವು.

*ನೆನಪಿಗೆ : ನಾವು ಆತ್ಮನಿಂದ ಜೀವಿಸುತ್ತಿರಲಾಗಿ ಆತ್ಮನನ್ನು ಅನುಸರಿಸಿ ನಡೆಯೋಣ (ಗಲಾ.5:25).*



ನವೆಂಬರ್ ೯

## ದೇವರಾತ್ಮನ ಫಲವೋ ಪ್ರೀತಿ!

ಬೆಳಿಗ್ಗೆ : ಯೆರೆ. 46,47
ಸಂಜೆ : ಇಬ್ರಿ. 6

"ದೇವರಾತ್ಮನ ಫಲವೇನೆಂದರೆ ಪ್ರೀತಿ...." (ಗಲಾ. 5:22).

ಒಂಭತ್ತು ಆತ್ಮನ ಫಲಗಳಲ್ಲಿ ಪ್ರೀತಿ ಮೊದಲನೆಯದು, ಶ್ರೇಷ್ಠವಾದದ್ದು, ಪ್ರಧಾನವಾದದ್ದು. ಹೊಸ ಒಡಂಬಡಿಕೆಯಲ್ಲಿ ಕೊಡಲ್ಪಟ್ಟ ಎರಡು ಪ್ರಧಾನವಾದ ಆಜ್ಞೆಗಳೂ ಕೂಡ ಪ್ರೀತಿಯ ಆಧಾರದ ಮೇಲೆಯೇ ನಿಂತಿರುವದು. ಮೊದಲನೆಯದು, "ನಿನ್ನ ಪೂರ್ಣ ಹೃದಯದಿಂದಲೂ, ನಿನ್ನ ಪೂರ್ಣ ಬುದ್ಧಿಯಿಂದಲೂ, ನಿನ್ನ ಪೂರ್ಣ ಬಲದಿಂದಲೂ ಕರ್ತನನ್ನು ಪ್ರೀತಿಸು. ಎರಡನೆಯದು ನಿನ್ನನ್ನು ನೀನು ಪ್ರೀತಿಸುವಂತೆ ಇತರರನ್ನು ಪ್ರೀತಿಸು" ಎಂಬುದು.

ಈ ದೈವೀಕ ಪ್ರೀತಿಯೇ, ಇಡೀ ಲೋಕವನ್ನು ಕಾಯುತ್ತಿರುವದು. ಪ್ರೀತಿಯೇ ಕುಟುಂಬಗಳನ್ನು ಕಟ್ಟಿ ಎಬ್ಬಿಸುವಂಥದ್ದು. ಪ್ರೀತಿಯೇ ಒಮ್ಮನಸ್ಸನ್ನು, ಅನ್ಯೋನ್ಯತೆಯನ್ನು ಉಂಟುಮಾಡುವಂಥದ್ದು. ಪ್ರೀತಿಯೇ ದೊಡ್ಡದೆಂದು ಅಪೊ. ಪೌಲನು ಹೇಳುತ್ತಾನೆ (1 ಕೊರಿಂ.13:13). ಗ್ರೀಕ್ ಭಾಷೆಯಲ್ಲಿ ಪ್ರೀತಿಗೆ ಅಗಾಫೆ ಎಂದು ಹೇಳಲ್ಪಟ್ಟಿದೆ. ಅಂದರೆ ದೈವೀಕ ತ್ಯಾಗಪೂರಿತವಾದ ಪ್ರೀತಿ ಎಲ್ಲವನ್ನೂ ಅರ್ಪಿಸುವ ಪ್ರೀತಿ ಎಂದು ಅರ್ಥ. ನೀವು ಒಬ್ಬರನ್ನೊಬ್ಬರು ಪ್ರೀತಿಸುವಿರಾದರೆ ನೀವು ನನ್ನ ಶಿಷ್ಯರೆಂದು ಎಲ್ಲರೂ ಅರಿತುಕೊಳ್ಳುವರು ಎಂದು ಯೇಸುಕ್ರಿಸ್ತನು ಹೇಳುವನು (ಯೋಹಾ. 13:35). ಯೇಸುಕ್ರಿಸ್ತನು ನಿಮ್ಮ ಮೇಲೆ ಅಪರಿಮಿತವಾದ ಪ್ರೀತಿ ಇಟ್ಟಕಾರಣ, ಪರಲೋಕವನ್ನು ತ್ಯಜಿಸಿ, ಈ ಭೂಮಿಗೆ ದಾಸನ ರೂಪ ಧರಿಸಿ ಇಳಿದುಬಂದನು. ಆ ಕಲ್ವಾರಿ ಶಿಲುಬೆಯಲ್ಲಿ ನಮ್ಮ ಪಾಪ ಅಕ್ರಮಗಳನ್ನು ಹೊತ್ತು ನಮಗಾಗಿ ಸಜೀವ ಯಜ್ಞವಾಗಿ ತನ್ನನ್ನೇ ಅರ್ಪಿಸಿದನು. "ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗಾಗಿ ಪ್ರಾಣ ಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತ ಪಡಿಸಿದ್ದಾನೆ" (ರೋಮಾ. 5:8) ಎಂದು ಅಪೊ. ಪೌಲನು ಬರೆಯುತ್ತಾನೆ. ಶಿಲುಬೆಯ ಮಧ್ಯದಲ್ಲಿ ಮರದ ಎರಡು ಪಟ್ಟಿಗಳು ಇರುವವು. ಒಂದು ಮೇಲಿನಿಂದ ಕೆಳಗೆ ಇರುವ ಉದ್ದವಾದ ಪಟ್ಟಿ. ಇದು ಪರಲೋಕ ದೇವರು ನಮಗೆ ಕೊಟ್ಟ ಪ್ರೀತಿಯನ್ನು ತೋರಿಸುವದು. ಪರಲೋಕದಿಂದ ದೇವರ ಪ್ರೀತಿ ನದಿಯಂತೆ ಹರಿದುಬಂದು ನಮ್ಮ ಆತ್ಮಗಳನ್ನು ತುಂಬಿಸುವದು. ಇನ್ನೊಂದು ಚಿಕ್ಕದಾದ ಅಡ್ಡಪಟ್ಟಿ, ಆ ಪಟ್ಟಿಯಲ್ಲಿ ಕರ್ತನು ತನ್ನೆರಡು ಕೈಗಳನ್ನು ಮೊಳೆಗಳಿಂದ ಜಡಿಯಲು ಒಪ್ಪಿಸಿಕೊಟ್ಟನು. ಎಲ್ಲೈ ಹೊರೆ ಹೊತ್ತವರೇ, ನನ್ನ ಬಳಿಗೆ ಬನ್ನಿರಿ ನಾನು ನಿಮಗೆ ವಿಶ್ರಾಂತಿಯನ್ನು ಕೊಡುವೆನು ಎಂದು ಪ್ರೀತಿಯಿಂದ ಕರೆಯುತ್ತಿರುವನು.

ದೇವಮಕ್ಕಳೇ, ಇಷ್ಟೊಂದು ಪ್ರೀತಿಯಿಂದ ಅಪ್ಪಿಕೊಳ್ಳುವ ಯೇಸುವಿನ ಪ್ರೀತಿ ನಿಮ್ಮಲ್ಲಿ ತುಂಬಿ, ನಿಮ್ಮನ್ನು ಪ್ರೇರೇಪಿಸಲಿ.

*ನೆನಪಿಗೆ : ನಾವಂತೂ ಕ್ರೈಸ್ತ ಸಹೋದರರನ್ನು ಪ್ರೀತಿಸುವವರಾಗಿರುವದರಿಂದ ಮರಣದಿಂದ ಪಾರಾಗಿ ಜೀವದಲ್ಲಿ ಸೇರಿದ್ದೇವೆಂಬದು ನಮಗೆ ಗೊತ್ತಾಗಿದೆ (1 ಯೋಹಾ. 3:14).*

ನವೆಂಬರ್ 10

## ಪ್ರೀತಿ ನನಗಿಲ್ಲದಿದ್ದರೆ!

ಬೆಳಿಗ್ಗೆ : ಯೆರೆ. 48,49
ಸಂಜೆ : ಇಬ್ರಿ. 7

"ನಾನು ಪ್ರೀತಿ ಇಲ್ಲದವನಾಗಿದ್ದರೆ, ನಾದ ಕೊಡುವ ಕಂಚೂ ಗಣಗಣಿಸುವ ತಾಳವೂ ಆಗಿದ್ದೇನೆ" (1 ಕೊರಿಂ. 13:1).

ದೇವರಾತ್ಮನ ಫಲಗಳು, ನಿಮ್ಮಲ್ಲಿ ಕಾಣಲ್ಪಡುವಂತೆ ಅದಕ್ಕಾಗಿ ತವಕಪಡಿರಿ. ದಾಹದಿಂದ ದೇವರ ಬಳಿ ಕೇಳಿರಿ. ಅದು ನಿಮ್ಮನ್ನು ದೇವರನ್ನು ಪ್ರೀತಿಸುವಂತೆ ಪ್ರೇರೇಪಿಸುವದು. ತಂದೆ ದೇವರೊಂದಿಗೆ ಸಂಭಾಷಿಸಲು ಆತ್ಮನ ಫಲವಾದ ಪ್ರೀತಿ ಅಗತ್ಯ. ಶತ್ರುವನ್ನು ಪ್ರೀತಿಸಲು, ನಿಮ್ಮನ್ನು ನಿಂದಿಸುವವರಿಗಾಗಿ, ಪ್ರಾರ್ಥಿಸಲು ಆತ್ಮನ ವರವಾದ ಪ್ರೀತಿ ಅಗತ್ಯವಾದದ್ದು.

ನೀವು ಆತ್ಮನ ಅಭಿಷೇಕವನ್ನು ಪಡೆಯುವಾಗ, ದೈವೀಕ ಪ್ರೀತಿಯನ್ನು ಕರ್ತನು ನಿಮ್ಮ ಹೃದಯಗಳಲ್ಲಿ ಸುರಿಸುತ್ತಾನೆ. ಆ ಪ್ರೀತಿಯನ್ನು ಉಪಯೋಗಿಸುವದು ನಿಮ್ಮ ಕೈಗಳಲ್ಲಿ ಇರುವದು. ದೈವಪ್ರೀತಿಯಿಂದ ತುಂಬುವಾಗ, ನಿಮ್ಮೊಳಗೆ ಇರುವ ಕೋಪ, ಕಹಿ ಭಾವನೆಗಳೆಲ್ಲಾ ತಾನಾಗಿಯೇ ದೂರವಾಗುವದು. ಮಾತ್ರವಲ್ಲ, ದೈವೀಕ ಸ್ವಭಾವಗಳು ನಿಮ್ಮೊಳಗೆ ಸೃಷ್ಟಿಸಲ್ಪಡುವದು. ಒಮ್ಮೆ ಒಬ್ಬ ಸಹೋದರನಿಗೆ ತಡೆಯಲಾಗದ ಹೊಟ್ಟೆ ನೋವು ಪ್ರಾರಂಭವಾಯಿತು. ಎಷ್ಟೋ ವೈದ್ಯರುಗಳ ಬಳಿ ಹೋದಾಗ್ಯೂ ಗುಣವಾಗಲೇ ಇಲ್ಲ. ಆಗ ಕರ್ತನು ಅವನೊಂದಿಗೆ ಮಾತನಾಡಿದನು. "ಆಸ್ತಿಯ ವಿಷಯದಲ್ಲಿ ನೀನು ನಿನ್ನ ತಮ್ಮನನ್ನು ಹಗೆ ಮಾಡುತ್ತಿರುವಿ. ಸೈತಾನನು ಅದನ್ನು ಉಪಯೋಗಿಸಿ ಹೊಟ್ಟೆನೋವಿನಿಂದ ಬಾಧಿಸುತ್ತಿರುವನು. ಮೊದಲು ನಿನ್ನ ತಮ್ಮನ ಬಳಿ ಸಂಧಾನ ಮಾಡಿಕೊಂಡು ನಂತರ ಪ್ರಾರ್ಥಿಸು. ನಾನು ನಿನ್ನನ್ನು ಗುಣಪಡಿಸುವೆನು" ಅಂದನು. ಹಾಗೆಯೇ ಆ ಸಹೋದರನು ತನ್ನ ತಮ್ಮನ ಬಳಿ ಹೋಗಿ ಸಂಧಾನ ಪಡಿಸಿಕೊಂಡಾಗ ಹೊಟ್ಟೆ ನೋವು ನೀಗಿತು. ಆದರೆ ಕೆಲವರು ಕ್ಷಮಿಸಿದ್ದೀನಿ, ಆದರೆ ಮರೆಯಲಾಗದು ಎಂದು ಹೇಳುವರು. ನಿಜವಾಗಿ ಕ್ಷಮಿಸುವವರು ಮರೆತುಬಿಡುವರು. ಕ್ಷಮಿಸಲು, ಮರೆಯಲು ದೇವರಾತ್ಮನು ನಿಮಗೆ ಸಹಾಯ ಮಾಡುವನು. ಪ್ರೀತಿ ಅನೇಕ ಪಾಪಗಳನ್ನು ಮುಚ್ಚುವದು. ಪ್ರೀತಿಯು ಅನ್ಯಾಯದಲ್ಲಿ ಸಂತೋಷಪಡದೆ, ಸತ್ಯದಲ್ಲಿ ಸಂತೋಷಪಡುವದು. ಅನೇಕರು ಪ್ರೀತಿಯ ಹೆಸರಿನಲ್ಲಿ ಶಾರೀರಿಕ ಇಚ್ಛೆಗಳಿಗೆ ಒಳಗಾಗುವರು. ಕೊನೆಗೆ ತಪ್ಪಾದ ಸಂಬಂಧಗಳಲ್ಲಿ ಸಿಕ್ಕಿ ವೇದನೆಗೆ ಒಳಗಾಗುವರು.

ದೇವಮಕ್ಕಳೇ, ನಿಮ್ಮೊಳಗೆ ಕ್ರಿಸ್ತನ ದೈವೀಕ ಪ್ರೀತಿ ಕಾಣಲ್ಪಡಲಿ. ಒಳ್ಳೆಯ ಸಮಾರ್ಯದವರಂತೆ ನಿಸ್ವಾರ್ಥ ಪ್ರೀತಿ ಇರಲಿ. ತ್ಯಾಗಪೂರಿತ ಪ್ರೀತಿ ನಿಮ್ಮ ಹೃದಯಗಳಲ್ಲಿ ಕಾಣಲ್ಪಡಲಿ.

*ನೆನಪಿಗೆ : ಪ್ರೀತಿ ಎಲ್ಲವನ್ನೂ ಅಡಗಿಸಿಕೊಳ್ಳುತ್ತದೆ. ಎಲ್ಲವನ್ನೂ ನಂಬುತ್ತದೆ, ಎಲ್ಲವನ್ನೂ ನಿರೀಕ್ಷಿಸುತ್ತದೆ, ಎಲ್ಲವನ್ನೂ ಸಹಿಸಿಕೊಳ್ಳುತ್ತದೆ (1 ಕೊರಿಂಥ. 13:7).*



ನವೆಂಬರ್ 11

## ಪ್ರೀತಿ ಇಲ್ಲದಿದ್ದರೆ!

ಬೆಳಿಗ್ಗೆ : ಯೆರೆ. 50
ಸಂಜೆ : ಇಬ್ರಿ. 1

"ಪ್ರೀತಿಯು ಇಲ್ಲದವನಾಗಿದ್ದರೆ ಏನೂ ಅಲ್ಲದವನಾಗಿದ್ದೇನೆ" (1 ಕೊರಿಂ. 13:2).

ಆತ್ಮನ ಫಲವಾದ ಪ್ರೀತಿಗೆಂದು ಅಪೊ. ಪೌಲನು ಒಂದು ಅಧ್ಯಾಯವನ್ನೇ ಬರೆದನು. ಅದು ಕೊರಿಂಥದವರೆಗೆ ಬರೆದ ಮೊದಲನೆ ಪತ್ರಿಕೆ ಹದಿಮೂರನೇ ಅಧ್ಯಾಯ. ನಾನು ಚಿಕ್ಕವನಾಗಿದ್ದಾಗ ನನ್ನ ತಂದೆ ತಾಯಿಗಳ ಆಲೋಚನೆಯಂತೆ ಈ ಅಧ್ಯಾಯವನ್ನು ಬಾಯಿಪಾಠ ಮಾಡಿದೆನು. ಕ್ರಿಸ್ತನು ಈ ಪ್ರೀತಿಯನ್ನು ಬೋಧಿಸಿದ್ದು ಮಾತ್ರವಲ್ಲ ತನ್ನ ಜೀವಿತದಲ್ಲಿ ಕಾರ್ಯರೂಪವಾಗಿ ಮಾಡಿತೋರಿಸಿದನು. ನೀವೂ ಹಾಗೆಯೇ ನಡೆದುಕೊಳ್ಳುವಂತೆ ಪವಿತ್ರಾತ್ಮನ ಮೂಲಕ ನಿಮ್ಮೊಳಗೆ ಸುರಿಸಲ್ಪಟ್ಟಿರುವದು. ಕ್ರಿಸ್ತನ ಪ್ರೀತಿ ದೈವೀಕವಾದ ತ್ಯಾಗಪೂರಿತವಾದ ಪ್ರೀತಿಯಾಗಿದೆ.

ಸ್ಮಿತ್‌ವಿಗಲ್ಸ್‌ವೋರ್ತ್ ಎಂಬ ಭಕ್ತರು ರಕ್ಷಣೆಹೊಂದುವ ಮೊದಲು ಪ್ಲಂಬರ್ ಕೆಲಸ ಮಾಡುತ್ತಿದ್ದರು. ಅವರಿಗೆ ಕ್ರೈಸ್ತ ಮಾರ್ಗವಾಗಲಿ, ಸತ್ಯವೇದವಾಗಲಿ ಇಷ್ಟವಾಗುತ್ತಿರಲಿಲ್ಲ. ಒಂದು ದಿನ ಆತನ ಹೆಂಡತಿ, ಒಂದು ವಿಶೇಷ ಪ್ರಾರ್ಥನಾ ಕೂಟಕ್ಕೆ ಹೋಗಲು ಅನುಮತಿ ಕೇಳಿದಳು. ಮೊದಲು ಅವಳ ಬೇಡಿಕೆಯನ್ನು ತಿರಸ್ಕರಿಸಿದರೂ, ನಂತರ ಅನುಮತಿಸಿ, ರಾತ್ರಿ ಒಂಭತ್ತು ಗಂಟೆಗೆಲ್ಲಾ ಮನೆಗೆ ಹಿಂದಿರುಗಬೇಕೆಂದು ಎಚ್ಚರಿಸಿ ಕಳುಹಿಸಿದರು. ಆದರೆ ಅವರ ಹೆಂಡತಿ ಪ್ರಾರ್ಥನಾಕೂಟ ಮುಗಿದ ಕೂಡಲೆ ಓಡೋಡಿ ಮನೆಗೆ ಬಂದರೂ ಕೆಲವು ನಿಮಿಷಗಳು ತಡವಾಗಿ ಹೋಗಿತ್ತು. ಸ್ಮಿತ್‌ರವರು ಕೋಪಗೊಂಡು ಬಾಗಿಲು ಮುಚ್ಚಿ ಮಲಗಿಬಿಟ್ಟರು. ಎಷ್ಟು ಕದ ತಟ್ಟಿದರೂ ತೆರೆಯಲೇ ಇಲ್ಲ. ಹೊರಗೆ ಮಂಜು ಸುರಿಯುತ್ತಿತ್ತು. ರಾತ್ರಿಯೆಲ್ಲಾ ಚಳಿಯಲ್ಲಿದ್ದದರಿಂದ ಆಕೆಯ ಕೈಕಾಲುಗಳು ಮರಗಟ್ಟಿಹೋಗಿದ್ದವು. ಬೆಳಿಗ್ಗೆ ಬಾಗಿಲು ತೆರೆದಾಗ ಎದ್ದು ಒಳಗೆ ಹೋಗಲಾಗದೆ ಬಿದ್ದುಬಿಟ್ಟಳು. ಸ್ಮಿತ್‌ರವರು ಆಕೆಯನ್ನು ಎತ್ತಿಕೊಂಡು ಹೋಗಿ ಒಲೆಯ ಮುಂದೆ ಮಲಗಿಸಿದರು. ಆ ಶಾಖಕ್ಕೆ ಸ್ವಲ್ಪಹೊತ್ತಿನಲ್ಲಿ ಆಕೆ ಎದ್ದು ದಿನನಿತ್ಯದಂತೆ ತಿಂಡಿ ಕಾಫಿಯನ್ನು ತಯಾರಿಸಿ ಮುಗುಳ್ನಗೆಯಿಂದ ಗಂಡನಿಗೆ ಉಣಬಡಿಸಿದಳು. ಆಕೆಯ ಪ್ರೀತಿಯನ್ನು ಕಂಡ ಸ್ಮಿತ್‌ರವರ ಹೃದಯ ಕರಗಿತು. ಕ್ರಿಸ್ತನನ್ನು ಅಂಗೀಕರಿಸಿ ದೈವಭಕ್ತರಾದರು. ಆತನ ಹೆಂಡತಿ ಅಂದು ತೋರಿಸಿದ ಪ್ರೀತಿ ಅವರನ್ನು ಸುಪ್ರಸಿದ್ಧವಾದ ದೈವಭಕ್ತನನ್ನಾಗಿ ಮಾರ್ಪಡಿಸಿತು.

ದೇವಮಕ್ಕಳೇ, ಪ್ರೀತಿ ಎಂಬ ಆತ್ಮನ ಫಲ, ನಿಮಗೆ ನಿಶ್ಚಯವಾಗಿ ಅಗತ್ಯವಾದದ್ದು. ಅದರಿಂದ ನಿಮ್ಮೊಳಗಿರುವ ದ್ವೇಷ, ಕೋಪ, ವೈರಾಗ್ಯಗಳನ್ನು ಜಯಿಸಲು ಸಾಧ್ಯ. ಕ್ಷಮಿಸಲಾಗದಂಥವರನ್ನೂ ಕ್ಷಮಿಸಲು ಸಾಧ್ಯ. ಈ ಫಲದಿಂದ ನೀವು ಅನೇಕ ಆತ್ಮಗಳನ್ನು ಕರ್ತನಿಗಾಗಿ ಗೆಲ್ಲಬಹುದು.

*ನೆನಪಿಗೆ : ಹೀಗಿರುವದರಿಂದ ನಂಬಿಕೆ ನಿರೀಕ್ಷೆ ಪ್ರೀತಿ ಈ ಮೂರೇ ನಿಲ್ಲುತ್ತವೆ. ಇವುಗಳಲ್ಲಿ ದೊಡ್ಡದು ಪ್ರೀತಿಯೇ (1 ಕೊರಿಂ. 13:13).*

ನವೆಂಬರ್ 12

## ಆತ್ಮನ ಫಲ!

ಬೆಳಿಗ್ಗೆ : ಯೆರೆ. 51,52
ಸಂಜೆ : ಇಬ್ರಿ. 9

"ನನ್ನಲ್ಲಿರುವ ಆನಂದವು ನಿಮ್ಮಲ್ಲಿಯೂ ಇರಬೇಕೆಂತಲೂ, ನಿಮ್ಮ ಆನಂದವು, ಪರಿಪೂರ್ಣವಾಗಬೇಕೆಂತಲೂ ಇದನ್ನೆಲ್ಲಾ ನಿಮಗೆ ಹೇಳಿದ್ದೇನೆ" (ಯೋಹಾನ 15:11).

"ನನ್ನ ಆನಂದ" ಎಂದು ಯೇಸುಕ್ರಿಸ್ತನು ಇತರ ಸಂತೋಷಗಳನ್ನು ಬಿಟ್ಟು ಹೇಳುತ್ತಾನೆ. ಪ್ರತಿಯೊಬ್ಬ ಮನುಷ್ಯನಿಗೂ ಸಹಜವಾದ ಸಂತೋಷ ಇರುವದು. ಬಾಯಿಗೆ ರುಚಿಯಾದ ಆಹಾರ ಸಂತೋಷಪಡಿಸುವದು. ಶುಭ ಸಮಾಚಾರವನ್ನು ಕೇಳುವಾಗ ಸಂತೋಷವಾಗುವದು. ನೌಕರಿ ಸಿಕ್ಕಿದರೆ, ಅದರಲ್ಲಿ ಬಡ್ತಿ ಸಿಕ್ಕಿದರೆ ಹೀಗೆ ನಾನಾ ರೀತಿಯ ಸಂತೋಷವನ್ನು ಮನುಷ್ಯನು ಅನುಭವಿಸುವನು. ಅದೇ ವೇಳೆಯಲ್ಲಿ ಅನಿತ್ಯವಾದ ಪಾಪ ಭೋಗಗಳಿಂದ ಉಂಟಾಗುವ ಆನಂದವೂ ಇರುವದು (ಇಬ್ರಿ. 11:25). ಸೈತಾನನು ಲೋಕದ ಪಾಪ ಭೋಗಗಳನ್ನು ಉಲ್ಲಾಸಗಳನ್ನು ತೋರಿಸಿ "ಇದುವೇ ಸಂತೋಷ ಅನುಭವಿಸು" ಎಂದು ಹೇಳುವನು. ಆದರೆ ಅವುಗಳೋ ಕೊನೆಯಲ್ಲಿ ಒಬ್ಬನನ್ನು ಮಹಾ ವೇದನೆಗೆ ನಡೆಸುವದು.

ಯೇಸುಕ್ರಿಸ್ತನ ಆಕಾಂಕ್ಷೆ ಏನು? ಆತನ ಆನಂದವು ನಿಮ್ಮೊಳಗೆ ನೆಲೆಯಾಗಿರಬೇಕು. ನಿಮ್ಮ ಸಂತೋಷವು ಪರಿಪೂರ್ಣವಾಗಿರಬೇಕು ಎಂಬುದೇ. ಅದಕ್ಕಾಗಿಯೇ ಪಾಪಕ್ಷಮಾಪಣೆಯನ್ನೂ, ರಕ್ಷಣೆಯ ಸಂತೋಷವನ್ನೂ ನಿಮ್ಮೊಳಗೆ ತುಂಬುವನು (ಯೆಶಾ.12:3, 1 ಸಮು.2:1) ಪವಿತ್ರಾತ್ಮನಿಂದ ತುಂಬುವನು. "ದೇವರ ರಾಜ್ಯ ತಿನ್ನುವದೂ ಕುಡಿಯುವದೂ ಅಲ್ಲ, ಅದು ನೀತಿಯೂ, ಸಮಾಧಾನವೂ ಪವಿತ್ರಾತ್ಮನಿಂದುಂಟಾಗುವ ಆನಂದವೂ ಆಗಿದೆ" (ರೋಮಾ.14:17). ಕ್ರಿಸ್ತನು ನಿಮ್ಮೊಂದಿಗಿರುವುದಾದರೆ ಯಾವ ಸ್ಥಿತಿಯಲ್ಲಿಯೂ, ನಿಮ್ಮಿಂದ ಸಂತೋಷವಾಗಿ ಇರಲು ಸಾಧ್ಯ. ಅಪೊ. ಪೌಲನು ರೋಮಾಪುರದ ಸೆರೆಮನೆಯಲ್ಲಿ ಇದ್ದರೂ ಸಹ ಫಿಲಿಫಿಯರಿಗೆ "ಯಾವಾಗಲೂ ಕರ್ತನಲ್ಲಿ ಸಂತೋಷಿಸಿರಿ" (ಫಿಲಿ. 4:4) ಎಂದು ಬರೆಯುತ್ತಾನೆ. ಲೋಕದಲ್ಲಿ ನಿಮಗೆ ಉಪದ್ರವ ಉಂಟು, ಹೋರಾಟಗಳಿರುವವು. ಸಮಸ್ಯೆಗಳಿರುವವು. ಆದರೂ ಕರ್ತನ ಮೇಲೆ ನಿಮ್ಮ ಭಾರವನ್ನು ಹಾಕಿ ಪವಿತ್ರಾತ್ಮನಿಂದ ತುಂಬಲ್ಪಟ್ಟು ಆತ್ಮದಲ್ಲಿ ಸಂತೋಷಿಸಿರಿ. ಅಂಜೂರದ ಮರ ಚಿಗುರದಿದ್ದರೂ, ಹಟ್ಟಿಯಲ್ಲಿ ಮಂದೆಗಳೂ ಇಲ್ಲದಿದ್ದರೂ... ನಾನು ಯೆಹೋವನಲ್ಲಿ ಉಲ್ಲಾಸಿಸುವೆನು ಎಂದು ಹಬಕ್ಕೂಕನು ಹೇಳುತ್ತಾನೆ. (ಹಬ. 3:17,18).

ದೇವಮಕ್ಕಳೇ, ಒಂದು ವೇಳೆ ನಿಮ್ಮ ಜೀವಿತದಲ್ಲಿ ಕಷ್ಟ, ನಷ್ಟ, ದುಃಖ, ಚಿಂತೆಗಳಿರಬಹುದು. ಕ್ರಿಸ್ತನನ್ನು ದೃಷ್ಟಿಸಿ ನೋಡಿರಿ. ಆತನು ದುಃಖವನ್ನು, ಸಂತೋಷವಾಗಿಯೂ, ನಷ್ಟವನ್ನು ಲಾಭವಾಗಿಯೂ ಮಾರ್ಪಡಿಸಲು ಶಕ್ತನಾಗಿರುವನು.

*ನೆನಪಿಗೆ : ಧಾನ್ಯ ದ್ರಾಕ್ಷೆಗಳು ಸಮೃದ್ಧಿಯಾಗಿ ಬೆಳೆದ ಸುಗ್ಗಿಕಾಲದಲ್ಲಿ ಅವರಿಗಿರುವ ಸಂತೋಷಕ್ಕಿಂತಲೂ ನೀನು ನನ್ನ ಹೃದಯಲ್ಲಿ ಹೆಚ್ಚಾದ ಆನಂದವನ್ನು ಉಂಟುಮಾಡಿದ್ದೀ (ಕೀರ್ತ. 4:7).*



ನವೆಂಬರ್ 13

## ಸಂತೋಷವಾಗಿರ್ರಿ!

ಬೆಳಿಗ್ಗೆ : ಪ್ರಲಾಪ 1,2
ಸಂಜೆ : ಇಬ್ರಿ. 10:1–18

"ಕ್ರೈಸ್ತರು ನಿರೀಕ್ಷಿಸುವ ಮಹಾ ಪದವಿಯನ್ನು ನೆನಸಿ ಉಲ್ಲಾಸವಾಗಿರ್ರಿ. ಉಪದ್ರವದಲ್ಲಿ ಸೈರಣೆ ಉಳ್ಳವರಾಗಿರ್ರಿ. ಬೇಸರಗೊಳ್ಳದೆ ಪ್ರಾರ್ಥನೆ ಮಾಡಿರಿ (ರೋಮಾ. 12:12).

ಒಮ್ಮೆ ತಮಿಳುನಾಡಿನಲ್ಲಿರುವ ಟೋನಾವೋಶಿ ಎಂಬ ಸ್ಥಳದಲ್ಲಿ ವಾಸವಾಗಿದ್ದು ತ್ಯಾಗಪೂರಕವಾಗಿ ಸೇವೆ ಮಾಡುತ್ತಿದ್ದ ಏಮಿಕಾಲ್ ಮೈಕಲ್ ಎಂಬ ಸಹೋದರಿಯನ್ನು ನೋಡಲು ಬಿಲ್ಲಿಗ್ರಾಹಂ ಎಂಬ ಪಂಡಿತರು ಬಂದರು. ಆಕೆ ಆ ಸಮಯದಲ್ಲಿ ಬಹಳ ಖಾಯಿಲೆಯಿಂದ ಬಹಳ ವರ್ಷಗಳಿಂದ ಹಾಸಿಗೆ ಹಿಡಿದಿದ್ದರು. ಆದಾಗ್ಯೂ ಆಕೆ ಬಹಳ ಸಂತೋಷದಿಂದ ಉತ್ಸಾಹದಿಂದ, ತೃಪ್ತಿಯಿಂದ ಇರುವದನ್ನು ಕಂಡ ಬಿಲ್ಲಿಗ್ರಾಹಂರವರಿಗೆ ಬಹಳ ಆಶ್ಚರ್ಯ ಉಂಟಾಯಿತು.

ಆಗ ಏಮಿಕಾಲ್ ಮೈಕಲ್ ಅಮ್ಮನವರು "ಅಯ್ಯಾ, ಕರ್ತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲವೂ ಒಳ್ಳೆಯದಾಗಿಯೇ ನಡೆಯುವದು. ನಾನು ಒಂದೊಂದು ನಿಮಿಷವನ್ನೂ ಪುಸ್ತಕಗಳನ್ನು ಬರೆಯುವದರಲ್ಲಿ ವಿನಿಯೋಗಿಸಿದೆನು. ನನ್ನನ್ನು ನೋಡಲು ಬರುವವರಿಗೆಲ್ಲಾ ಆಲೋಚನೆಗಳನ್ನು ನೀಡಿದೆನು. ಒಂದು ನಿಮಿಷವನ್ನೂ ನಾನು ವ್ಯರ್ಥಮಾಡುವದಿಲ್ಲ" ಎಂದರು. ಸಂಕಟಗಳ ಮಧ್ಯದಲ್ಲಿಯೂ ಆಕೆಯ ಮುಖದಲ್ಲಿ ದೈವೀಕ ಸಂತೋಷ ಎದ್ದು ಕಾಣುತ್ತಿತ್ತು. ಆಪೊ.ಯಾಕೋಬನು ಹೀಗೆ ಬರೆಯುತ್ತಾನೆ "ನನ್ನ ಸಹೋದರರೇ, ನಿಮ್ಮ ನಂಬಿಕೆಗೆ ಉಂಟಾಗುವ ಪರಿಶೋಧನೆಯು ತಾಳ್ಮೆಯನ್ನುಂಟು ಮಾಡುತ್ತದೆಂದು ತಿಳಿದು ನೀವು ನಾನಾ ವಿಧವಾದ ಕಷ್ಟಗಳಲ್ಲಿ ಬಿದ್ದಿರುವಾಗ ಅದನ್ನು ಕೇವಲ ಆನಂದಕರವಾದದ್ದೆಂದು ಎಣಿಸಿರಿ" ಎಂದು (ಯಾಕೋಬ. 1:2,3). ನಮಗೆ ಸಾವಿರಾರು ರೀತಿಯಲ್ಲಿ ಸಂತೋಷ ಉಂಟು. ಆದರೆ ಕ್ರಿಸ್ತನು ನಮ್ಮೊಂದಿಗೆ ಇರುವದರಿಂದ ದೊಡ್ಡ ಸಂತೋಷ "ನಾನು ನಿನ್ನನ್ನು ಬಿಟ್ಟು ಅಗಲುವದಿಲ್ಲ. ನಿನ್ನನ್ನು ಕೈಬಿಡುವದಿಲ್ಲ" ಎಂದು ಕರ್ತನು ಹೇಳಿರುವನು. ದೇವರ ಮಾತುಗಳಿಂದ ಸಂತೋಷ ಉಂಟಾಗುತ್ತದೆ (ಯೆರೆ. 15:16). ಮದಲಿಂಗನ ಮೆಲುಧ್ವನಿಯಿಂದ ಸಂತೋಷ ಉಂಟಾಗುತ್ತದೆ (ಯೋಹಾ. 3:29). ಸತ್ಯಕ್ಕೆ ಜಯ ಉಂಟಾಗುವಾಗ ಸಂತೋಷವಾಗುತ್ತದೆ (1 ಕೊರಿಂ. 13:6). ಕರ್ತನ ಆನಂದದ ಅಭಿಷೇಕ ತೈಲ ನಮ್ಮ ಮೇಲೆ ಸುರಿಸಲ್ಪಡುವಾಗ ಸಂತೋಷ ಉಂಟಾಗುತ್ತದೆ (ಲೂಕ. 20:21).

ದೇವಮಕ್ಕಳೇ, ಇಂದು ಕರ್ತನು ಆ ಆನಂದ ತೈಲದ ಅಭಿಷೇಕವನ್ನು ಪವಿತ್ರಾತ್ಮನ ಸಂತೋಷವನ್ನು ನಿಮಗೆ ನೀಡಲು ಬಯಸುವನು. ಅದಕ್ಕಾಗಿಯೇ ಆತನು ಈ ಭೂಮಿಗೆ ಬಂದನು. ಪ್ರಿಯರೇ, ಯಾವಾಗಲೂ ಸಂತೋಷವಾಗಿರ್ರಿ. ಸಂತೋಷವು ಆಂತರ್ಯದಲ್ಲಿ ಬಲವನ್ನು ನಿಮಗೆ ನೀಡುವದು. ಕರ್ತನಲ್ಲಿ ಸಂತೋಷಿಸುವದೇ ನಿಮ್ಮ ಬಲ (ನೆಹೆಮಿ 8:10).

*ನೆನಪಿಗೆ : ಹರ್ಷಹೃದಯವು ಒಳ್ಳೇ ಔಷಧ. ಕುಗ್ಗಿದ ಮನದಿಂದ ಒಣ ಮೈ (ಜ್ಞಾನೋ.17:22).*

ನವೆಂಬರ್ 14

## ಸಂತೋಷ ಎಲ್ಲಿ!

ಬೆಳಿಗ್ಗೆ : ಪ್ರಲಾಪ 3,4,5
ಸಂಜೆ : ಇಬ್ರಿ. 10:19–39

"ನಿನ್ನ ದರ್ಶನವನ್ನು ಕೋರುವವರೆಲ್ಲರು ನಿನ್ನಲ್ಲಿ ಉಲ್ಲಾಸದಿಂದ ಸಂತೋಷಿಸಲಿ" (ಕೀರ್ತನೆ 40:16, 70:4).

ಒಂದು ಊರಿನಲ್ಲಿ ಒಬ್ಬ ಅರಸನಿದ್ದನು. ಯಾವಾಗಲೂ ಯಾವುದಾದರೂ ಒಂದು ಕಾರ್ಯವನ್ನು ಕುರಿತು ಚಿಂತೆ ಮಾಡುತ್ತಲೇ ಇರುವದು ಆತನ ಪರಿಪಾಠ. ಇದರಿಂದ ಅವನು ಬಹಳ ಅಸ್ವಸ್ಥಗೊಂಡು ದೇಹ ಕ್ಷೀಣಿಸುತ್ತಾ ಹೋಯಿತು. ವೈದ್ಯರು ಅವನ ಬಳಿ ಬಂದು ನೀವು ಯಾವಾಗಲೂ ಸಂತೋಷದಿಂದಿರಬೇಕು. ಅದುವೇ ಮಾತ್ರೆ, ಔಷಧಿ, ಟಾನಿಕ್ ಎಲ್ಲಾ ಅಂದರು.

ಒಬ್ಬ ವೈದ್ಯನು, ಆಶ್ಚರ್ಯಕರವಾದ ಆಲೋಚನೆಯನ್ನು ಹೇಳಿದನು. ಅರಸನೇ, ಸಂತೋಷವಾಗಿರುವ ಒಬ್ಬ ಮನುಷ್ಯನನ್ನು ಹುಡುಕಿ, ಅವನ ಮೇಲಂಗಿಯನ್ನು ತಂದು ನಿಮ್ಮ ಮೇಲೆ ಹಾಕಲಿ. ಆಗ ನಿಮ್ಮ ವ್ಯಾಧಿ ಗುಣವಾಗುವದು, ಆರೋಗ್ಯ ಹೊಂದುವಿರಿ ಎಂದು ಹೇಳಿದನು. ಆದರೆ ಸಂತೋಷದಿಂದ ಕೂಡಿದ ಮನುಷ್ಯನನ್ನು ಹುಡುಕುವದು ಸಾಧಾರಣ ಕಾರ್ಯವಾಗಿರಲಿಲ್ಲ. ಲೋಕದಲ್ಲಿ ಎಲ್ಲೆಲ್ಲಿಯೂ ದುಃಖ, ಚಿಂತೆಗಳೇ ತುಂಬಿರುವದು. ಸೈನಿಕರು ನಾಲ್ಕು ದಿಕ್ಕುಗಳಲ್ಲಿಯೂ ಸಂತೋಷದಿಂದ ಕೂಡಿದ ಮನುಷ್ಯನನ್ನು ಹುಡುಕಲು ಹೊರಟರು. ಕೊನೆಗೆ ಸಂತೋಷದಿಂದ ಕೂಡಿದ ಒಬ್ಬ ಮನುಷ್ಯನನ್ನು ಕಂಡುಹಿಡಿದರು. ಅವನು ಸಂತೋಷದಿಂದ ಹಾಡುತ್ತಾ ಸ್ತುತಿಸಿ, ಕುಣಿದು ಕುಪ್ಪಳಿಸುತ್ತಾ ಪರವಶನಾಗಿರುವದನ್ನು ಕಂಡರು. ಅವನನ್ನು ಹಾಗೆಯೇ ಎತ್ತಿಕೊಂಡು ಅರಸನ ಬಳಿ ಬಂದರು. ಅವನು ಅರಸನಿಗೆ ನಮಸ್ಕರಿಸಿ "ಅರಸನೇ, ಇದುವರೆಗೆ ನನಗೆ ಮೇಲಂಗಿ ಇದ್ದದ್ದಿಲ್ಲ, ಅದರ ಕುರಿತು ಚಿಂತಿಸಲೂ ಇಲ್ಲ. ಲೆಕ್ಕಿಸಲೂ ಇಲ್ಲ" ಅಂದನು. ಅರಸನಿಗೆ ಏನು ಮಾಡುವದೆಂದು ತಿಳಿಯಲಿಲ್ಲ. ಪ್ರಪಂಚ ವಸ್ತುಗಳಾಗಲಿ, ಆಸ್ತಿಯಾಗಲಿ, ಸಂಪತ್ತಾಗಲಿ, ಹೆಸರಾಗಲಿ, ಹೊಗಳಿಕೆಯಾಗಲಿ ಒಬ್ಬನಿಗೆ ಸಂತೋಷವನ್ನು ಕೊಡುವದಿಲ್ಲ. ಸಂತೋಷವನ್ನು ಕೊಡುವವನು ಯೇಸುಕ್ರಿಸ್ತನೊಬ್ಬನೇ. "ನಿಮ್ಮ ಆನಂದವು ಪರಿಪೂರ್ಣವಾಗಬೇಕೆಂತಲೂ ಇದೆಲ್ಲವನ್ನೂ ನಿಮಗೆ ಹೇಳಿದ್ದೇನೆ" (ಯೋಹಾ. 15:11) ಎಂದು ಆತನು ಹೇಳುವನು. ಯೇಸುಕ್ರಿಸ್ತನು ಈ ಲೋಕಕ್ಕೆ ಸಂತೋಷವನ್ನು ತಂದುಕೊಟ್ಟನು.

ದೇವಮಕ್ಕಳೆ, ಕ್ರಿಸ್ತನು ನಿಮ್ಮೊಳಗೆ ಜನಿಸಿರುವದಾದರೆ, ಅದನ್ನು ನೆನಸಿ ಯಾವಾಗಲೂ ಸಂತೋಷಪಡಿರಿ.

*ನೆನಪಿಗೆ : ನಮ್ಮ ಹೆಸರುಗಳು ಪರಲೋಕದಲ್ಲಿ ಬರೆದಿರುತ್ತವೆ ಎಂದು ಸಂತೋಷಪಡಿರಿ (ಲೂಕ.10:20).*



ನವೆಂಬರ್ 15

## ಆತ್ಮನಫಲ ಸಮಾಧಾನ!

ಬೆಳಿಗ್ಗೆ : ಯೆಹೆ. 1,2
ಸಂಜೆ : ಇಬ್ರಿ. 11:1–19

"ಶಾಂತಿಯನ್ನು ನಿಮಗೆ ಬಿಟ್ಟುಹೋಗುತ್ತೇನೆ. ನನ್ನಲ್ಲಿರುವಂಥ ಶಾಂತಿಯನ್ನು ನಿಮಗೆ ಕೊಡುತ್ತೇನೆ" (ಯೋಹಾ. 14:27).

"ದೈವೀಕ ಸಮಾಧಾನ ಪೂರ್ಣವಾದ ಸಮಾಧಾನ" ದೇವರ ಮಕ್ಕಳಾದ ನಮ್ಮ ಜನ್ಮಸಿದ್ಧ ಹಕ್ಕು ಈ ಸಮಾಧಾನ. ನಿಮ್ಮೊಳಗೆ ಸಂತೋಷವನ್ನು ತರುವದು. ನೀವು ಅದನ್ನು ಇತರರಿಗೆ ಕೊಡುವಾಗ, ಅವರೂ ಸಮಾಧಾನ ಹೊಂದುವರು. ದೇವಸಮಾಧಾನ ಎಂಬದು ಎಲ್ಲಾ ಬುದ್ಧಿಗೂ ಮಿಂಚಿದ್ದು (ಫಿಲಿ. 4:7).

ದೇವರೂ, ಕುರಿಮರಿಯೂ ಆಗಿರುವಾತನ ಸಿಂಹಾಸನದಿಂದ ಪವಿತ್ರಾತ್ಮನು ನದಿಯಂತೆ ನಿಮ್ಮೊಳಗೆ ಸಮಾಧಾನವನ್ನು ತರುವನು. ಆ ದೇವಸಮಾಧಾನ, ನಿಮ್ಮ ಆಂತರ್ಯವನ್ನು ಆವರಿಸುವದು. ದೇವ ಪ್ರಸನ್ನತೆಯಿಂದ ಬರುವ ಸಮಾಧಾನ ನಿಮ್ಮನ್ನು ಅಪ್ಪಿಕೊಳ್ಳಲಿ. ಪ್ರವಾದಿಯಾದ ಯೆಶಾಯನು ಹೇಳುತ್ತಾನೆ–ಉನ್ನತಲೋಕದಿಂದ ದಿವ್ಯಾತ್ಮಧಾರೆಯು ನಮ್ಮ ಮೇಲೆ ಸುರಿಸಲ್ಪಡುವದು. ಆಗ ಅರಣ್ಯವು ತೋಟವಾಗುವದು (ಯೆಶಾ. 32:15) ಎಂದು. ಇಂದು ಅನೇಕ ಕುಟುಂಬಗಳಲ್ಲಿ ಸಮಾಧಾನ ಸಂತೋಷಗಳಿಲ್ಲದೆ ತತ್ತರಿಸುವರು. ದೇಶಗಳ ನಡುವೆ ಸಮಾಧಾನವಿಲ್ಲ. ದೇಶದ ನಾಯಕರು ಒಪ್ಪಂದಗಳನ್ನು ಮಾಡಿಕೊಂಡು ಸಮಾಧಾನ ಹೊಂದಲು ಪ್ರಯತ್ನಿಸುವರು. ಆದರೆ, ಕ್ರಿಸ್ತೇಸುವಲ್ಲದೆ ಸಮಾಧಾನಕ್ಕೆ ಬೇರೆ ಮಾರ್ಗವೇ ಇಲ್ಲ ಎಂಬುದನ್ನು ತಿಳಿಯದೇ ಹೋಗಿದ್ದಾರೆ. ಆತನೊಬ್ಬನೇ ಸಮಾಧಾನ ಕರ್ತನು. ಸಮಾಧಾನ ಪ್ರಭು (ಯೆಶಾ.9:6). ಸಮಾಧಾನ ಕಾರಣನು (ಮೀಕ. 5:5). ಸಮಾಧಾನದ ದೇವರು (ರೋಮಾ. 16:20). ಯಾರ್ಯಾರು ಆತನನ್ನು ಅಂಗೀಕರಿಸಿಕೊಳ್ಳುವರೋ ಅವರ ಕುಟುಂಬದಲ್ಲಿ ಸಮಾಧಾನ ಇರುವದು. ಅಂದು ಶಿಷ್ಯರು ಪ್ರಯಾಣಿಸಿದ ದೋಣಿಯನ್ನು ದೊಡ್ಡ ಅಲೆಗಳು ಅಪ್ಪಳಿಸಿದವು. ಆದರೆ ಯಾವಾಗ ಯೇಸು ಕ್ರಿಸ್ತನು ಆ ದೋಣಿಯನ್ನು ಹತ್ತಿದನೋ, ಬೀಸುತ್ತಿದ್ದ ಬಿರುಗಾಳಿ, ಭೋರ್ಗರೆಯುತ್ತಿದ್ದ ಸಮುದ್ರ ಸ್ತಬ್ಧವಾದವು. ಆ ಕ್ರಿಸ್ತನು ನಿಮ್ಮ ಮನೆಗೆ ಬಂದರೆ ಎಲ್ಲಾ ಬಿರುಗಾಳಿಗಳೂ ಅಡಗಿಹೋಗಿ ಸಮಾಧಾನ ಉಂಟಾಗಿಬಿಡುವದು. ಮನಶ್ಶಾಂತಿ ಉಂಟಾಗುವದು.

ದೇವಮಕ್ಕಳೇ, ನಿಮ್ಮ ಆಂತರ್ಯಗಳಲ್ಲಿ ಸಮಾಧಾನ ಬೇಕೆ? ಸಂತೋಷ ಬೇಕೆ? ಸಮಾಧಾನ ಪ್ರಭುವಾದ ಯೇಸುಕ್ರಿಸ್ತನನ್ನು ದೃಷ್ಟಿಸಿ ನೋಡಿರಿ. ಮಾತ್ರವಲ್ಲ, ಆತನನ್ನೇ ದೃಢವಾಗಿ ಹಿಡಿದುಕೊಳ್ಳಿರಿ. ಈ ಪ್ರಪಂಚವು ಹೋರಾಟವಾದ ಪ್ರಪಂಚ. ದುಃಖಗಳಿಂದ ತುಂಬಿದ ಪ್ರಪಂಚ. ಪ್ರಪಂಚದಲ್ಲಿ ಹೋರಾಟ ಉಂಟು. ಅಂಥಹ ಸಂದರ್ಭಗಳಲ್ಲಿ ಕ್ರಿಸ್ತನನ್ನು ಆಶ್ರಯಿಸಿ ಜೀವಿಸುವಾಗ ನಿಮ್ಮ ಜೀವಿತ ಸಮಾಧಾನಕರವಾದ ಜೀವಿತವಾಗಿರುವದು.

*ನೆನಪಿಗೆ : ನಿನ್ನ ಪೌಳಿಗೋಡೆಗಳೊಳಗೆ ಶುಭವುಂಟಾಗಲಿ; ನಿನ್ನ ಅರಮನೆಗಳಲ್ಲಿ ಸೌಭಾಗ್ಯವಿರಲಿ (ಕೀರ್ತ. 122:7).*

ನವೆಂಬರ್ 16

## ಸಮಾಧಾನ ಪಡಿಸುವವರು!

ಬೆಳಿಗ್ಗೆ : ಯೆಹೆ. 3,4
ಸಂಜೆ : ಇಬ್ರಿ. 11:20–40

"ಸಮಾಧಾನ ಪಡಿಸುವವರು ಧನ್ಯರು. ಅವರು ದೇವರ ಮಕ್ಕಳು ಅನ್ನಿಸಿಕೊಳ್ಳುವರು" (ಮತ್ತಾಯ5:9).

ಕರ್ತನಿಂದ ಸಮಾಧಾನ ಪಡೆದುಕೊಳ್ಳುವ ನೀವು ಸಮಾಧಾನ ಪಡಿಸುವವರಾಗಿ ಇರಬೇಕು. ಸಮಾಧಾನವನ್ನು ಕುಟುಂಬಗಳಲ್ಲಿ ತರಬೇಕು. ಚಾಡಿ ಹೇಳಿ ಕುಟುಂಬದಲ್ಲಿ ಸಮಾಧಾನ ಕೆಡಿಸುವವರು, ಕುಟುಂಬಗಳನ್ನು ಒಡೆಯುವರು ಇರುವರು. ಸಭೆಗಳನ್ನು ಒಡೆಯುವವರಿರುವರು. ಕುಟುಂಬದಲ್ಲಿ ಜಗಳವೆಬ್ಬಿಸಿ ಅದರಲ್ಲಿ ಲಾಭವನ್ನು ಹುಡುಕುವ ಗುಳ್ಳೇನರಿಗಳೂ ಇರುವರು. ಆದರೆ ದೇವಸಮಾಧಾನ ಪಡೆದಿರುವ ನೀವು ಒಡೆದ ಕುಟುಂಬಗಳನ್ನು ಒಂದುಗೂಡಿಸಬೇಕು. ಸಮಾಧಾನ ಕಳೆದುಕೊಂಡ ಗಂಡ ಹೆಂಡಿರ ನಡುವೆ ಪ್ರೀತಿ ಅನ್ಯೋನ್ಯತೆಯನ್ನು ಉಂಟುಮಾಡುವಂತೆ ಪ್ರಯತ್ನಿಸಬೇಕು.

ಒಮ್ಮೆ ಒಬ್ಬ ನಾಸ್ತಿಕವಾದಿ ತನ್ನ ಪ್ರಾಪಂಚಿಕ ಜ್ಞಾನವನ್ನೆಲ್ಲಾ ಉಪಯೋಗಿಸಿ ದೇವರೆಂಬುವನು ಇಲ್ಲವೇ ಇಲ್ಲ. ಹಾಗೊಂದು ವೇಳೆ ದೇವರೆಂಬುವನು ಇದ್ದರೂ ಆತನು ನಮಗೆ ಅಗತ್ಯವಿಲ್ಲ ಎಂದು ಮಾತನಾಡಿದನು. ಅದನ್ನು ಕೇಳಿದ ಒಬ್ಬ ಕ್ರೈಸ್ತ ಸಹೋದರನು ಅವನ ಬಳಿ, "ಅಯ್ಯಾ, ಒಂದು ಚಿಕ್ಕ ಇರುವೆಯನ್ನು ನೋಡಿರಿ! ಅದು ಎಷ್ಟು ತಾಳ್ಮೆಯಿಂದ ಓಡಾಡುವದು. ನಿಮ್ಮಿಂದ ಒಂದು ಚಿಕ್ಕ ಜೀವಂತ ಇರುವೆಯನ್ನು ಸೃಷ್ಟಿಸಲು ಸಾಧ್ಯವಾ? ಆ ಇರುವೆಯಲ್ಲಿರುವ ಸಮಾಧಾನವನ್ನು ಪಡೆಯಲು ಸಾಧ್ಯವಾ" ಎಂದು ಕೇಳಿದನು. ಆ ನಾಸ್ತಿಕವಾದಿ ಸ್ವಲ್ಪ ಯೋಚಿಸಿದನು. ಅವನು ಎಷ್ಟೋ ನಾಸ್ತಿಕವಾದವನ್ನು ಮಾತನಾಡಿದರೂ, ಅವನ ವೈಯಕ್ತಿಕ ಜೀವಿತದಲ್ಲಿ ಸಮಾಧಾನವಿಲ್ಲದೆ ತೊಳಲಾಡುತ್ತಿದ್ದನು. "ನಿಜವೇ, ಮಾನುಷಿಕ ಜ್ಞಾನದಿಂದ ಸಮಾಧಾನವನ್ನು ಪಡೆದುಕೊಳ್ಳಲು ಸಾಧ್ಯವಿಲ್ಲ" ಎಂಬುದನ್ನು ಒಪ್ಪಿಕೊಂಡನು. ಹೌದು, ದೇವಸಮಾಧಾನ ಎಂಬುದು ಕರ್ತನು ದಯಪಾಲಿಸುವ ಬಹುದೊಡ್ಡ ವರವಾಗಿದೆ. ಸನ್ನಿವೇಶಗಳು ಮಾರ್ಪಡುವವು, ಕಷ್ಟಗಳು ದೂರವಾಗುವವು, ಆದರೂ ಅವುಗಳೆಲ್ಲದರ ನಡುವೆ ದೇವಸಮಾಧಾನ ನೆಲೆಯಾಗಿ ನಿಲ್ಲುವದು.

ದೇವಮಕ್ಕಳೇ, ಸಮಾಧಾನ ಪ್ರಭುವಾದ ಯೇಸುಕ್ರಿಸ್ತನನ್ನು ಕೂಗಿಕರೆಯಿರಿ. ಆತನೇ ನಿಮಗೆ ಸಮಾಧಾನದ ಆತ್ಮವನ್ನು ನೀಡುವನು. ಯಾಕೆಂದರೆ ನನ್ನಲ್ಲಿರುವ ಸಮಾಧಾನವನ್ನು ನಿಮಗೆ ಬಿಟ್ಟುಹೋಗುತ್ತೇನೆ ಎಂದು ವಾಗ್ದಾನ ಮಾಡಿರುವನು.

*ನೆನಪಿಗೆ : ನಿನ್ನ ಧರ್ಮಶಾಸ್ತ್ರವನ್ನು ಪ್ರೀತಿಸುವವರಿಗೆ ಸಂಪೂರ್ಣ ಸಮಾಧಾನವಿರುತ್ತದೆ. ಅಂಥವರಿಗೆ ವಿಘ್ನಕರವಾದದ್ದೇನೂ ಇರುವದಿಲ್ಲ (ಕೀರ್ತ. 119:165).*



ನವೆಂಬರ್ 17

## ದೀರ್ಘಶಾಂತಿ!

ಬೆಳಿಗ್ಗೆ : ಯೆಹೆ. 5,6,7
ಸಂಜೆ : ಇಬ್ರಿ. 12

"ಆ ತಾಳ್ಮೆಯು ಸಿದ್ಧಿಗೆ ಬರಲಿ, ಆಗ ನೀವು ಶಿಕ್ಷಿತರೂ ಸರ್ವಸುಗುಣವುಳ್ಳವರೂ ಏನೂ ಕಡಿಮೆಯಿಲ್ಲದವರೂ ಆಗಿರುವಿರಿ" (ಯಾಕೋ. 1:4).

ಆತ್ಮನ ಫಲಗಳಲ್ಲಿ ನಾಲ್ಕನೆಯ ಫಲ ದೀರ್ಘಶಾಂತಿ. ಪ್ರಾಪಂಚಿಕರಿಗೆ ತಾಳ್ಮೆ ಇಲ್ಲ. ದೀರ್ಘಶಾಂತಿ ಇಲ್ಲ. ಎಲ್ಲದರಲ್ಲಿಯೂ ಆತುರ ಎಲ್ಲವೂ ದಿಢೀರೆಂದು ನಡೆಯಬೇಕು. ದಿಢೀರ್ ಇಡ್ಲಿ, ದಿಢೀರ್ ವಡೆ, ದಿಢೀರ್ ಕಾಫಿ ಎಂದು ಎಲ್ಲವೂ ಕೂಡಲೇ ಆಗಬೇಕೆಂದು ನಿರೀಕ್ಷಿಸುವ ಪ್ರಪಂಚವಾಗಿದೆ.

"ಆತುರಗಾರನಿಗೆ ಬುದ್ಧಿ ಮಟ್ಟ" ಎಂಬುದು ಗಾದೆ. ಆದರೆ ತಾಳ್ಮೆಯುಳ್ಳವರು ಭೂಮಿಯನ್ನು ಆಳುವರು (ಮತ್ತಾ. 5:5). ಕ್ರಿಸ್ತನ ಸ್ವಭಾವದಲ್ಲಿ ನೀವು ಪೂರ್ಣತೆಯನ್ನು ಪಡೆಯಬೇಕಾದರೆ ತಾಳ್ಮೆ ಬಹಳ ಅವಶ್ಯ. ಕರ್ತನು ನಿಮ್ಮನ್ನು ತಕ್ಕ ಕಾಲದಲ್ಲಿ ಉನ್ನತಿಗೆ ತರಲು ತಾಳ್ಮೆ ನಿಮಗೆ ಇರಬೇಕು. ಕರ್ತನ ಪಾದದಲ್ಲಿ ತಾಳ್ಮೆಯಿಂದ ಕಾದಿದ್ದು, ಪೂರ್ಣವಾದ ಆಶೀರ್ವಾದಗಳನ್ನು ಫಲವನ್ನು ಪಡೆದುಕೊಳ್ಳಿರಿ. ಒಮ್ಮೆ ಒಬ್ಬ ಮನುಷ್ಯನು ಕರ್ತನ ಆಲಯದ ಒಳಗೆ ಓಡಿಬಂದನು. ಆಲ್ಟರಿಗೆ ಹೋಗಿ, ಮೊಳಕಾಲೂರಿ "ದೇವರೇ, ನನಗೆ ದೀರ್ಘ ಶಾಂತಿಯನ್ನು ನೀಡು. ಈಗಲೇ ನನಗೆ ಬೇಕು ದೇವರೇ" ಎಂದು ಹೇಳಿ ತಾಳ್ಮೆಯಿಲ್ಲದೆ ಎದ್ದು ಹೊರಟುಹೋದನು. ಕೆಲವರಿಗೆ ಚಿಕ್ಕದಾದ ಪ್ರಾರ್ಥನೆಗೆ ದೊಡ್ಡದಾದ ಆಶೀರ್ವಾದ ಬೇಕೆಂದು ನಿರೀಕ್ಷಿಸುತ್ತಾರೆ. ಒಬ್ಬನು ಒಂದು ಮರವನ್ನು ನೆಡುವನೆಂದರೆ ಅದು ಕೂಡಲೇ ಫಲವನ್ನು ಕೊಡುವದಿಲ್ಲ. ಅದು ಬೆಳೆಯಬೇಕು. ಮರವನ್ನು ನೆಟ್ಟು ಎರಡು ಮೂರು ವರ್ಷಗಳ ನಂತರವೇ ಹೂಬಿಟ್ಟು ಕಾಯಾಗಿ ಕಾಯಿ ಮಾಗಿ ಹಣ್ಣಾಗುವದು. ಮದುವೆಯಾದ ಕೂಡಲೇ ಮಕ್ಕಳಾಗುವದಿಲ್ಲ. ನೀವು ಬಯಸಿದವುಗಳಿಗಾಗಿ ತಾಳ್ಮೆಯಿಂದ ಪ್ರಾರ್ಥನೆಯೊಂದಿಗೆ ಕಾದಿರುವಾಗ ಕರ್ತನು ತನ್ನ ಸಮಯದಲ್ಲಿ ನಿಮಗೆ ಅನುಗ್ರಹಿಸುವನು. ನೀವು ರಕ್ಷಣೆಯನ್ನು ಒಂದೇ ದಿನದಲ್ಲಿ ಪಡೆಯಬಹುದು. ಪವಿತ್ರಾತ್ಮನ ಅಭಿಷೇಕವನ್ನು ಒಂದೇ ದಿನದಲ್ಲಿ ಪಡೆಯಬಹುದು. ಆದರೆ, ಆತ್ಮನ ಫಲಗಳು ಕಾಣಲ್ಪಡಲು ಕ್ರಿಸ್ತನ ಸ್ವಭಾವ ನಿಮ್ಮೊಳಗೆ ಪೂರ್ಣಪಡಲು, ನೀವು ಪ್ರಾರ್ಥನೆಯಲ್ಲೂ ಸತ್ಯವೇದ ಧ್ಯಾನದಲ್ಲೂ, ದೇವಜನರೊಂದಿಗಿನ ಅನ್ಯೋನ್ಯತೆಯಲ್ಲಿಯೂ ಕಾದಿರಬೇಕಾದದ್ದು ಅಗತ್ಯವಾದದು. ಇದಕ್ಕೆ ದೀರ್ಘಶಾಂತಿ ಬೇಕು.

ದೇವಮಕ್ಕಳೇ, ಹೇಗೆ ಒಬ್ಬ ಚಿನಿವಾರನು ಬಂಗಾರವನ್ನು ಶುದ್ಧೀಕರಿಸಿ, ತಾಳ್ಮೆಯಿಂದ ನಾಜೂಕಾದ ಒಡವೆಗಳನ್ನು ಮಾಡುವನೋ, ಕರ್ತನೂ ಹಾಗೇ, ತನ್ನ ಮಕ್ಕಳನ್ನು ಶುದ್ಧೀಕರಿಸಿ ತನ್ನಂತೆ ರೂಪಿಸುವನು. ಆದ್ದರಿಂದ ಕರ್ತನ ಕೈಗೆ ನಿಮ್ಮನ್ನು ಒಪ್ಪಿಸಿ ತಾಳ್ಮೆಯಿಂದ ಕಾದಿರ್ರಿ.

*ನೆನಪಿಗೆ : ಕರ್ತನಾದರೋ ನನ್ನ ದಾರಿಯನ್ನು ಬಲ್ಲನು. ಆತನೇ ನನ್ನನ್ನು ಶೋಧಿಸಿ ನೋಡಿದರೆ, ಚೊಕ್ಕ ಬಂಗಾರವಾಗಿ ಕಾಣಿಸುವೆನು (ಯೋಬ. 23:10).*

ನವೆಂಬರ್ 18

## ಕರ್ತನ ತಾಳ್ಮೆ!

ಬೆಳಿಗ್ಗೆ : ಯೆಹೆ. 8,9,10
ಸಂಜೆ : ಇಬ್ರಿ. 13

"ಯಾವನಾದರೂ ನಾಶವಾಗುವದರಲ್ಲಿ ಆತನು ಇಷ್ಟಪಡದೆ ಎಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪೇಕ್ಷಿಸುವವನಾಗಿದ್ದು, ನಿಮ್ಮ ವಿಷಯದಲ್ಲಿ ದೀರ್ಘ ಶಾಂತಿಯಳ್ಳವನಾಗಿದ್ದಾನೆ" (2ಪೇತ್ರ. 3:9).

ಕರ್ತನಾದ ಯೇಸುಕ್ರಿಸ್ತನು ತಾಳ್ಮೆಯ ಸ್ವಭಾವವನ್ನು ಅಪೊ. ಪೇತ್ರನು ತನ್ನ ವೈಯಕ್ತಿಕ ಜೀವಿತದಲ್ಲಿ ಕಂಡಾತನಾಗಿದ್ದನು. ಹಲವು ವೇಳೆಗಳಲ್ಲಿ ತಾನು ಏನು ಮಾತನಾಡುತ್ತಿದ್ದೇನೆಂದು ಅರಿಯದವನಾಗಿ ದುಡುಕಿ ಮಾತನಾಡಿದ ಪೇತ್ರನೊಂದಿಗೆ ಕರ್ತನು ತಾಳ್ಮೆಯುಳ್ಳವನಾಗಿಯೇ ಇದ್ದನು. ಕ್ರಿಸ್ತೇಸುವನ್ನು ಹಿಡಿದುಕೊಡಲ್ಪಟ್ಟ ದಿನದಲ್ಲಿ, ಪೇತ್ರನು ಆತನನ್ನು ಶಪಿಸಿ, ಆಣೆ ಇಟ್ಟರೂ ಸಹಾ, ಕರ್ತನಾದರೋ ತಾಳ್ಮೆಯಿಂದ ಇದ್ದನು. ಆದ್ದರಿಂದಲೇ ಪೇತ್ರನು ಬರೆದ ಎರಡು ಪತ್ರಿಕೆಗಳಲ್ಲೂ ಕರ್ತನ ತಾಳ್ಮೆಯನ್ನು ಕುರಿತು ಬರೆದಿರುವನು (1 ಪೇತ್ರ 3:20, 2 ಪೇತ್ರ 3:9).

ಕರ್ತನ ತಾಳ್ಮೆಯನ್ನು ಉದಾಸೀನ ಮಾಡದೆ, ಆತನನ್ನು ಅಂಗೀಕರಿಸಿಕೊಂಡು ರಕ್ಷಣೆ ಹೊಂದುವಿರಾದರೆ, ಭಾಗ್ಯವಂತರಾಗಿರುವಿರಿ. ಕರ್ತನ ಬರುವಿಕೆಯು ಸಮೀಪವಾಗುತ್ತಿದೆ. ಪ್ರಪಂಚದಲ್ಲೆಲ್ಲಾ ಕರ್ತನ ಬರುವಿಕೆಯ ಸೂಚನೆಗಳು ಪ್ರಕಟವಾಗುತ್ತಿವೆ. ಕರ್ತನ ಸುಮಾರು ಪ್ರವಾದನೆಗಳು ಈಗಾಗಲೇ ನೆರವೇರಿದೆ. ರಕ್ಷಣೆಯ ನಾವೆಯನ್ನು ಕರ್ತನು ತೆರೆದಿಟ್ಟಿರುವನು. ಆದರೆ ಒಂದು ದಿನ ಬರುವದು, ನಿಶ್ಚಯವಾಗಿ ನಾವೆಯ ಬಾಗಿಲುಗಳು ಮುಚ್ಚಲ್ಪಡುವದು. ಆಗ ತವಕಿಸಿದರೂ, ಬಯಸಿದರೂ ಯಾವ ಪ್ರಯೋಜನವೂ ಆಗುವದಿಲ್ಲ. ಕರ್ತನ ಗುಣಾತಿಶಯಗಳಲ್ಲಿ ಒಂದು ದೀರ್ಘಶಾಂತಿ. ಆತನು ದಿಢೀರೆಂದು ಕೂಡಲೇ ನ್ಯಾಯತೀರ್ಪನ್ನು ಕೊಡುವದಿಲ್ಲ. ಅದನ್ನು ಕೀರ್ತನೆಗಾರನು ಸ್ಪಷ್ಟವಾಗಿ ತಿಳಿದಿದ್ದನು. ಆದ್ದರಿಂದಲೇ ಆತನು ದೇವರನ್ನು "ಕರ್ತನೇ, ನೀನು ಕನಿಕರವೂ, ದಯೆಯೂ ಉಳ್ಳ ದೇವರು; ದೀರ್ಘಶಾಂತನು ಬಹಳ ಪ್ರೀತಿಯೂ, ನಂಬಿಕೆಯೂ ಉಳ್ಳವನು" (ಕೀರ್ತ. 86:15) ಎಂದು ಬರೆಯುತ್ತಾನೆ.

ದೇವಮಕ್ಕಳೇ, ಬಿತ್ತಿದ ಒಡನೆಯೇ ಫಲವನ್ನು ಕಾಣಲಾಗದು, ತಾಳ್ಮೆ ಇರಬೇಕು. ನಿಮ್ಮ ತಾಳ್ಮೆಗೆ ನಿಶ್ಚಯವಾಗಿಯೇ ಫಲ ಇರುವದು. ನಿಮ್ಮ ತಾಳ್ಮೆಯನ್ನು ಕರ್ತನು ಘನಪಡಿಸುವನು. ಆದ್ದರಿಂದ ಕರ್ತನ ಆಶೀರ್ವಾದವನ್ನು ಪಡೆಯಲು ತಾಮಸದಿಂದಲೂ ತಾಳ್ಮೆಯಿಂದಲೂ ಕಾದಿರಿ. ವಾಗ್ದಾನ ಮಾಡಿದಾತನು ನಂಬಿಗಸ್ಥನು. ಆತನು ನಿಮಗೆ ಕೊಟ್ಟ ವಾಗ್ದಾನವನ್ನು ನಿಶ್ಚಯವಾಗಿ ನೆರವೇರಿಸುವನು.

*ನೆನಪಿಗೆ : "ನಾನು ಯೆಹೋವನಿಗೋಸ್ಕರ ನಿರೀಕ್ಷಿಸಿಯೇ ಆತನು ನನ್ನ ಮೊರೆಗೆ ಕಿವಿಗೊಟ್ಟು ಲಕ್ಷಿಸಿದನು" (ಕೀರ್ತ. 40:1).*



ನವೆಂಬರ್ 19

## ದೀನತೆಯೂ ಉನ್ನತಿಯೂ!

ಬೆಳಿಗ್ಗೆ : ಯೆಹೆ. 11,12,13
ಸಂಜೆ : ಯಾಕೋಬ 1

"ಹೀಗಿರಲಾಗಿ ದೇವರ ತ್ರಾಣವುಳ್ಳ ಹಸ್ತದ ಕೆಳಗೆ ನಿಮ್ಮನ್ನು ತಗ್ಗಿಸಿಕೊಳ್ಳಿರಿ. ಆತನು ತಕ್ಕ ಕಾಲದಲ್ಲಿ ನಿಮ್ಮನ್ನು ಮೇಲಕ್ಕೆ ತರುವನು" (1 ಪೇತ್ರ. 5:6).

ರುಮೇನಿಯಾ ದೇಶದಲ್ಲಿ ಬೋಧಕರ ಹೆಂಡತಿಯಾದ ಸಬೀನಾ ಉಂಬ್ರಾಡ್‌ರವರು ಕರ್ತನ ಮೇಲೆ ಇಟ್ಟ ಪ್ರೀತಿಯ ನಿಮಿತ್ತವೂ, ವಿಶ್ವಾಸದ ನಿಮಿತ್ತವೂ ಸೆರೆಹಿಡಿಯಲ್ಪಟ್ಟು, ಏಳು ವರ್ಷಗಳು ಭಯಂಕರವಾದ ದಂಡನೆಯನ್ನು ಸೆರೆಮನೆಯಲ್ಲಿ ಅನುಭವಿಸಬೇಕಾಯಿತು. ಆಕೆ ದೇವನಂಬಿಕೆಯಲ್ಲಿ ದೃಢವಾಗಿ ನಿಂತದ್ದನ್ನು ಕಂಡ ಸೆರೆಮನೆಯ ಅಧಿಕಾರಿ ದೇಹದಲ್ಲಿ ರಕ್ತ ಒಸರುವವರೆಗೆ ಕೊರಡೆಗಳಿಂದ ಹೊಡೆದನು. ಅಂಥಹ ಸಮಯದಲ್ಲೂ ಆಕೆಯ ಬಾಯಿಂದ ದೇವರ ಕುರಿತಾಗಲಿ ಅಧಿಕಾರಿಯ ಕುರಿತಾಗಲಿ ದೂಷಣೆಯ ಮಾತುಗಳು ಬರಲಿಲ್ಲ. ಆಕೆಯನ್ನು ಬೆತ್ತಲೆ ಮಾಡಿ ಅವಳ ಎದೆಯ ಮೇಲೆ ತನ್ನ ಬೂಟಿನ ಕಾಲನ್ನು ಅಧಿಕಾರಿ ಇಟ್ಟು ತುಳಿದಾಗ ಆಕೆಯ ಶ್ವಾಸಕೋಶದ ಮೂರು ಎಲುಬುಗಳು ಮುರಿದುಹೋದಾಗಲೂ ಆಕೆಯು ದೇವರನ್ನು ಸ್ತುತಿಸುತ್ತಾ ಆ ಅಧಿಕಾರಿಯನ್ನು ಆಶೀರ್ವದಿಸಿದಳು. ಅದನ್ನು ಕಂಡ ಅಧಿಕಾರಿ "ನೀನು ಇಷ್ಟೊಂದು ಹಿಂಸೆಯ ನಡುವೆಯೂ ದೇವರನ್ನು ಸ್ತುತಿಸುವಿಯಲ್ಲಾ, ಇದು ಹೇಗೆ ಸಾಧ್ಯ? ಎಂದು ಕೇಳಿದಾಗ, ಆಕೆ ನನ್ನ ಕರ್ತನಿಗಾಗಿ ಎಲ್ಲವನ್ನೂ ಸಹಿಸಿಕೊಳ್ಳುವೆನು. ನನ್ನ ಇಕ್ಕಟ್ಟು, ನೋವುಗಳ ನಡುವೆ ಆತನ ಪ್ರೀತಿಯನ್ನು ಪ್ರತಿಬಿಂಬಿಸಲು ಆತನು ನನಗೆ ಬಲನೀಡುತ್ತಿರುವನು" ಎಂದು ಹೇಳಿದಳು.

ನಮ್ಮ ದೇಶಕ್ಕೆ ಮಿಷನರಿಗಳಾಗಿ ಸೇವೆ ಮಾಡಿದಂಥಹ ಅನೇಕ ಭಕ್ತರ ಜೀವಿತವನ್ನು ನೋಡುವಾಗ ಅವರೂ ಕರ್ತನಿಗಾಗಿ ಅನೇಕ ಕಷ್ಟ ಹಿಂಸೆಗಳನ್ನು ಸಹಿಸಿಕೊಂಡು ಅನೇಕಾನೇಕ ಆತ್ಮಗಳನ್ನು ಕ್ರಿಸ್ತನಿಗಾಗಿ ಆದಾಯಪಡಿಸಿದರು. ದೀನತೆಯಿಂದಲೂ, ತಾಳ್ಮೆಯಿಂದಲೂ ಅಬ್ರಹಾಮನು ಕರ್ತನ ವಾಗ್ದಾನ ನೆರವೇರಲು ಇಪ್ಪತ್ತೈದು ವರ್ಷಗಳು ಕಾದಿದ್ದರಿಂದ ದೇವಸಂತತಿಯ ಮೂಲಪಿತೃವೆಂದೂ, ದೇವರ ಸ್ನೇಹಿತನೆಂದೂ ಕರೆಯಲ್ಪಟ್ಟನು. ತಾಳ್ಮೆಯಿಂದ ದೀನತೆಯಿಂದ ದೇವರ ಆಜ್ಞೆಗಳಿಗೆ ವಿಧೇಯರಾಗುವಾಗ, ದೇವರು ಅಂಥವರನ್ನು ತಕ್ಕ ಕಾಲದಲ್ಲಿ ಉನ್ನತಿಗೆ ತರುವನು.

ದೇವಮಕ್ಕಳೇ, ದೀನತೆ, ತಾಳ್ಮೆ ಎಂಬುದು ಆತ್ಮನ ಫಲಗಳಲ್ಲಿ ಒಂದಾಗಿದೆ. ಕರ್ತನ ಬಳಿ ಈ ಫಲಕ್ಕಾಗಿ ಬೇಡಿ ಪಡೆದುಕೊಳ್ಳಿರಿ.

*ನೆನಪಿಗೆ : ಸಹೋದರರೇ, ಕರ್ತನು ಪ್ರತ್ಯಕ್ಷನಾಗುವ ತನಕ ದೀರ್ಘಶಾಂತಿಯಿಂದಿರಿ. ವ್ಯವಸಾಯಗಾರನನ್ನು ನೋಡಿರಿ, ಅವನು ಭೂಮಿಯ ಬೆಲೆಯುಳ್ಳ ಫಲಕ್ಕಾಗಿ ಕಾದಿರುವನು.. (ಯಾಕೋ.5:7).*

ನವೆಂಬರ್ 20

## ಆತ್ಮನ ಫಲ ದಯೆ!

ಬೆಳಿಗ್ಗೆ : ಯೆಹೆ. 14,15
ಸಂಜೆ : ಯಾಕೋಬ 2

"ತನ್ನನ್ನು ಪ್ರೀತಿಸಿ ತನ್ನ ಆಜ್ಞೆಗಳನ್ನು ಅನುಸರಿಸುವವರಿಗೆ ಮಾಡಿದ ವಾಗ್ದಾನವನ್ನೂ, ಕೃಪೆಯನ್ನೂ ಅವರ ಸಂತತಿಯವರಲ್ಲಿ ಸಾವಿರ ತಲೆಗಳವರೆಗೂ ನೆರವೇರಿಸುವನು (ಧರ್ಮೋ.7:9).

ದೇವರಾತ್ಮನ ಫಲಗಳಲ್ಲಿ ಐದನೆಯ ಫಲ "ದಯೆ" ಎಂಬದು. ದಯೆ ಎಂಬ ಪದಕ್ಕೆ ಕನಿಕರ ಕರುಣೆ ಎಂದು ಅರ್ಥ. ನೀವು 'ದಯೆ' ಎಂಬ ಸದ್ಗುಣವನ್ನು ಕ್ರಿಸ್ತನ ಬಳಿಗೆ ಬಂದು ಕಲಿತುಕೊಳ್ಳಿರಿ. ನನ್ನ ಬಳಿಗೆ ಬಂದು ಕಲಿತುಕೊಳ್ಳಿರಿ ಎಂದು ಆತನು ಹೇಳಿರುವನಲ್ಲವೇ! (ಮತ್ತಾ.11:29).

ಹಳೆಯ ಮತ್ತು ಹೊಸ ಒಡಂಬಡಿಕೆಗಳಲ್ಲಿನ ಭಕ್ತರು ತಮ್ಮ ಜೀವಿತದಲ್ಲಿ ಆತ್ಮನವರವಾದ ದಯೆಯನ್ನು ಇತರರಿಗೆ ತೋರಿಸಿದರು. ಅವರ ಪ್ರಾರ್ಥನೆಯನ್ನು ಗಮನಿಸಿರಿ. "ನಿನ್ನ ದೃಷ್ಟಿಯಲ್ಲಿ ನನಗೆ ದಯೆತೋರಿಸುವಿಯಾದರೆ" ಎಂದು ಹೇಳಿ ಪ್ರಾರ್ಥನೆಯನ್ನು ಮಾಡಿದರು. ಕರ್ತನ ದಯೆಯನ್ನು ಮುಂದಿಟ್ಟುಕೊಂಡು ಜಯಭರಿತವಾಗಿ ಸೇವೆಮಾಡಿದರು. ಕರ್ತನು ನಿಮಗೆ ದಯೆಯನ್ನು ತೋರಿಸುವದು ಮಾತ್ರವಲ್ಲ. ಬೇರೆಯವರ ದೃಷ್ಟಿಯಲ್ಲೂ ನಿಮಗೆ ದಯೆ ದೊರೆಯುವಂತೆ ಕೃಪೆ ನೀಡುವನು. ಪೋಟಿಫರನ ದೃಷ್ಟಿಯಲ್ಲಿ ಯೋಸೇಫನಿಗೆ ದಯೆ ದೊರಕಿತು (ಆದಿ. 39:4). ಸೆರೆಮನೆಯ ಯಜಮಾನನಿಂದ ಅವನಿಗೆ ದಯೆ ದೊರಕಿತು (ಆದಿ.39:21). ಫರೋಹನ ದೃಷ್ಟಿಯಲ್ಲಿ ದಯೆ ದೊರಕಿತು (ಆದಿ. 47:4). ಇದೆಲ್ಲವೂ ದೇವರ ದಯೆಯಿಂದಲೇ ಆದದ್ದು. ಕರ್ತನು ಬೇರೆಯವರ ದೃಷ್ಟಿಯಲ್ಲಿ ದಯೆ ದೊರಕಿಸುವಂತೆ ಮಾಡಿದ್ದರಿಂದ ನೀವೂ ಇತರರಿಗೆ ದಯೆ ತೋರಿಸಬೇಕು. ಹಾಗೆ ಮಾಡುವದರಿಂದ ಒಬ್ಬನು ಕನಿಕರದಲ್ಲಿ ಐಶ್ವರ್ಯವುಳ್ಳವನಾಗುವನು. ಯೇಸುಕ್ರಿಸ್ತನು ದೇವರ ದಯೆಯಿಂದಲೂ ಮನುಷ್ಯರ ದಯೆಯಿಂದಲೂ ಅಧಿಕವಾಗಿ ವೃದ್ಧಿಹೊಂದಿದನು (ಲೂಕ. 2:52). ಆತನು ತನ್ನ ಜೀವಿತ ಕಾಲದಲ್ಲೆಲ್ಲಾ ದಯೆಉಳ್ಳವನಾಗಿದ್ದು ಜನರಿಗೆ ಉಪಕಾರಗಳನ್ನು ಮಾಡಿದನು.

ದೇವಮಕ್ಕಳೇ, ದಯೆ ಎಂಬ ಸದ್ಗುಣ ನಿಮ್ಮೊಳಗೆ ಕಾಣಲ್ಪಡಲಿ, ಕ್ರಿಸ್ತನು ಲೋಕದ ಎಲ್ಲಾ ಜನರಿಗೋಸ್ಕರವಾಗಿಯೂ ತನ್ನ ಅಮೂಲ್ಯವಾದ ರಕ್ತವನ್ನು ಸುರಿಸಿರುವನು. ನಿಮ್ಮ ಎಲ್ಲಾ ಕಾರ್ಯಗಳಲ್ಲಿ ದಯೆಯನ್ನೂ, ಕರುಣೆಯನ್ನೂ ಪ್ರಕಟಪಡಿಸಿರಿ.

*ನೆನಪಿಗೆ : "ಘನವಂತನಾದರೋ, ಘನಕಾರ್ಯಗಳನ್ನು ಕಲ್ಪಿಸುವನು. ಘನವಾದವುಗಳಲ್ಲಿಯೇ ನಿರತನಾಗಿರುವನು" (ಯೆಶಾ. 32:8).*



ನವೆಂಬರ್ 21

## ಆತನ ದಯೆ!

ಬೆಳಿಗ್ಗೆ : ಯೆಹೆ. 16,17
ಸಂಜೆ : ಯಾಕೋಬ 3

"ಆತನ ಕೋಪವು ಕ್ಷಣಮಾತ್ರವೇ; ಆತನ ಅನುಗ್ರಹವೋ ಜೀವಮಾನವೆಲ್ಲಾ ಇರುವದು. ಸಂಜೆಗೆ ದುಃಖವೆಂಬುದು ಬಂದು ನಮ್ಮ ಬಳಿಯಲ್ಲಿ ಇಳಿದುಕೊಂಡರೂ ಮುಂಜಾನೆ ಹರ್ಷಧ್ವನಿಯು ಕೇಳಿಸುವದು. (ಕೀರ್ತ. 30:5).

ದೇವರ ದಯೆ, ಕರುಣೆಯನ್ನು ಕಾರ್ಯರೂಪದಲ್ಲಿ ಪ್ರಕಟಿಸಿ ತೋರಿಸಿದವರಲ್ಲಿ ತಾಯಿ ಥೆರೇಸಾ ಅವರೂ ಒಬ್ಬರು. ದೇವರ ದಯೆ ಎಲ್ಲರಿಗೂ ಸಿಗುವಂತೆ ತನ್ನ ಜೀವನವನ್ನೇ ಪೂರ್ತಿಯಗಿ ಅರ್ಪಿಸಿದರು. ತನ್ನನ್ನು ಸನ್ಯಾಸಿನಿಯಾಗಿಸಿಕೊಂಡು ಇತರರ ಸೇವೆಯನ್ನು ಮಾಡುವದರಲ್ಲಿಯೇ ತಮ್ಮನ್ನು ತೊಡಗಿಸಿಕೊಂಡರು.

ಆಕೆ ಅನೇಕ ಅನಾಥಾಶ್ರಮಗಳನ್ನೂ, ವೃದ್ಧಾಶ್ರಮಗಳನ್ನು ಸ್ಥಾಪಿಸಿದರು. ತಂದೆ ತಾಯಿಲ್ಲದ ಮಕ್ಕಳಿಗೆ, ಆಶ್ರಯವಿಲ್ಲದಂಥವರಿಗೆ ದೈವೀಕ ಪ್ರೀತಿಯನ್ನು ಉಣಬಡಿಸಿ ಸಾಕಿದರು. ಮರಣದ ಹಾಸಿಗೆಯಲ್ಲಿರುವ ಎಷ್ಟೋ ಜನರಿಗೆ ಸಹಾಯ ಮಾಡಿ ಕ್ರಿಸ್ತನೆಂಬ ನಾಮವನ್ನು ತನ್ನ ಕರುಣೆಯ ಕಾರ್ಯಗಳಿಂದ ಪ್ರಚಾರ ಮಾಡಿದರು. ಆಕೆಯ ದಯೆಯನ್ನು ಹೊಂದಿ ಬಾಳಿದವರು ಎಷ್ಟೋ ಲಕ್ಷಗಟ್ಟಲೆ ಜನರು. ಕೆಲವರು ದಯೆಗೆ ವಿರುದ್ಧ ತತ್ವಗಳನ್ನು ಹೇಳಬಹುದು. ಯೋಗ್ಯರಾದವರಿಗೆ ಭಿಕ್ಷೆ ಹಾಕು, ಕರುಣೆಗೆ ಯೋಗ್ಯರಲ್ಲದವರಿಗೆ ಕರುಣೆ ತೋರಿಸಬೇಡ, ಸ್ವಲ್ಪ ಸ್ಥಳ ಕೊಟ್ಟರೆ ಅವನು ತಲೆಯ ಮೇಲೆ ಏರಿಬಿಡುವನು ಎಂದೆಲ್ಲಾ ಹೇಳಬಹುದು. ಆದರೆ ದಯೆ ಎಂಬುದು ಕರ್ತನು ತನ್ನ ಮಕ್ಕಳಿಂದ ನಿರೀಕ್ಷಿಸುವ ಒಂದು ಒಳ್ಳೆಯ ಸ್ವಭಾವ. ಶಿಲುಬೆಯಿಂದ ಇಳಿದು ಬರುವ ದೇವಕರುಣೆಯನ್ನು ದೃಷ್ಟಿಸಿ ನೋಡಿರಿ. ಆತನು ಜಜ್ಜಲ್ಪಟ್ಟಿದ್ದರೂ "ತಂದೆಯೇ, ಅವರನ್ನು ಕ್ಷಮಿಸು" ಎಂದು ಹೇಳಿ ತನ್ನ ಕ್ಷಮೆಯನ್ನು ದಯೆಯನ್ನು ಪ್ರಕಟಿಸಿದನು. ನಿಮ್ಮನ್ನು ಅಮೂಲ್ಯವಾದವರನ್ನಾಗಿ ಮಾರ್ಪಡಿಸಲು ತನ್ನ ಅಮೂಲ್ಯವಾದ ರಕ್ತವನ್ನೂ, ಜೀವವನ್ನೂ ಹೊಯ್ದನು.

ದೇವಮಕ್ಕಳೇ, ಕ್ರಿಸ್ತನ ಹಿಂಬಾಲಕರಾದ ನೀವೂ ಕ್ರಿಸ್ತನಂತೆ, ದಯೆಯುಳ್ಳವರಾಗಿರಬೇಕು. ಒಬ್ಬರಿಗೊಬ್ಬರು ಉಪಕಾರಿಗಳಾಗಿಯೂ, ಕರುಣೆಯುಳ್ಳವರಾಗಿಯೂ ಕ್ಷಮಿಸುವವರಾಗಿಯೂ ಇರ್ರಿ ಎಂದು ಅಪೊ. ಪೌಲನು ಹೇಳುತ್ತಾನೆ (ಎಫೆ. 4:32). ನೀವು ಕರ್ತನಿಂದ ದಯೆಯನ್ನು ಹೊಂದಿದವರಾಗಿರುವದಾದರೆ, ನೀವೂ ಇತರರಿಗೆ ದಯೆ ತೋರಿಸಿರಿ.

*ನೆನಪಿಗೆ : "ಆತನು ಕುರುಬನಂತೆ ತನ್ನ ಮಂದೆಯನ್ನು ಮೇಯಿಸುವನು, ಮರಿಗಳನ್ನು ಕೈಯಿಂದ ಕೂಡಿಸಿ ಎದೆಗೆತ್ತಿಕೊಳ್ಳುವನು. ಹಾಲು ಕುಡಿಸುವ ಕುರಿಗಳನ್ನು ಮೆಲ್ಲಗೆ ನಡಿಸುವನು" (ಯೆಶಾಯ.40:11)*

| ನವೆಂಬರ್ 22 | ದೇವರಾತ್ಮನ ಫಲ ಸದ್ಗುಣ! | ಬೆಳಿಗ್ಗೆ : ಯೆಹೆ. 18,19<br>ಸಂಜೆ : ಯಾಕೋಬ 4 |
|---|---|---|

“ಬೆಳಕಿನ ಫಲವು ಉಪಕಾರದಲ್ಲಿಯೂ, ನೀತಿಯಲ್ಲಿಯೂ, ಸತ್ಯದಲ್ಲಿಯೂ ಕಾಣಿಸಿಕೊಳ್ಳುತ್ತದೆ (ಎಫೆ. 5:9).

ಒಳ್ಳೆಯ ತಂದೆ ತಾಯಿಗಳು, ತಮ್ಮ ಮಕ್ಕಳಿಗೆ ಸದ್ಗುಣವನ್ನು ಬೋಧಿಸುವರು. ಗುಣವಂತರಾಗಿ ಬಾಳುವಂತೆ ಪ್ರೋತ್ಸಾಹಿಸುವರು. ಸದ್ಗುಣವು ಮನುಷ್ಯರಿಗೂ, ದೇವರಿಗೂ ಮೆಚ್ಚಿಕೆಯಾಗಿರುವದು. ಸದ್ಗುಣವೆಂದರೆ, ಒಳ್ಳೆಯದನ್ನೇ ಚಿಂತಿಸುತ್ತಾ, ಒಳ್ಳೆಯ ಮಾತುಗಳನ್ನೇ ಆಡುತ್ತಾ, ಒಳ್ಳೆಯದನ್ನೇ ಮಾಡುವದಾಗಿದೆ. ನಿಮ್ಮ ಸ್ವಭಾವದಲ್ಲಿ ಸದ್ಗುಣ ಬೆರೆತಿರುವದಾದರೆ ಕರ್ತನಿಗೂ ವಿಶ್ವಾಸಿಗಳಿಗೂ ಇತರರಿಗೂ ಉಪಯೋಗವುಳ್ಳವರಾಗಿ ಕಾಣಲ್ಪಡುವಿರಿ.

ಕಳೆದ ಕೆಲವು ವರುಷಗಳನ್ನು ನೋಡುವದಾದರೆ, ಜನರಲ್ಲಿ ಸದ್ಗುಣಕ್ಕಿಂತ ದುರ್ಗುಣಗಳೇ ಹೆಚ್ಚಾಗಿ ಕಂಡುಬರುತ್ತಿದೆ. ಜನರಲ್ಲಿ ಸ್ವಾರ್ಥತೆ ಹೆಚ್ಚಾದಂತೆಲ್ಲಾ, ಇತರರ ಕುರಿತಾಗಿ ಮನುಷ್ಯನು ಚಿಂತಿಸುವದನ್ನೇ ಬಿಟ್ಟಿರುವನು. ಉಪಕಾರ, ನೀತಿ, ಸತ್ಯತೆಗಳ ಕುರಿತು ಚಿಂತನೆ ಇಲ್ಲದವನಾಗಿರುವನು. ಕ್ರಿಸ್ತನನ್ನು ನಂಬಿರುವ ವಿಶ್ವಾಸಿಗಳ ಜೀವಿತವೂ ಇದಕ್ಕೆ ಹೊರತೇನಲ್ಲ. ಕ್ರಿಸ್ತನ ಪ್ರೀತಿಯನ್ನು ಮರೆತು, ತೋರಿಕೆಯ ಕ್ರೈಸ್ತರಾಗಿ ಜೀವಿಸುತ್ತಿರುವವರು ಅನೇಕರು. ಅಗ್ನಿ ಪರ್ವತವು ಸಾಧಾರಣವಾಗಿ ಶಾಂತವಾಗಿ ಇತರ ಬೆಟ್ಟಗಳಂತೆ ಕಂಡರೂ, ಅದರಲ್ಲಿರುವ ಜ್ವಾಲಾಮುಖಿ ಎದ್ದು ಸಿಡಿಯುವಾಗ ಅದರ ಶಾಖ ಹೊರಗೆ ಬರುವದು. ಹಾಗೆಯೇ ಅನೇಕರು ಹೊರಗೆ ಒಳ್ಳೆಯವರಂತೆ ಕಾಣುವರು. ಆದರೆ ಅವರ ನಿಜಸ್ವಭಾವವನ್ನು ಹೊರಪಡಿಸುವಾಗ ಅಗ್ನಿ ಪರ್ವತಕ್ಕಿಂತಲೂ ಭಯಂಕರವಾಗಿರುತ್ತಾರೆ. ಅವರ ಸದ್ಗುಣ ಎಲ್ಲಿ? ಕ್ರಿಸ್ತನ ಜೀವಿತವನ್ನು ನೋಡುವಾಗ, ಆತನ ಅಂತರಂಗ ಜೀವಿತದಲ್ಲೂ ಬಾಹ್ಯಲೋಕದ ಜೀವಿತದಲ್ಲೂ ಸದ್ಗುಣವನ್ನೇ ಕಾಣುತ್ತೇವೆ. ಆತನ ಸ್ವಭಾವಗಳೆಲ್ಲವೂ ದೈವೀಕ ಪೂರ್ಣತೆಯಿಂದ ತುಂಬಿದ್ದಾಗಿತ್ತು. ರೂಪಾಂತರ ಬೆಟ್ಟದಲ್ಲಿ ಆತನಲ್ಲಿದ್ದ ದೈವೀಕ ಮಹಿಮೆ ಹೊರಹೊಮ್ಮಿತು. ಆತನ ಮುಖ ಸೂರ್ಯನಂತೆ ಪ್ರಕಾಶಿಸಿತು. ಆತನ ವಸ್ತ್ರ ಮಂಜಿನಂತೆ ಬೆಳ್ಳಗಿತ್ತು ಎಂದು ಸತ್ಯವೇದ ಹೇಳುತ್ತದೆ.

ದೇವಮಕ್ಕಳೇ, ನಿಮ್ಮೊಳಗೆ ಕ್ರಿಸ್ತನು ವಾಸಿಸುವದಾದರೆ, ನಿಮ್ಮ ಅಂತರಂಗ ಜೀವಿತದಲ್ಲೂ, ಬಾಹ್ಯ ಜೀವಿತದಲ್ಲೂ, ದೈವೀಕತೆಯೇ ಪ್ರಧಾನವಾಗಿರುವದು. ಸದ್ಗುಣವುಳ್ಳವರು ಕರ್ತನಿಗಾಗಿ ಎದ್ದು ಪ್ರಕಾಶಿಸುವರು. ನಿಮ್ಮಲ್ಲಿ ಸದ್ಗುಣವಿರುವದಾದರೆ ನಿಮ್ಮ ಜೀವಿತದ ಎಲ್ಲಾ ಸ್ಥಿತಿಗತಿಗಳಲ್ಲಿಯೂ ಸದ್ಗುಣಗಳನ್ನೇ ಪ್ರಕಟಿಸುವವರಾಗಿರುವಿರಿ. ಕರ್ತನಿಗೆ ಸಾಕ್ಷಿಗಳಾಗಿರುವಿರಿ.

*ನೆನಪಿಗೆ : ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕ ಭಾವದವರಾಗಿರಿ (ರೋಮಾ. 12:2).*



| ನವೆಂಬರ್ 23 | ಸದ್ಗುಣಭರಿತರಾಗಿ! | ಬೆಳಿಗ್ಗೆ : ಯೆಹೆ. 20,21<br>ಸಂಜೆ : ಯಾಕೋಬ 5 |
|---|---|---|

“ನನ್ನ ಸಹೋದರರೇ, ನೀವಂತೂ ಒಳ್ಳೇತನದಿಂದ ಭರಿತರಾಗಿಯೂ, ಸಕಲ ಜ್ಞಾನದಿಂದ ತುಂಬಿದವರಾಗಿಯೂ....” (ರೋಮಾ. 15:14).

ಒಳ್ಳೆಯ ಹೃದಯ ಒಂದು ಬುಗ್ಗೆಯಂತಿರುವದು. ಒಳ್ಳೆಯ ಬುಗ್ಗೆಯಿಂದ ತಿಳಿಯಾದ ನೀರು ಉಕ್ಕಿಬರುವಂತೆ ಒಳ್ಳೆಯ ಹೃದಯದಿಂದ ಸದ್ಗುಣಗಳು ಹೊರಸೂಸುವದು. ಹೇಗೆ ಬುಗ್ಗೆಯ ನೀರು ಅನೇಕರಿಗೆ ಆಶೀರ್ವಾದವಾಗಿರುವದೋ ಸದ್ಗುಣಶೀಲರು ಇತರರಿಗೆ ಆಶೀರ್ವಾದವಾಗಿರುವರು.

ಸದ್ಗುಣ ಎಂದರೆ ಒಳ್ಳೆಯ ಗುಣ, ನಡತೆ ಎಂದು ಅರ್ಥ. ದೇವರಂತೆ ಒಳ್ಳೆಯವರು ಒಬ್ಬರೂ ಇಲ್ಲ ಎಂಬುದು ಸತ್ಯವೇ. ಆದರೆ ಕರ್ತನೊಂದಿಗೆ ನಡೆದು, ಆತನ ಒಳ್ಳೆಯ ಗುಣವನ್ನು ಪಡೆಯುವಾಗ, ನೀವೂ ಸಹ ಸದ್ಗುಣಶಾಲಿಗಳಾಗಿ ಕಾಣಲ್ಪಡಲು ಸಾಧ್ಯ. ಅಂದು ಕರ್ತನು ಇಸ್ರಾಯೇಲ್ಯರನ್ನು ನೋಡುವಾಗ ಅವರಲ್ಲಿ ಸದ್ಗುಣವನ್ನು ಕಾಣಲಿಲ್ಲ. “ನಿಮ್ಮ ಭಕ್ತಿಯು ಪ್ರಾತಃಕಾಲದ ಮೋಡಕ್ಕೂ, ಬೇಗನೆ ಮಾಯವಾಗುವ ಇಬ್ಬನಿಗೂ ಸಮಾನವಾಗಿದೆ” (ಹೋಶೇಯ 6:4). ಎಂದು ಹೇಳಿದನು. ಯೋಚಿಸಿ ನೋಡಿರಿ! ಅನ್ಯಜನಾಂಗದವಳಾದ ರೂತಳೂ ಎಷ್ಟೋ ಸದ್ಗುಣಶಾಲಿಯಾಗಿದ್ದಳು (ರೂತ. 3:11). ಅನೇಕ ಅನ್ಯಜನಾಂಗದವರೂ ಸದ್ಗುಣವನ್ನು ಪ್ರಕಟಿಸುವರು. ಹೀಗಿರುವಾಗ ಕರ್ತನು ಕ್ರೈಸ್ತರಿಂದ ಎಷ್ಟು ಅಧಿಕವಾಗಿ ಸದ್ಗುಣಗಳನ್ನು ನಿರೀಕ್ಷಿಸುವನಲ್ಲವೇ! ನಿಮ್ಮ ಸತ್ಕಾರ್ಯಗಳ ಮೂಲಕವಾಗಿ ಅನ್ಯರು ಕ್ರಿಸ್ತನ ಬಳಿಗೆ ಬರಲಿ. ಕರ್ತನು ಹೇಳುತ್ತಾನೆ, “ನಾನು ನಿನ್ನನ್ನು ಅತ್ಯುತ್ತಮ ಬೀಜದಿಂದ ಬೆಳೆದ ಒಳ್ಳೆಯ ದ್ರಾಕ್ಷಾಲತೆಯನ್ನಾಗಿ ನೆಟ್ಟಿರಲು, (ಯೆರೆ. 2:21) ಅದು ಒಳ್ಳೆಯ ದ್ರಾಕ್ಷೆ ಹಣ್ಣನ್ನು ನೀಡುವದೆಂದು ಕಾದಿದ್ದೆನು. ಅದು ಹೊಲಸು ಹಣ್ಣನ್ನು ಬಿಟ್ಟಿತು” (ಯೆಶಾ. 5:2) ಎಂದು.

ದೇವಮಕ್ಕಳೇ, ಕರ್ತನಿಗಾಗಿ ಒಳ್ಳೆಯ ಫಲಗಳನ್ನು ಕೊಡುವ ದ್ರಾಕ್ಷೆಯ ಬಳ್ಳಿಗಳಾಗಿ ಕಾಣಲ್ಪಡಿರಿ. ನಿಮ್ಮ ಫಲಭರಿತವಾದ ಜೀವಿತ ಕರ್ತನನ್ನು ಸಂತೋಷಪಡಿಸಲಿ. ಕರ್ತನು ಒಂದು ದಿನ ಹಣ್ಣನ್ನು ಹುಡುಕಿ ಅಂಜೂರದ ಮರದ ಬಳಿಗೆ ಬಂದನು. ಅದು ಬರೀ ಎಲೆಗಳಿಂದ ತುಂಬಿದ್ದಿತೇ ಹೊರತು ಫಲ ನೀಡಲಿಲ್ಲ. ಹಸಿವಿನಿಂದ ಕರ್ತನ ಆಂತರ್ಯ ಎಷ್ಟು ದುಃಖಕ್ಕೆ ಒಳಗಾಯಿತು. ಕರ್ತನು ಪಾರಂಪರ್ಯ ಎಲೆಗಳನ್ನಲ್ಲಾ ಮಧುರವಾದ ಫಲಗಳನ್ನು ತನ್ನ ಜನರಿಂದ ನಿರೀಕ್ಷಿಸುವನು.

*ನೆನಪಿಗೆ : ನೀವು ಸಕಲ ಸತ್ಕಾರ್ಯವೆಂಬ ಫಲವನ್ನು ಕೊಡುತ್ತಾ ದೇವಜ್ಞಾನದಿಂದ ತುಂಬಿದವರಾಗಿ. ಆತನ ಪ್ರೀತಿಗೆ ಯೋಗ್ಯರಾಗಿ ನಡೆದುಕೊಳ್ಳಿರಿ (ಕೊಲೊ. 1:10).*

ನವೆಂಬರ್ 24

## ದೇವರಾತ್ಮನ ಫಲ ನಂಬಿಕೆ!

ಬೆಳಿಗ್ಗೆ : ಯೆಹೆ. 22,23
ಸಂಜೆ : 1 ಪೇತ್ರ. 1

"ಹೀಗಿದ್ದರೂ ನಂಬಿದೆನು. ಆದುದರಿಂದ ಮಾತಾಡಿದೆನು ಎಂಬ ಶಾಸ್ತ್ರೋಕ್ತಿಯಲ್ಲಿ ಕಾಣುವ ನಂಬಿಕೆಯ ಭಾವವನ್ನೇ ಹೊಂದಿ ನಾವೂ ನಂಬಿದವರು. ಆದುದರಿಂದ ಮಾತಾಡುತ್ತೇವೆ" (2 ಕೊರಿಂ. 4:13).

ಈ ಕಡೆಯ ದಿನಗಳಲ್ಲಿ, ಸಭೆಗಳಲ್ಲಿ ನಂಬಿಕೆಯ ಕುರಿತು ನಂಬಿಕೆಯ ಮಾತುಗಳನ್ನು ಕುರಿತು ಅಧಿಕವಾಗಿ ಮಾತನಾಡಲ್ಪಡುವದು. ನಂಬಿಕೆಯೇ ನಮ್ಮ ಜಯ ಎಂದು ದೇವಸೇವಕರು ಘೋಷಿಸುವರು. ನಮ್ಮ ಕರ್ತನಾದ ಯೇಸುಕ್ರಿಸ್ತನು ನಂಬಿಕೆಯ ಕುರಿತಾಗಿ ಅಧಿಕವಾಗಿ ಮಾತನಾಡಿದನು. ಸಾಸಿವೆ ಕಾಳಿನಷ್ಟು ನಂಬಿಕೆ ಇರುವದಾದರೆ, ಬೆಟ್ಟಗಳನ್ನೇ ತಳ್ಳಿಬಿಡಲು ಸಾಧ್ಯ ಎಂದು ಹೇಳಿದನು. ನಮ್ಮೊಳಗೆ ವಾಸಿಸುವ ದೇವರು ನಂಬಿಕೆಯ ದೇವರು. ದೇವರಾತ್ಮನು ನಂಬಿಕೆ ಉಳ್ಳಾತನು.

ಸತ್ಯವೇದದಲ್ಲಿ ಐದು ವಿಧವಾದ ನಂಬಿಕೆಗಳನ್ನು ಕಾಣಬಹುದು. ಮೊದಲನೆಯದು ಸಕಲ ಜನರಲ್ಲಿ ಇಡಲ್ಪಟ್ಟ ಸ್ವಾಭಾವಿಕವಾದ ನಂಬಿಕೆ. ಎರಡನೆಯದು ದೇವರ ಹೆಸರಿನಲ್ಲಿ ಇಟ್ಟ ಅಸ್ತಿವಾರದ ನಂಬಿಕೆ (ಇಬ್ರಿ. 6:1). ಮೂರನೆಯದು, ಪ್ರಾಣಕ್ಕೆ ಲಂಗರವಾದ ನಂಬಿಕೆ (ಇಬ್ರಿಯ6:19), ನಾಲ್ಕನೆಯದು, ಆತ್ಮನ ಫಲವಾದ ನಂಬಿಕೆ (1 ಕೊರಿಂ.12:9), ಐದನೆಯದು, ಆತ್ಮನ ಫಲವಾದ ನಂಬಿಕೆ (ಗಲಾ. 5:22,23). ಇವುಗಳನ್ನು ಕುರಿತು ನೀವು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಆತ್ಮನ ಫಲವಾದ ನಂಬಿಕೆ ಎಂಬುದು ಕರ್ತನಲ್ಲಿ ಯಾವಾಗಲೂ, ಎಲ್ಲಾ ರೀತಿಯಲ್ಲೂ ಸತ್ಯವಂತರಾಗಿರುವದೇ (Faithfullness) ಆಗಿದೆ. ಕೆಲವು ಸೇವಕರು ತಮ್ಮ ಯಜಮಾನನಿಗೆ, ನಂಬಿಗಸ್ಥರಾಗಿ, ಕೃತಜ್ಞರಾಗಿ ಇರುತ್ತಾರೆ. ಹಾಗೆಯೇ ಗಂಡನೂ, ಹೆಂಡತಿಯೂ ಒಬ್ಬರಿಗೊಬ್ಬರು ನಂಬಿಗಸ್ಥರೂ, ಸತ್ಯವಂತರೂ ಆಗಿರಬೇಕು. ಒಬ್ಬಳು ಒಬ್ಬನನ್ನು ಜೀವನ ಸಂಗಾತಿಯಾಗಿ ಪಡೆಯುವಾಗ ಅವನು ತನಗೊಬ್ಬಳಿಗೇ ಜೀವಿತಕಾಲವೆಲ್ಲಾ ಪ್ರೀತಿ ತೋರಿಸಿ ತನ್ನನ್ನು ಕಾಪಾಡುವನು ಎಂದು ನಿರೀಕ್ಷಿಸುವಳು. ಇದು ಸ್ವಾಭಾವಿಕ ನಂಬಿಕೆ. ನಂತರ ಅನುದಿನವೂ ಬಾಳಿನಲ್ಲಿ ಅವನ ಸಂಪಾದನೆ, ಪ್ರೀತಿಯನ್ನು ಆಶ್ರಯಿಸಿ ಬಾಳುವದು ನಂಬಿಕೆಯ 2ನೇ ಹಂತ. ಅವನಲ್ಲಿ, ಅವನ ಮಾತಿನಲ್ಲಿ ಪೂರ್ಣ ನಂಬಿಕೆ ಇಟ್ಟು ನಡೆದುಕೊಳ್ಳುವದು. ಆ ನಂಬಿಕೆ ಆತ್ಮನವರವಾಗಿ ಕಾರ್ಯನಡೆಸುವದು. ಅದೇ ವೇಳೆಯಲ್ಲಿ ಜೀವಿತದಲ್ಲಿ ಗಂಡನಿಗೆ ಯಾವ ಕೇಡು ಬಯಸದೆ ಮನೆಯಲ್ಲಿ ಯಥಾರ್ಥವಾಗಿ ಸತ್ಯದಿಂದ ಇರುವಾಗ ಆ ಸತ್ಯಸಂಧತೆಯಲ್ಲಿ ನಂಬಿಕೆಯ ಫಲವನ್ನು ಪ್ರಕಟಿಸುವಳು.

ದೇವಮಕ್ಕಳೇ, ಈ ಆತ್ಮನ ಫಲದಂತೆ ನೀವು ನಿಮ್ಮ ನಂಬಿಕೆಯನ್ನು ಕರ್ತನಲ್ಲಿ ಇಟ್ಟು ಆತನನ್ನೇ ಆಶ್ರಯಿಸಿರಿ.

*ನೆನಪಿಗೆ : ನಾನು ನಂಬಿರುವಾತನನ್ನು ಬಲ್ಲೆನು. ಆತನು ನನ್ನ ವಶದಲ್ಲಿ ಇಟ್ಟಿರುವದನ್ನು ಆತನು ಆ ದಿನಕ್ಕಾಗಿ ಕಾಪಾಡುವದಕ್ಕೆ ಶಕ್ತನಾಗಿದ್ದಾನೆಂದು ದೃಢವಾಗಿ ನಂಬಿದ್ದೇನೆ. (2 ತಿಮೊ. 1:12).*



ನವೆಂಬರ್ 25

## ಆತ್ಮನವರ ಶಾಂತತೆ!

ಬೆಳಿಗ್ಗೆ : ಯೆಹೆ. 24,25,26
ಸಂಜೆ : 1 ಪೇತ್ರ. 2

"ಶಾಂತರು ಧನ್ಯರು; ಅವರು ಭೂಮಿಗೆ ಬಾಧ್ಯರಾಗುವರು" (ಮತ್ತಾ. 5:5).

ದೇವರಾತ್ಮನ ಎಂಟನೆಯ ಫಲ ಶಾಂತತೆ. ಕೆಲವರ ಮುಖ್ಯ ಶಾಂತತೆಯಿಂದ ತುಂಬಿರುತ್ತದೆ. ಕೆಲವು ವೇಳೆ ಶಾಂತತೆಯಿಂದ ಇರುವವರನ್ನು ನೋಡಿ ಪ್ರಪಂಚ ಅವರನ್ನು ಹೇಡಿಗಳು, ಬಲಹೀನರೆಂದು ಭಾವಿಸುವರು. ಶಾಂತತೆ ಎಂಬುದು ಬೇರೆ, ಹೇಡಿತನವೆಂಬುದು ಬೇರೆ. ನಿಜವಾಗಿ ಶಾಂತತೆ ಎಂಬುದು ಒಬ್ಬನ ಮನೋಸ್ಥೈರ್ಯವನ್ನು ಸೂಚಿಸುತ್ತದೆ.

ಈ ಪ್ರಪಂಚ ನಿಮ್ಮ ಶಾಂತಗುಣವನ್ನು ಒಂದು ವೇಳೆ ಅರಿತುಕೊಳ್ಳದೆ ಹೋದರೂ ಶಾಂತತೆ ಬಹು ಶಕ್ತಿಯುತವಾದದ್ದು. ಹಳೆಯ ಒಡಂಬಡಿಕೆಯಲ್ಲಿ "ಮೋಶೆಯು ಭೂಮಿಯ ಮೇಲಿರುವ ಎಲ್ಲಾ ಮನುಷ್ಯರಿಗಿಂತಲೂ ಬಹು ಸಾತ್ವಿಕನಾಗಿದ್ದನು" ಎಂದು ಓದುತ್ತೇವೆ (ಅರಣ್ಯ.12:3). ಆ ಶಾಂತಸ್ವಭಾವದಿಂದ ಸುಮಾರು ಇಪ್ಪತ್ತು ಲಕ್ಷ ಇಸ್ರಾಯೇಲ್ಯರನ್ನು ನಲ್ವತ್ತು ವರುಷಗಳು ಅರಣ್ಯದಲ್ಲಿ ಪ್ರೀತಿಯಿಂದಲೂ, ತಾಳ್ಮೆಯಿಂದಲೂ ನಡೆಸಿಕೊಂಡು ಬಂದನು. ಅವನ ಸಹೋದರಿಯಾದ ಮಿರ್ಯಾಮಳು ಅವನಿಗೆ ವಿರೋಧವಾಗಿ ಮಾತಾಡಿ ತೊನ್ನು ಹತ್ತಿದ್ದಾಗ, ಮೋಶೆ ಅವಳಿಗಾಗಿ ದೇವರಲ್ಲಿ ಮೊರೆಯಿಟ್ಟು ದೈವೀಕ ಸ್ವಸ್ಥತೆಯನ್ನು ತಂದುಕೊಟ್ಟನು. ಯೇಸುಕ್ರಿಸ್ತನ ಬಳಿ ಶಾಂತಗುಣ ಅಧಿಕವಾಗಿ ಕಾಣಲ್ಪಟ್ಟಿತು. ಆತನ ಶಾಂತತೆಯ ಪರಿಪೂರ್ಣತೆ ಕಲ್ವಾರಿಯಲ್ಲಿ ಕಾಣಬಹುದು. ಒಂದು ಕುರಿಮರಿಯಾಗಿ ಕಲ್ವಾರಿ ಶಿಲುಬೆಯಲ್ಲಿ ತನ್ನನ್ನು ಒಪ್ಪಿಸಿಕೊಟ್ಟನು. "ಅವನು ಬಾಧೆಗೆ ಒಳಗಾಗಿ ತನ್ನನ್ನು ತಗ್ಗಿಸಿಕೊಂಡನು, ಬಾಯಿ ತೆರೆಯಲಿಲ್ಲ; ವಧ್ಯಸ್ಥಾನಕ್ಕೆ ಒಯ್ಯಲ್ಪಡುವ ಕುರಿಯಂತೆಯೂ, ಉಣ್ಣೆ ಕತ್ತರಿಸುವವರ ಮುಂದೆ ಮೌನವಾಗಿರುವ ಕುರಿಯ ಹಾಗೂ ಇದ್ದನು. ಬಾಯಿ ತೆರೆಯಲೇ ಇಲ್ಲ" (ಯೆಶಾ. 53:7). ಪಿಲಾತನ ಮುಂದೆಯೂ, ಮಹಾ ಯಾಜಕನ ಮುಂದೆಯೂ ಎಷ್ಟೋ ತಾಳ್ಮೆಯಿಂದ ನಿಂತನು! ಅನ್ಯಾಯವಾಗಿ ಆತನ ಮೇಲೆ ತಪ್ಪು ಹೊರಿಸಿದರು. ಆತನಾದರೋ ಒಂದು ಮಾತೂ ಆಡಲಿಲ್ಲ. ಇದನ್ನು ನೋಡಿ ದೇಶಾಧಿಪತಿ ಬಹಳ ಆಶ್ಚರ್ಯಪಟ್ಟನು (ಮತ್ತಾ. 27:14).

ದೇವಮಕ್ಕಳೇ, ಕ್ರಿಸ್ತನು ನಿಮ್ಮ ಮೇಲೆ ಇಟ್ಟ ಪ್ರೀತಿಯ ನಿಮಿತ್ತ ಶಾಂತತೆಯಿಂದ ನಡೆದುಕೊಂಡು ರಕ್ಷಣೆಯನ್ನು ಸಂಪಾದಿಸಿ ಕೊಟ್ಟನು. ಶಾಪದ ಬೆನ್ನಲುಬನ್ನು ಮುರಿದನು. ಸೈತಾನನ ತಲೆಯನ್ನು ಜಜ್ಜಿದನು. ನಿಮಗೆ ಶತ್ರುವಿನ ಮೇಲೆ ಜಯವನ್ನು ತಂದುಕೊಟ್ಟನು. ಪ್ರಿಯರೇ, ಕರ್ತನ ಶಾಂತ ಸ್ವಭಾವ ನಿಮ್ಮಲ್ಲಿಯೂ ಕಾಣಲ್ಪಡಲಿ.

*ನೆನಪಿಗೆ : ನಾನು ಸಾತ್ವಿಕನೂ, ದೀನ ಮನಸ್ಸುಳ್ಳವನೂ ಆಗಿರುವದರಿಂದ ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ. ಆಗ ನಿಮ್ಮ ಆತ್ಮಗಳಿಗೆ ವಿಶ್ರಾಂತಿ ಸಿಕ್ಕುವದು (ಮತ್ತಾ. 11:29,30).*

ನವೆಂಬರ್ 26

## ಶಾಂತ ಸ್ವಭಾವ!

ಬೆಳಿಗ್ಗೆ : ಯೆಹೆ. 27,28,29
ಸಂಜೆ : 1 ಪೇತ್ರ. 3

"ಸಾತ್ವಿಕವಾದ ಶಾಂತಮನಸ್ಸು ಎಂಬ ಒಳಗಣ ಭೂಷಣವೇ ನಿಮ್ಮ ಅಲಂಕಾರವಾಗಿರಲಿ. ಇದು ಶಾಶ್ವತವಾದದ್ದೂ. ದೇವರ ದೃಷ್ಟಿಗೆ ಬಹು ಬೆಲೆಯುಳ್ಳದ್ದೂ ಆಗಿದೆ (1 ಪೇತ್ರ. 3:4).

ಅಪೊ. ಪೇತ್ರನು ಒಂದು ಕಡೆ ಹೊರಗಿನ ಅಲಂಕಾರವನ್ನು ಕುರಿತು ಮಾತನಾಡುತ್ತಾನೆ. ಇನ್ನೊಂದು ಕಡೆ ಶಾಶ್ವತವಾದ ಅಲಂಕಾರವಾಗಿರುವ ಶಾಂತಗುಣದ ಕುರಿತಾಗಿಯೂ ಮಾತನಾಡುತ್ತಾನೆ. ಜಡೆಹೆಣೆದುಕೊಳ್ಳುವದೂ, ಚಿನ್ನದ ಒಡವೆಗಳನ್ನು ಇಟ್ಟುಕೊಳ್ಳುವದೂ, ವಸ್ತ್ರಗಳನ್ನು ಧರಿಸಿಕೊಳ್ಳುವದೂ ಈ ಮೊದಲಾದ ಹೊರಗಿನ ಶೃಂಗಾರವೇ ನಿಮ್ಮ ಅಲಂಕಾರವಾಗಿರಬಾರದು. ಸಾತ್ವಿಕವಾದ ಶಾಂತಮನಸ್ಸು ಎಂಬ ಒಳಗಣ ಭೂಷಣವೇ ನಿಮ್ಮ ಅಲಂಕಾರವಾಗಿರಲಿ. ಇದು ಶಾಶ್ವತವಾದದ್ದು. ದೇವರ ದೃಷ್ಟಿಯಲ್ಲಿ ಬೆಲೆಯುಳ್ಳದ್ದೂ ಆಗಿದೆ ಎಂದು ಹೇಳುತ್ತಾನೆ (1 ಪೇತ್ರ. 3:3,4).

ಈ ಕುರಿತು ಅಪೊ. ಪೇತ್ರನು ದೃಷ್ಟಾಂತವಾಗಿ, ಹಳೆ ಒಡಂಬಡಿಕೆಯ ಸ್ತ್ರೀಯರ ಕುರಿತು "ಪೂರ್ವಕಾಲದಲ್ಲಿ ದೇವರ ಮೇಲೆ ನಿರೀಕ್ಷೆಯಿಟ್ಟ ಭಕ್ತಿಯುಳ್ಳ ಸ್ತ್ರೀಯರು ಸಹ ಹೀಗೆಯೇ ತಮ್ಮನ್ನು ಅಲಂಕರಿಸಿಕೊಂಡರು. ಸಾರಳು ಹಾಗೆಯೇ ಅಬ್ರಹಾಮನಿಗೆ ವಿಧೇಯಳಾಗಿದ್ದು ಅವನನ್ನು ಯಜಮಾನನೆಂದು ಕರೆದಳು" (1 ಪೇತ್ರ. 3:5,6) ಎಂದು ಹೇಳುತ್ತಾನೆ. ನೀವು ಪವಿತ್ರಾತ್ಮನಿಂದ ತುಂಬಲ್ಪಟ್ಟು ಪೂರ್ಣವಾಗಿ ಆತನಿಂದ ಆಳಲ್ಪಡುವಾಗ ಕ್ರಿಸ್ತನ ಶಾಂತ ಸ್ವಭಾವ ನಿಮ್ಮೊಳಗೆ ಇಳಿದುಬರುವದು. ಆಗ ನೀವು ಆತ್ಮನ ಫಲವಾದ ಶಾಂತತೆಯನ್ನು ನೀಡುವಿರಿ. ಪವಿತ್ರಾತ್ಮನಿಂದ ತುಂಬಲ್ಪಡುವವರೆಗೆ ಪೇತ್ರನ ಸ್ವಭಾವ ಲೌಕೀಕವಾದ ರೀತಿಯಲ್ಲಿಯೇ ಇತ್ತು. ದಿಢೀರೆಂದು ಕತ್ತಿಯನ್ನು ಹಿರಿದನು. ದಿಢೀರೆಂದು ಕ್ರಿಸ್ತನನ್ನು ಅಲ್ಲಗಳೆದನು, ಕರ್ತನನ್ನು ಬಿಟ್ಟು ದೂರ ಹೋದನು. ಆದರೆ ಪವಿತ್ರಾತ್ಮನು ಅವನನ್ನು ಆವರಿಸಿದಾಗ, ಅವನ ಸ್ವಭಾವ ಮಾರ್ಪಟ್ಟಿತು. ಒಡೆಯನಿಂದ ಪಳಗಿಸಲ್ಪಟ್ಟ ಕುದುರೆಯಂತೆ ಆದನು. ದೈವೀಕ ಶಾಂತತೆಯನ್ನು ತನ್ನ ಸೇವೆಯಲ್ಲಿ ಉಪಯೋಗಿಸಿ ಅನೇಕರಿಗೆ ಆಶೀರ್ವಾದವಾದನು.

ದೇವಮಕ್ಕಳೇ, ನಿಮ್ಮನ್ನೇ ನೀವು ನೋಡುವಾಗ ಸ್ವನೀತಿ ತಲೆ ಎತ್ತಿ ನಿಲ್ಲುವದು. ಆದರೆ ಕರ್ತನನ್ನೇ ದೃಷ್ಟಿಸಿನೋಡುವಿರಾದರೆ ಪರಲೋಕದ ಶಾಂತಿ ಸಮಾಧಾನವನ್ನು ಸ್ವಾಸ್ತ್ಯವಾಗಿ ಪಡೆಯುವಿರಿ. ಕೋಪ, ತಾಪಗಳಿಗೆ ಸ್ಥಳಕೊಡದೆ ಪವಿತ್ರಾತ್ಮನಿಗೆ ನಿಮ್ಮನ್ನು ಪೂರ್ಣವಾಗಿ ಒಪ್ಪಿಸಿಕೊಡಿರಿ.

*ನೆನಪಿಗೆ : "ಎಲ್ಲಾ ಗ್ರಹಿಕೆಯನ್ನೂ ಮೀರುವ ದೇವಶಾಂತಿಯು ನಿಮ್ಮ ಹೃದಯಗಳನ್ನೂ ಯೋಚನೆಗಳನ್ನೂ ಕ್ರಿಸ್ತಯೇಸುವಿನಲ್ಲಿ ಕಾಯುವದು" (ಫಿಲಿ. 4:7).*



ನವೆಂಬರ್ 27

## ಭೂಮಿಗೆ ಬಾಧ್ಯರು!

ಬೆಳಿಗ್ಗೆ : ಯೆಹೆ. 30,31,32
ಸಂಜೆ : 1 ಪೇತ್ರ. 4

"ದೀನರು ದೇಶವನ್ನು ಅನುಭವಿಸುವರು; ಅವರು ಮಹಾಸೌಖ್ಯದಿಂದ ಆನಂದಿಸುವರು" (ಕೀರ್ತನೆ 37:11).

ಒಮ್ಮೆ ಒಬ್ಬ ಪೈಲ್ವಾನ್ ರಕ್ಷಿಸಲ್ಪಟ್ಟನು. ಅದಕ್ಕೆ ಮೊದಲು ಅವನು ಬಹು ಕೋಪಿಷ್ಟನೂ, ಜಗಳಗಂಟನೂ ಆಗಿದ್ದನು. ರಕ್ಷಿಸಲ್ಪಟ್ಟ ಮೇಲೆ ಅವನ ಸ್ವಭಾವ ಪೂರ್ಣವಾಗಿ ಬದಲಾಯಿತು. ಪವಿತ್ರಾತ್ಮನ ಅಭಿಷೇಕ ಹೊಂದಿದ ಮೇಲೆ ತಾಳ್ಮೆಯೂ, ದೀರ್ಘಶಾಂತಿ ಎಂಬ ಫಲಗಳನ್ನು ತನ್ನ ಜೀವಿತದಲ್ಲಿ ಪ್ರಕಟಿಸಲಾರಂಭಿಸಿದನು.

ಒಂದು ದಿನ ರೈಲ್ವೆ ನಿಲ್ದಾಣದಲ್ಲಿ ನಿಂತು ಅವನು ಪ್ರಸಂಗ ಮಾಡುತ್ತಿದ್ದಾಗ, ಒಬ್ಬ ಕುಡುಕ ಅವನನ್ನು ಲೇವಡಿಮಾಡಿ ಏನು ನೀನು ಗೂಳಿಯಂತೆ ಬೀದಿಯಲ್ಲಿ ಅರಚುತ್ತಿದ್ದೀಯ? ಎಂದು ದೂಷಣೆ ಮಾಡಲಾರಂಭಿಸಿದನು. ಆ ಸೇವಕನಿಗೆ ಮೊದಲಿನ ಕೋಪ ಇದ್ದಿದ್ದರೆ ಒಂದೇ ಏಟಿಗೆ ಆ ಕುಡುಕನನ್ನು ಕೊಂದುಬಿಡುತ್ತಿದ್ದನೇನೋ. ಆದರೆ ಅವನೋ ತಾಳ್ಮೆಯಿಂದ ದೇವರೇ, ಈ ನಿಂದೆಗಾಗಿ ನಿನಗೆ ಸ್ತೋತ್ರ ಎಂದು ಹೇಳಿ ಸುಮ್ಮನೆ ಹೋಗಿಬಿಟ್ಟನು. ಸ್ವಲ್ಪ ಹೊತ್ತಿನಲ್ಲಿ ಆ ಕುಡುಕನು ರೈಲನ್ನು ಹತ್ತಲು ಹೋಗಿ, ರೈಲಿಗೂ, ಪ್ಲಾಟ್‌ಫಾರಂಗೂ ನಡುವೆ ಬಿದ್ದುಬಿಟ್ಟನು. ಅಲ್ಲಿದ್ದವರು ಕಾಪಾಡಿ ಕಾಪಾಡಿ ಎಂದು ಒಟ್ಟಿಗೆ ಕೂಗಲಾರಂಭಿಸಿದರು. ಆದರೆ ಆ ಕುಡುಕನ ಸಹಾಯಕ್ಕೆ ಒಬ್ಬನಾದರೂ ಬರಲಿಲ್ಲ. ಆಗ ಆ ಪೈಲ್ವಾನನು ಜನರ ಕೂಗಾಟವನ್ನು ಕೇಳಿ ಓಡಿಬಂದು ಕೆಳಕ್ಕೆ ಇಳಿದು ಅವನನ್ನು ಎತ್ತಿದ್ದನು. ನಂತರ ಅವನನ್ನು ನೋಡಿ, "ನೀನು ನನ್ನನ್ನು ದಡಿಯ ಎಂದು ಬೈದೆ. ನಾನು ದಡಿಯನಾಗಿದ್ದದರಿಂದಲೇ ನಿನ್ನನ್ನು ಎತ್ತಲು ಸಾಧ್ಯವಾಯಿತು" ಎಂದು ಸಮಾಧಾನದಿಂದ ಹೇಳಿದನು. ಆ ಮಾತು ಕುಡುಕನ ಅಂತರ್ಯವನ್ನು ಕರಗಿಸಿತು. ಆ ಸೇವಕನ ಎರಡು ಕಾಲುಗಳನ್ನು ಹಿಡಿದುಕೊಂಡು ಅತ್ತನು. ಶಾಂತಗುಣ ಮನುಷ್ಯನ ಅಂತರ್ಯವನ್ನು ಎಷ್ಟಾಗಿ ಮಾರ್ಪಡಿಸುವುದಲ್ಲವೇ? ಹೇಗೆ ಈ ಶಾಂತಗುಣವನ್ನು ಪಡೆಯುವದು? 1. ಭಾವನೆಗಳನ್ನು ಅಧೀನದಲ್ಲಿಟ್ಟುಕೊಳ್ಳಬೇಕು. 2. ನಿಮ್ಮನ್ನು ನೀವು ಮೊದಲಿನವರಾಗಿ ಭಾವಿಸಬಾರದು. 3. ಇತರರ ಮೇಲೆ ಅಧಿಕಾರ ನಡೆಸುವ ಮನೋಭಾವ ನಿಮ್ಮಲ್ಲಿ ಇರಬಾರದು.

ದೇವಮಕ್ಕಳೇ, ಶಾಂತಗುಣ ದೇವರಿಗೆ ಮೆಚ್ಚಿಕೆಯಾದದ್ದು. ನಿಮ್ಮ ಸುತ್ತಲೂ ಇರುವವರಿಗೆ ಆಶೀರ್ವಾದ ತರುವಂಥದ್ದು. ಅದು ನಿಮ್ಮನ್ನು ಉನ್ನತಿಗೆ ತರುವದು.

*ನೆನಪಿಗೆ : ಮೃದುವಾದ ಪ್ರತ್ಯುತ್ತರವು ಸಿಟ್ಟನ್ನಾರಿಸುವದು. ಬಿರುನುಡಿಯು ಸಿಟ್ಟನ್ನೇರಿಸುವದು (ಜ್ಞಾನೋ.15:1).*

ನವೆಂಬರ್ 28

## ಶಮೆ ದಮೆ!

ಬೆಳಿಗ್ಗೆ : ಯೆಹೆ. 33,34
ಸಂಜೆ : 1 ಪೇತ್ರ. 5

"ಸಾಧುತ್ವ ಶಮೆ ದಮೆ ಇಂಥವುಗಳನ್ನು ಯಾವ ಧರ್ಮಶಾಸ್ತ್ರವೂ ಆಕ್ಷೇಪಿಸುವದಿಲ್ಲ" (ಗಲಾ. 5:22,23).

ದೇವರಾತ್ಮನ ಫಲಗಳಲ್ಲಿ ಶಮೆ ದಮೆ ಒಂಭತ್ತನೇ ಹಾಗೂ ಕಡೆಯ ಫಲವಾಗಿದೆ. ಆದರೆ ಇದು ಕಡೆಯದಲ್ಲ, ಇದುವೇ ಬಹಳ ಮುಖ್ಯವಾದದ್ದು, ತಲೆಯಾದದ್ದು. ಇದು ನಿಮ್ಮ ಆತ್ಮವನ್ನು ರಕ್ಷಿಸುವದು. ಎಲ್ಲಾ ಕೆಟ್ಟದ್ದಕ್ಕೂ ನಿಮ್ಮನ್ನು ದೂರ ಮಾಡುವದು. ಕೇವಲವಾದ ಪಾಪಕ್ಕೂ, ನರಕಕ್ಕೂ ತಪ್ಪಿಸಿ ರಕ್ಷಿಸುವಂಥದ್ದು.

ಶಮೆ ದಮೆ ಅಂದರೆ ಇಚ್ಛಾ ನಿಗ್ರಹಣ. ಅಂದರೆ ಮನಸ್ಸನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳುವದು ಅಥವಾ ಮನಸ್ಸನ್ನು ಸ್ಥಿಮಿತದಲ್ಲಿ ಇಟ್ಟುಕೊಳ್ಳುವದು ಎಂದು ಅರ್ಥ. ಎಲ್ಲಾ ಭಾವನೆಗಳಿಗೆ ಆಶೆಗಳಿಗೆ ಅನಿಸಿಕೆಗಳಿಗೆ ಒಂದು ಎಲ್ಲೆ ಉಂಟು. ಅಳತೆ ಮೀರಿದರೆ ಅಮೃತವೂ ವಿಷವಾಗುವದು" ಎಂದು ಹೇಳುವರು. ಎಲ್ಲದರಲ್ಲಿಯೂ ಒಂದು ಕಟ್ಟುಪಾಡು, ಇಚ್ಛೆಗಳನ್ನು ನಿಗ್ರಹಿಸುವ ಶಕ್ತಿ ಪ್ರತಿ ವಿಶ್ವಾಸಿಗೂ ಇರಬೇಕಾದ ಮುಖ್ಯವಾದ ಗುಣ. ಊಟ ಮಾಡುವದು ಒಳ್ಳೆಯದು. ಆದರೆ ಆಶೆಗೆ ಸ್ಥಳ ಕೊಟ್ಟು ಅತಿಭೋಜನಕ್ಕೆ ಆಳಾಗುವದು ಆಪತ್ತು. ಉಡುಗೆ ತೊಡುವದು ಒಳ್ಳೆಯದು. ಆದರೆ ಇತರರನ್ನು ಉದ್ರೇಕಗೊಳಿಸುವಂತೆ ಅಲಂಕಾರ ಮಾಡಿಕೊಳ್ಳುವದು ತಪ್ಪು. ಮಾತಾಡುವದು ಒಳ್ಳೆಯದು. ಆದರೆ ನಾಲಿಗೆಯನ್ನು ಹತೋಟಿಯಲ್ಲಿಟ್ಟುಕೊಳ್ಳದೆ, ಇತರರನ್ನು ವಶೀಕರಿಸುವಂತೆ ಮಾತನಾಡುವದು, ಮುಖಸ್ತುತಿ ಮಾತನಾಡುವದು ತಪ್ಪು. ಇಚ್ಛಾನಿಗ್ರಹಣ ನಿಮ್ಮ ಜೀವಿತದ ಎಲ್ಲಾ ಭಾಗದಲ್ಲೂ ಕಾಣಲ್ಪಡಲಿ. ನೀವು ಜಯಗಳಿಸುವದು, ಸೋಲನ್ನು ಅನುಭವಿಸುವದು ನಿಮ್ಮ ಕೈಯಲ್ಲೇ ಇರುವದು. ಗೆಲುವೋ, ಸೋಲೋ, ಭಾವನೆಗಳನ್ನು ಅಡಗಿಸಿ ಆಳುವವನೇ ಜೀವನದಲ್ಲಿ ಪರಿಶುದ್ಧತೆಯನ್ನು ಪಡೆದುಕೊಳ್ಳುವನು.

ದೇವಮಕ್ಕಳೇ, ನಿಮ್ಮ ಜೀವಿತದಲ್ಲಿ ಎಲ್ಲಾ ಭಾಗಗಳಲ್ಲೂ ನೀವು ಜಯಶಾಲಿಗಳಾಗಿ ಕಾಣಲ್ಪಡಬೇಕೆಂದು ಬಯಸುವಿರಾದರೆ, ಇಚ್ಛೆಗಳನ್ನು ಅಡಗಿಸಿ ನಿಮ್ಮ ಮೇಲೆ ನೀವು ಆಳ್ವಿಕೆ ನಡೆಸಿರಿ. ಪವಿತ್ರಾತ್ಮನು ನಿಮಗೆ ಸಹಾಯ ಮಾಡುವನು. ಉನ್ನತದಿಂದ ಬರುವ ಬಲದಿಂದ ಸೈತಾನನು ತಂದುಹಾಕುವ ಇಚ್ಛೆಗಳನ್ನು ಜಯಿಸಿರಿ. ಕಲ್ವಾರಿ ಶಿಲುಬೆಯನ್ನು ಅಧಿಕವಾಗಿ ಧ್ಯಾನಿಸಿ ಜಯಶಾಲಿಗಳಾಗಿರಿ.

*ನೆನಪಿಗೆ : ಕ್ರಿಸ್ತೇಸುವಿನವರು ತಮ್ಮ ಶರೀರಭಾವವನ್ನು ಅದರ ವಿಷಯಾಭಿಲಾಷೆ ಸ್ವೇಚ್ಛಾಭಿಲಾಷೆ ಸಹಿತ ಶಿಲುಬೆಗೆ ಹಾಕಿದವರು (ಗಲಾತ್ಯ. 5:24).*



ನವೆಂಬರ್ 29

## ಮೊದಲ ಪಾಪ!

ಬೆಳಿಗ್ಗೆ : ಯೆಹೆ. 35,36
ಸಂಜೆ : 2 ಪೇತ್ರ. 1

"ಸ್ತ್ರೀಯು ಆ ಮರದ ಹಣ್ಣು ತಿನ್ನುವದಕ್ಕೆ ಉತ್ತಮವಾಗಿಯೂ, ನೋಡುವದಕ್ಕೆ ರಮ್ಯವಾಗಿಯೂ, ಜ್ಞಾನೋದಯಕ್ಕೆ ಅಪೇಕ್ಷಿಸತಕ್ಕದ್ದಾಗಿಯೂ ಇದೆ ಎಂದು ತಿಳಿದಳು" (ಆದಿ.3:6).

ಈ ಪ್ರಪಂಚಕ್ಕೆ ಮೊದಲ ಪಾಪವು ಇಚ್ಛಾನಿಗ್ರಹಣ ಇಲ್ಲದ್ದರಿಂದ ಪ್ರವೇಶಿಸಿತು. ದೇವರು ತಿನ್ನಬಾರದೆಂದು ಹೇಳಿದ ಹಣ್ಣನ್ನು ಹವ್ವಳು ಕಿತ್ತಾಗ, ಇಚ್ಛೆ ಅವಳ ಅಂತರ್ಯದೊಳಗೆ ನುಸುಳಿತು. ಆ ವೃಕ್ಷದ ಹಣ್ಣು ತಿನ್ನಲು ಉತ್ತಮವಾಗಿಯೂ, ನೋಟಕ್ಕೆ ರಮ್ಯವಾಗಿಯೂ, ಜ್ಞಾನೋದಯಕ್ಕೆ ಅಪೇಕ್ಷಿಸತಕ್ಕದ್ದಾಗಿದೆ ಎಂದು ಕಂಡಳು. ಅದುವೇ ಕಣ್ಣಿನಾಶೆ.

ಎರಡನೆಯದು ಶರೀರದಾಶೆ. ಬದುಕು ಬಾಳಿನ ಢಂಬ. ಸ್ತ್ರೀಯ ಮನಸ್ಸು ಅದನ್ನು ಅಪೇಕ್ಷಿಸಿತು. ಅವಳ ಶರೀರ ಆ ಹಣ್ಣನ್ನು ಬಯಸಿತು. ಆದ್ದರಿಂದಲೇ ಆ ಹಣ್ಣನ್ನು ಕಿತ್ತು ತಿಂದಳು. ಮಾತ್ರವಲ್ಲ, ತನ್ನ ಗಂಡನಾದ ಆದಾಮನೂ ಪಾಪದಲ್ಲಿ ಭಾಗಿಯಾಗಬೇಕೆಂದು ಬಯಸಿದಳು. ತಾನೂ ಕೆಟ್ಟು ತನ್ನ ಗಂಡನನ್ನೂ ಕೆಡಿಸಿದಳು. ಮೊದಲೇ ಪಾಪವು ಬೇಡವೆಂಬುದನ್ನು ದೃಢವಾದ ಮನಸ್ಸಿನಿಂದ ತೀರ್ಮಾನಿಸಿದರೆ ಪಾಪಕ್ಕೂ ಶಾಪಕ್ಕೂ ತಪ್ಪಿಸಿಕೊಳ್ಳಬಹುದು. ಚಪಲಚಿತ್ತರು, ಚಂಚಲ ಮನಸ್ಸಿನವರು ಎರಡು ಮನಸ್ಸಿನಿಂದ ಕುಂಟುತ್ತಾ ನಡೆಯುವರು. ಬೆಚ್ಚಗೂ ಇಲ್ಲದೆ ತಣ್ಣಗೂ ಇಲ್ಲದೆ ತಡವರಿಸುವರು. ಸೈತಾನನು ಹಲವು ರೀತಿಯ ಆಶೆಗಳನ್ನೂ, ಇಚ್ಛೆಗಳನ್ನೂ ಮನಸ್ಸಿನಲ್ಲಿ ತಂದುಹಾಕಿ ಜನರ ಅಂತರ್ಯವನ್ನು ಒಂದು ಯುದ್ಧರಂಗವನ್ನಾಗಿಸುವನು. ಈ ಯುದ್ಧದಲ್ಲಿ ನೀವು ಜಯಗಳಿಸಲು ನೀವು ಈ ಪ್ರಪಂಚಕ್ಕೆ ತಕ್ಕ ವೇಷವನ್ನು ಧರಿಸಿಕೊಳ್ಳದಿರಿ. ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿರಿ (ರೋಮಾ. 12:2) ಎಂದು ಅಪೊ. ಪೌಲನು ಹೇಳುತ್ತಾನೆ. ಪಾಪದ ಚಿಂತನೆಗಳನ್ನು ಮೊಳಕೆಯಲ್ಲೇ ಚಿವುಟಿ ಹಾಕದಿದ್ದರೆ, ಮುಂದೆ ಆ ಚಿಕ್ಕ ಸಸಿ ಬೆಳೆದು ಮರವಾಗಿ ವೇದನೆಯನ್ನು ತರುವದು.

ದೇವಮಕ್ಕಳೇ, ನಿಮ್ಮ ಎಲ್ಲಾ ಚಿಂತನೆಗಳನ್ನು ದೇವರ ಆಳ್ವಿಕೆಯೊಳಗೆ ಅಧೀನಪಡಿಸಿರಿ. ದೇವರ ಸಹಾಯದಿಂದ ಪವಿತ್ರತೆಯನ್ನು ಕಾಪಾಡಿಕೊಂಡು ಪರಿಶುದ್ಧರಾಗಿ ಕಾಣಲ್ಪಡಿರಿ. ನಿಮ್ಮ ಚಿಂತನೆಗಳಲ್ಲೂ, ಅಂತರ್ಯದಲ್ಲೂ ಇಚ್ಛಾನಿಗ್ರಹಣ ಉಳ್ಳವರಾಗಿರಬೇಕೆಂದು ತೀರ್ಮಾನಿಸಿ. ಆಗ ಉತ್ತಮವಾದ ದೇವಜನರಾಗಿ ಕಾಣಲ್ಪಡುವಿರಿ.

*ನೆನಪಿಗೆ : "ದೀರ್ಘಶಾಂತನು ಶೂರನಿಗಿಂತಲೂ ಶ್ರೇಷ್ಠ. ತನ್ನನ್ನು ಆಳುವವನು ಪಟ್ಟಣವನ್ನು ಗೆದ್ದವನಿಗಿಂತಲೂ ಬಲಿಷ್ಠ" (ಜ್ಞಾನೋ. 16:32).*